(Ahmadi Awr Ghayr Ahmadi Mein Kya Farq Hai?)

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ

# ಸ್ಥಾಪನೆಯ ಉದ್ದೇಶ.

ಭಾಷಣ

ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್(ಅ)

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪನೆಯ ಉದ್ದೇಶ

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪನೆಯ ಉದ್ದೇಶ

*

ಗ್ರಂಥಕರ್ತ:

**ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್**(ಅ)

*

ಅನುವಾದಕ:

**ಯಂ. ಉಬೈದುಲ್ಲಾ**

*

ಪ್ರಕಾಶಕರು:

**ನಝ಼ಾರತ್ ನಶ್ರೊ ಇಶಾಅತ್,**

ಭಾರತ

**Ahmadiya Muslim Jamathina Sthapaneya Uddhesha**

(Ahmadiyaru matthu ahmadiyetarara naduve iruva vyatyasa)

Kannada rendering of Urdu work:

احمدی اور غیر احمدی میں کیا فرق ہے؟

***'Ahmadi aur Ghair Ahmadi me Kya Faraq he'***


| | |
|---|---|
| Author : | Hazrat Mirza Ghulam Ahmad[a] |
| Translated by : | M. Ubeidullah, M.A., L.L.B. |
| Reviewed by : | Muhammad Yusuf, Mangalore., |
| | Moulavi Inamullah Mangaluru. |
| Typing & Setting | U. Basheer Ahmad, Manjeshwar ., |
| | Inamullah Mangaluru. |
| Published by : | Nazarat Nashro - Isha'at, Qadian, |
| | Distt. Gurdaspur, Punjab -143516 |
| First Edition : | 2025 |
| Copies : | 300 |
| Printed at : | Fazl-e-Umar Printing Press, Qadian |



ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮ್

ವಾಗ್ದತ್ತ ಮಹ್‌ದೀ ಮತ್ತು ಮಸೀಹ್

# ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್(ಅ)

ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯಾಗಿ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್ ಅಲೈಹಿಸ್ಸಲಾಮ್ ಕ್ರಿಸ್ತಶಕ 1835ರಲ್ಲಿ ಭಾರತದ ಪಂಜಾಬಿನ ಒಂದು ಗ್ರಾಮವಾದ ಖ಼ಾದಿಯಾನಿನಲ್ಲಿ ಜನಿಸಿದರು. ಅವರು ಆರಂಭ ಕಾಲದಿಂದಲೇ ಅಲ್ಲಾಹನ ಆರಾಧನೆ, ಪ್ರಾರ್ಥನೆಗಳಲ್ಲೂ ಪವಿತ್ರ ಖ಼ುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿಯೂ ಮಗ್ನರಾಗಿದ್ದರು. ಆ ಕಾಲದಲ್ಲಿ ಇಸ್ಲಾಮ್ ಧರ್ಮ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣಗಳಿಗೆ ಗುರಿಯಾಗಿತ್ತು. ಇಸ್ಲಾಮ್ ಧರ್ಮದ ಶೋಚನೀಯ ಸ್ಥಿತಿಯನ್ನು ಕಂಡು ಅವರಿಗೆ ತೀವ್ರವಾಗಿ ದುಃಖವಾಗುತ್ತಿತ್ತು. ಇಸ್ಲಾಮ್ ಧರ್ಮದ ವಿರುದ್ಧ ಅನ್ಯ ಧರ್ಮದವರ ಆಕ್ರಮಣಗಳನ್ನು ಪ್ರತಿರೋಧಿಸಲು ಮತ್ತು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅವುಗಳ ವಾಸ್ತವಿಕ ರೂಪದಲ್ಲಿ ಲೋಕದ ಮುಂದೆ ಪ್ರಕಟಿಸಲು ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 90ಕ್ಕಿಂತ ಹೆಚ್ಚು ಗ್ರಂಥಗಳನ್ನು ಮತ್ತು ಸಾವಿರಾರು ಪತ್ರಗಳನ್ನು ಬರೆದರು ಹಾಗು ಅನೇಕ ಧಾರ್ಮಿಕ ಸಂವಾದಗಳಲ್ಲಿ ಅನ್ಯಧರ್ಮದವರನ್ನು ಎದುರಿಸಿದರು. ಸೃಷ್ಟಿಕರ್ತನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಮನುಷ್ಯರಿಗೆ ದೊರಕಿಸಿಕೊಡಬಲ್ಲ ಜೀವಂತ ಧರ್ಮ ಇಸ್ಲಾಮ್ ಎಂದೂ ಆ ಧರ್ಮವನ್ನು ಅನುಸರಿಸುವ ಮೂಲಕ ಮನುಷ್ಯನಿಗೆ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ ಲಭಿಸುವುದು ಎಂದೂ ಅವರು ಪ್ರತಿಪಾದಿಸಿದರು.

ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸತ್ಯ ಸ್ವಪ್ನಗಳ, ದಿವ್ಯದರ್ಶನಗಳ ಮತ್ತು ದೈವಿಕ ಸಂಬೋಧನೆಗಳ ಭಾಗ್ಯ ಲಭಿಸಿತ್ತು. 1889ರಲ್ಲಿ ದೈವಿಕ ನಿರ್ದೇಶನದ ಪ್ರಕಾರ ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಜಮಾಅತನ್ನು ಸ್ಥಾಪಿಸಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲು ಪ್ರಾರಂಭಿಸಿದರು. ದಿನ ಕಳೆದಂತೆ ಅವರಿಗೆ ದೈವಿಕ ಸಂಬೋಧನೆಗಳು ಸಹ ವರ್ಧಿಸುತ್ತಾ ಇದ್ದುವು. ಲೋಕದ ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳಲ್ಲಿ ಭವಿಷ್ಯ ನುಡಿಯಲಾದ ಅಂತಿಮ ಕಾಲಘಟ್ಟದ ಧರ್ಮಸುಧಾರಕ ನಾನೇ ಆಗಿರುವೆನು ಎಂದು ಅವರು ದೇವಾಜ್ಞೆ ಪ್ರಕಾರ ಘೋಷಿಸಿದರು. ಹಝ಼್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವರೆಂದು ಶುಭವಾರ್ತೆ ನೀಡಿದ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಸಹ ತಾನೆಂದು ಅವರು ವಾದಿಸಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ ಲೋಕದ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

1908ರಲ್ಲಿ ಹಝ಼್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಪವಿತ್ರ ಖ಼ುರ್‌ಆನಿನ ಆದೇಶಗಳ ಮತ್ತು ಹಝ಼್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳ ಪ್ರಕಾರ ಅವರ ಆಗಮನೋದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸಲು ಖ಼ಿಲಾಫತ್ ವ್ಯವಸ್ಥೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಹಝ಼್ರತ್ ಮಿರ್ಝ಼ಾ ಮಸ್‌ರೂರ್ ಅಹ್ಮದ್(ಅಯ್ಯದಹುಲ್ಲಾಹ್) ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೇ ಖಲೀಫರಾಗಿರುವರು.

# ಪ್ರಕಾಶಕರ ನುಡಿ

ಹಝ್ರತ್ ಈಸಾ(ಅ) ದೇಹ ಸಮೇತ ಜೀವಂತವಾಗಿ ಆಕಾಶಕ್ಕೆ ಏರಿ ಹೋದರೆಂದು ಇತರ ಮುಸ್ಲಿಮರು ನಂಬುತ್ತಾರೆ. ಅವರು ಮೃತಪಟ್ಟಿರುವರು ಎಂದು ಅಹ್ಮದಿಯರು ನಂಬುತ್ತಾರೆ. ಇದರ ಹೊರತು ಬೇರೆ ಯಾವುದೇ ವ್ಯತ್ಯಾಸ ಅಹ್ಮದಿಯರು ಮತ್ತು ಅಹ್ಮದಿಯೇತರರ ನಡುವೆ ಇಲ್ಲವೆಂದು ಒಂದು ಸಭೆಯಲ್ಲಿ ಒಬ್ಬ ಭಾಷಣಗಾರ ಹೇಳಿದರು. ಈ ಸಭೆಯನ್ನು 1905 ಡಿಸೆಂಬರ್ ದಿನಾಂಕ 26ರಂದು ಬೆಳಿಗ್ಗೆ ಹೊಸ ಅತಿಥಿ ಗೃಹದ ದೊಡ್ಡ ಹಾಲಿನಲ್ಲಿ ಮದರಸ ತಾಲೀಮುಲ್ ಇಸ್ಲಾಮ್ ಅಭಿವೃದ್ಧಿಗೊಳಿಸುವ ಬಗ್ಗೆ ಸಮಾಲೋಚಿಸಲು ಅಹ್ಮದಿಯರು ನಡೆಸಿದ್ದರು. ಆ ಭಾಷಣಗಾರರ ಈ ಹೇಳಿಕೆಯಿಂದ ಅಹ್ಮದಿಯಾ ಜಮಾಅತಿನ ಸ್ಥಾಪನೆಯ ಉದ್ದೇಶವೇನೆಂದು ಸ್ಪಷ್ಟವಾಗುತ್ತಿರಲಿಲ್ಲ. ಮರುದಿನ ಡಿಸೆಂಬರ್ ದಿನಾಂಕ 27ರಂದು ಹಝ್ರತ್ ಮಸೀಹ್ ಮೌಊದ್(ಅ) ತನ್ನ ನಿಯೋಗದ ಮೂಲ ಉದ್ದೇಶವೇನೆಂದು ಅದೇ ಸಮ್ಮೇಳನದಲ್ಲಿ ವಿವರಿಸಿದ್ದರು. ಉರ್ದು ಭಾಷೆಯಲ್ಲಿ ಮಾಡಲಾದ ಈ ಭಾಷಣದ ಕನ್ನಡ ಅನುವಾದವನ್ನು ಬಹಳ ಪರಿಶ್ರಮದಿಂದ ಸನ್ಮಾನ್ಯ ಎಂ. ಉಬೈದುಲ್ಲಾಹ್ ಸಾಹಿಬ್‌ರು ಮಾಡಿರುವರು. ಸನ್ಮಾನ್ಯ ಮುಹಮ್ಮದ್ ಯೂಸುಫ್ ಸಾಹಿಬ್ ಮತ್ತು ಮೌಲವಿ ಇನಾಮುಲ್ಲಾಹ್ ಸಾಹಿಬ್‌ರು ಈ ತರ್ಜುಮೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಅಗತ್ಯವಾದ ತಿದ್ದುಪಡಿಯನ್ನು ಮಾಡಿದ್ದಾರೆ. ಮಡಿಕೇರಿಯ ಸನ್ಮಾನ್ಯ ಗ಼ುಲಾಂ ಅಹ್ಮದ್ ಸಾಹಿಬ್‌ರು ಸಹ ಅದನ್ನು ಓದಿ ಅನುವಾದದಲ್ಲಿ ಕೆಲವು ಸುಧಾರಣೆಗಳನ್ನು ಮಾಡಿರುವರು. ಎಲ್ಲರಿಗೂ ಅಲ್ಲಾಹನು ತಕ್ಕುದಾದ ಪ್ರತಿಫಲವನ್ನು ನೀಡಲಿ ಹಾಗೂ ಹಝ್ರತ್ ಮಸೀಹ್ ಮೌಊದ್‌ರ(ಅ) ನಿಯೋಗದ ಮೂಲಕ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದ ಉದ್ದೇಶಗಳೇನು ಎಂದು ಈ ಕಿರುಪುಸ್ತಕದ ಅಧ್ಯಯನದ ಮೂಲಕ ಓದುಗರಿಗೆ ಮನವರಿಕೆಯಾಗಲಿ. ಆಮೀನ್.

## ಸೂಚನೆ

ಈ ಭಾಷಣವನ್ನು ಫೆಬ್ರವರಿ 17, 1906ರಿಂದ ಜೂನ್ 17, 1906 ತನಕದ ಅಲ್‌ಹಕಮ್ ಪತ್ರಿಕೆಯಿಂದ ಉಲ್ಲೇಖಿಸಿ ಪ್ರಕಟಿಸಲಾಗುತ್ತಿದೆ. ಕೆಲವೆಡೆ ಇರುವ ಟಿಪ್ಪಣಿಗಳನ್ನು ಜನವರಿ 26 1906ರಿಂದ ಫೆಬ್ರವರಿ 23 ತನಕದ ಬದ್ರ್ ಪತ್ರಿಕೆಯಿಂದ ಉಲ್ಲೇಖಿಸಲಾಗಿದೆ. (ಪ್ರಕಾಶಕರು)

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

## ವಾಗ್ದತ್ತ ಮಸೀಹರ ಆಗಮನ ಮತ್ತು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪನೆಯ ಉದ್ದೇಶ.

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗ಼ುಲಾಂ ಅಹ್ಮದ್[ಅ] (ವಾಗ್ದತ್ತ ಮಹ್‌ದೀ ಮತ್ತು ಮಸೀಹ್) 1905 ಡಿಸೆಂಬರ್ ದಿನಾಂಕ 27ರಂದು ಖಾದಿಯಾನಿನ ಅಖ್ಸಾ ಮಸೀದಿಯಲ್ಲಿ ಮಧ್ಯಾಹ್ನ ನಮಾಝಿನ ನಂತರ ನೀಡಿದ ಭಾಷಣ.

1905 ಡಿಸೆಂಬರ್ ದಿನಾಂಕ 26ರಂದು ಬೆಳಿಗ್ಗೆ ಹೊಸ ಅತಿಥಿ ಗೃಹದ ದೊಡ್ಡ ಹಾಲಿನಲ್ಲಿ ಮದರಸ ತಾಲೀಮುಲ್ ಇಸ್ಲಾಮ್ ಅಭಿವೃದ್ಧಿಗೊಳಿಸುವ ಬಗ್ಗೆ ಸಮಾಲೋಚಿಸಲು ಅಹ್ಮದಿಯರ ಒಂದು ದೊಡ್ಡ ಸಭೆ ಜರಗಿಸಲಾಗಿತ್ತು. ಆ ಸಭೆಯಲ್ಲಿ ಅನೇಕ ಅಹ್ಮದಿ ಸಹೋದರರು ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಈ ಭಾಷಣಗಾರರಲ್ಲಿ ಒಬ್ಬರು ಹೀಗೆ ಹೇಳಿದರು: ನನಗೆ ಮನವರಿಕೆ ಆದ ಮಟ್ಟಿಗೆ ಹಝ್‌ರತ್ ಮಸೀಹ್ ಮೌಊದ್‌ರ[ಅ] ಜಮಾಅತ್ ಮತ್ತು ಇತರರ ನಡುವೆ ಇರುವ ಕೇವಲ ವ್ಯತ್ಯಾಸವೇನೆಂದರೆ, ಹಝ್‌ರತ್ ಈಸಾ[ಅ] ದೇಹ ಸಮೇತ ಜೀವಂತವಾಗಿ ಆಕಾಶಕ್ಕೆ ಏರಿ ಹೋದರೆಂದು ಇತರ ಮುಸ್ಲಿಮರು ನಂಬುತ್ತಾರೆ. ಆದರೆ ಅವರು ಮೃತಪಟ್ಟಿರುವರು ಎಂದು ನಾವು ದೃಢವಾಗಿ ನಂಬುತ್ತೇವೆ. ಇದರ ಹೊರತು ಬೇರೆ ಯಾವುದೇ ಹೊಸ ವಿಷಯ ಸೈದ್ಧಾಂತಿಕವಾಗಿ ವಿವಾದಾರ್ಹವಾಗಿಲ್ಲ.

ಈ ಹೇಳಿಕೆಯಿಂದ ಅಹ್ಮದಿಯಾ ಜಮಾಅತಿನ ಸ್ಥಾಪನೆಯ ಉದ್ದೇಶವೇನೆಂದು ಪರಿಪೂರ್ಣವಾಗಿ ಸ್ಪಷ್ಟವಾಗುವುದಿಲ್ಲವಾದುದರಿಂದಲೂ ಅದರ ಸ್ಥಾಪನೆಯ ಉದ್ದೇಶ ಬಲಹೀನವೂ ಅಸ್ಪಷ್ಟವೂ ಆಗಿ ಸೂಚಿಸಲ್ಪಟ್ಟುದರಿಂದಲೂ ಈ ಅಭಿಪ್ರಾಯವನ್ನು ಸರಿಪಡಿಸುವುದು ಆವಶ್ಯಕವಾಗಿತ್ತು. ಅಂದು ಸಾಕಷ್ಟು ಸಮಯವಿರಲಿಲ್ಲ. ಆದುದರಿಂದ ಡಿಸೆಂಬರ್ ದಿನಾಂಕ 27ರಂದು ಹಝ್‌ರತ್ ಮಸೀಹ್ ಮೌಊದ್[ಅ] ತನ್ನ ನಿಯೋಗದ ಮೂಲ ಉದ್ದೇಶವೇನೆಂದು ವಿವರಿಸಿದರು. ಅವರ ಆರೋಗ್ಯ ಚೆನ್ನಾಗಿರದಿದ್ದರೂ ಅಲ್ಲಾಹನ ಅನುಗ್ರಹದಿಂದ ಅವರು ಈ ಭಾಷಣ ಮಾಡಿದರು. **(ಸಂಪಾದಕ "ಅಲ್ ಹಕಮ್")**

ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು:

ನನ್ನ ಆರೋಗ್ಯ ಈಗ ಚೆನ್ನಾಗಿಲ್ಲ, ಆದ್ದರಿಂದ ನಾನು ಹೆಚ್ಚು ಹೊತ್ತು ಮಾತನಾಡಲಾರೆ. ಆದರೆ ಒಂದು ಮುಖ್ಯ ವಿಷಯವನ್ನು ವಿವರಿಸುವುದು ಅಗತ್ಯವೆಂದು ಭಾವಿಸುತ್ತೇನೆ. ನಿನ್ನೆ ಒಬ್ಬರು ಹೀಗೆ ಹೇಳಿದ್ದಾಗಿ ನಾನು ಆಲಿಸಿದೆ: "ನಮ್ಮ ಮತ್ತು ನಮ್ಮನ್ನು ವಿರೋಧಿಸುವ ಮುಸ್ಲಿಮರ ನಡುವೆ ಇರುವ ಏಕಮಾತ್ರ ವ್ಯತ್ಯಾಸ ಹಝ್ರತ್ ಈಸಾ ಮಸೀಹರ(ಅ) ಜೀವಿತ ಮತ್ತು ಮರಣದ ವಿಷಯದಲ್ಲಾಗಿದೆ. ಈ ಒಂದು ವ್ಯತ್ಯಾಸವನ್ನು ಬಿಟ್ಟರೆ ನಮ್ಮ ವಿರೋಧಿಗಳ ಹೆಜ್ಜೆಯೂ ಸತ್ಯದ ಮೇಲಿದೆ. ಎಂದರೆ ನಮಾಝ್, ಉಪವಾಸ ಮತ್ತು ಮುಸ್ಲಿಮರ ಇತರ ಕರ್ಮಗಳನ್ನು ಅವರು ಅನುಷ್ಠಿಸುತ್ತಾ ಇದ್ದಾರೆ. ಕೇವಲ ಹಝ್ರತ್ ಈಸಾ ಮಸೀಹರ(ಅ) ಮೃತ್ಯುವಿನ ಬಗ್ಗೆ ಒಂದು ತಪ್ಪು ಉಳಿದಿತ್ತು. ಇದನ್ನು ನಿವಾರಿಸಲು ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದ್ದಾನೆ. ಈ ಹೇಳಿಕೆ ಸರಿಯಾದುದಲ್ಲ. (ಹಝ್ರತ್ ಈಸಾರ(ಅ) ಮೃತ್ಯುವಿನ ಬಗ್ಗೆಗಿನ) ತಪ್ಪುಗ್ರಹಿಕೆ ಬಹಳ ಕೆಟ್ಟದಾಗಿ ತಲೆದೋರಿದೆ ಎಂಬುದು ಸತ್ಯವೇ ಆಗಿದೆ. ಆದರೆ ನನ್ನ ಆಗಮನ ಕೇವಲ ಈ ತಪ್ಪನ್ನು ನಿವಾರಿಸಲಿಕ್ಕೋಸ್ಕರವಾಗಿದೆ ಎಂದೂ ಸುಧಾರಣೆ ಮಾಡಬೇಕಾದ ಆವಶ್ಯಕತೆ ಇರುವ ಯಾವುದೇ ಕೆಡುಕು ಮುಸ್ಲಿಮರಲ್ಲಿ ತಲೆದೋರಿಲ್ಲವೆಂದೂ ಅವರು ನೇರ ಮಾರ್ಗದಲ್ಲಿದ್ದಾರೆ ಎಂದೂ ಯಾರಾದರೂ ಯೋಚಿಸುವುದಾದರೆ ಈ ಯೋಚನೆ ತಪ್ಪಾಗಿದೆ. ನನ್ನ ಅಭಿಪ್ರಾಯ ಪ್ರಕಾರ ಈಸಾ ಮಸೀಹರ(ಅ) ಜೀವನ ಅಥವಾ ಮರಣದ ಬಗ್ಗೆ ತಪ್ಪುಗ್ರಹಿಕೆಯನ್ನು ನೀಗಿಸಲು ಮಾತ್ರ ಅಲ್ಲಾಹನು ಇಷ್ಟು ದೊಡ್ಡ ಜಮಾಅತನ್ನು ಸ್ಥಾಪಿಸುವ ಮತ್ತು ಒಬ್ಬರನ್ನು ಲೋಕಕ್ಕೆ ಕಳುಹಿಸುವ ಅಗತ್ಯವಿಲ್ಲ. ಸತ್ಯದಲ್ಲಿ ಲೋಕದಲ್ಲಿ ಅಂಧಕಾರ ಕವಿದಿದೆ ಮತ್ತು ಭೂಮಿ ಶಪಿಸಲ್ಪಟ್ಟಿದೆ. ಈ ಕಾರಣದೊಂದಿಗೆ ನನ್ನ ಆಗಮನದ ಮಹತ್ವಪೂರ್ಣ ಉದ್ದೇಶವನ್ನು ಅಲ್ಲಾಹನು ಸ್ಪಷ್ಟಪಡಿಸಿದ್ದಾನೆ. ಹಝ್ರತ್ ಈಸಾ ಮಸೀಹರ(ಅ) ಜೀವಿತ ಮತ್ತು ಮರಣದ ಬಗ್ಗೆ ಇರುವ ತಪ್ಪಾದ ನಂಬಿಕೆ ಹೊಸದಾಗಿ ಇಂದು ಪ್ರಾರಂಭವಾದದ್ದಲ್ಲ. ಬದಲಾಗಿ ಹಝ್ರತ್ ಪೈಗಂಬರ್(ಸ) ನಿಧನ ಹೊಂದಿ ಸ್ವಲ್ಪಕಾಲದ ನಂತರ ಈ ತಪ್ಪು ನಂಬಿಕೆ ಉಂಟಾಗಿತ್ತು. ಅಲ್ಲಾಹನ ವಿಶಿಷ್ಟ ದಾಸರು, ಸಂತರು, ಸಾತ್ವಿಕರು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಿದವರು ಆಗಮಿಸುತ್ತಿದ್ದರೂ ಜನರು ಈ ತಪ್ಪಾದ ನಂಬಿಕೆಯಲ್ಲಿ ಸಿಲುಕಿಕೊಂಡಿದ್ದರು. ಈ ತಪ್ಪನ್ನು ನಿವಾರಿಸುವುದು ಮಾತ್ರ ಉದ್ದೇಶವಾಗಿದ್ದರೆ ಅಲ್ಲಾಹನು ಆ ಕಾಲದಲ್ಲಿ ಈ ತಪ್ಪನ್ನು ನಿವಾರಿಸುತ್ತಿದ್ದನು.

ಆದರೆ ಅವನು ಹಾಗೆ ಮಾಡಲಿಲ್ಲ. ಈ ತಪ್ಪು ನಂಬಿಕೆ ಜಾರಿಯಲ್ಲಿತ್ತು. ತದನಂತರ ನಮ್ಮ ಕಾಲಘಟ್ಟ ಪ್ರಾರಂಭವಾಯಿತು. ಈಗಲೂ ಸಂಗತಿ ಇಷ್ಟು ಮಾತ್ರವಾಗಿರುತ್ತಿದ್ದರೆ ಅದಕ್ಕಾಗಿ ಅಲ್ಲಾಹನು ಒಂದು ಜಮಾಅತನ್ನು ಸ್ಥಾಪಿಸುತ್ತಿರಲಿಲ್ಲ. ಏಕೆಂದರೆ ಈಸಾ ಮಸೀಹರು[ಅ] ಮೃತರಾಗಿದ್ದರು ಎಂಬುದು ಹಿಂದೆ ಯಾರೂ ಅಂಗೀಕರಿಸದಂತಹ ಒಂದು ವಿಷಯವೂ ಆಗಿರಲಿಲ್ಲ. ಹಿಂದೆ ಕೂಡ ವಿಶಿಷ್ಟ ದಾಸರಲ್ಲಿ ಅನೇಕರಿಗೆ ಅಲ್ಲಾಹನು ಈ ವಿಷಯವನ್ನು ಸ್ಪಷ್ಟಪಡಿಸಿ ಕೊಟ್ಟಿದ್ದನು. ಆದುದರಿಂದ ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿದ ಉದ್ದೇಶ ಬೇರೆಯೇ ಆಗಿದೆ. ಈಸಾ ಮಸೀಹರ[ಅ] ಜೀವಿತ ಮತ್ತು ಮರಣಕ್ಕೆ ಸಂಬಂಧಿಸಿದ ತಪ್ಪಾದ ನಂಬಿಕೆಯನ್ನು ದೂರಸರಿಸುವುದು ಕೂಡ ಈ ಜಮಾಅತಿನ ಬಹಳ ದೊಡ್ಡ ಉದ್ದೇಶವಾಗಿತ್ತು ಎನ್ನುವುದು ಸತ್ಯವೇ ಆಗಿದೆ. ಆದರೆ ಇಷ್ಟು ಮಾತ್ರಕ್ಕಾಗಿ ಅಲ್ಲಾಹನು ನನ್ನನ್ನು ನಿಯೋಜಿಸಿಲ್ಲ. ಬದಲಾಗಿ ಬೇರೆ ಅನೇಕ ಸಂಗತಿಗಳು ಇದ್ದುವು. ಅವುಗಳನ್ನು ಸುಧಾರಣೆ ಮಾಡಲು ಅಲ್ಲಾಹನು ಒಂದು ಜಮಾಅತನ್ನು ಸ್ಥಾಪಿಸಿ ಒಬ್ಬ ವ್ಯಕ್ತಿಯನ್ನು ನಿಯೋಜಿಸದೆ ಇರುತ್ತಿದ್ದರೆ ಲೋಕ ನಾಶವಾಗುತ್ತಿತ್ತು ಮತ್ತು ಇಸ್ಲಾಮಿನ ಹೆಸರು ಕೂಡ ಅಳಿದು ಹೋಗಬಹುದಾಗಿತ್ತು. ಆದುದರಿಂದ ನನ್ನನ್ನು ಅಲ್ಲಾಹನು ನಿಯೋಜಿಸಿದನು.

ಈಸಾ ಮಸೀಹರ[ಅ] ಮೃತ್ಯುವಿನೊಂದಿಗೆ ಇಸ್ಲಾಮಿನ ಜೀವಿತಕ್ಕೆ ಬಹಳ ಹಿರಿದಾದ ಸಂಬಂಧವಿದೆ. ಈಸಾ ಮಸೀಹರ[ಅ] ಮೃತ್ಯುವಿನ ವಿಷಯ ಈ ಕಾಲದಲ್ಲಿ ಇಸ್ಲಾಮಿನ ಜೀವಿತಕ್ಕೋಸ್ಕರ ಬಹಳ ಆವಶ್ಯಕವಾಗಿ ಬಿಟ್ಟಿದೆ. ಏಕೆಂದರೆ ಈಸಾ ಮಸೀಹರು[ಅ] ಜೀವಿಸಿರುವರೆಂಬ ನಂಬಿಕೆಯಿಂದ ಉಂಟಾಗಿರುವ ಹಾನಿ ಬಹಳ ಹೆಚ್ಚು. ಈಸಾ ಮಸೀಹರನ್ನು[ಅ] ಜೀವಂತವಾಗಿ ಆಕಾಶಕ್ಕೆ ಎತ್ತಲು ಅಲ್ಲಾಹನಿಗೆ ಶಕ್ತಿಯಿಲ್ಲವೇ ಎಂದು ಹೇಳುವುದು ಅಲ್ಲಾಹನ ಸಾಮರ್ಥ್ಯ ಮತ್ತು ನಡೆವಳಿಕೆ ರೀತಿಯ ಬಗ್ಗೆ ಅರಿವಿಲ್ಲದ ಕಾರಣದಿಂದಾಗಿದೆ.

اَنَّ اللّٰهَ عَلٰى كُلِّ شَىْءٍ قَدِيْرٌ ○

**ಇನ್ನಲ್ಲಾಹ ಅಲಾ ಕುಲ್ಲಿ ಶೈಯಿನ್ ಖದೀರ್ (ಪವಿತ್ರ ಖುರ್‌ಆನ್ 2:107)** ಎಂದರೆ, ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಮಾಡಲು ಶಕ್ತನು ಎಂದೂ ತಾನಿಚ್ಛಿಸುವುದನ್ನು ಮಾಡಲು ಬಲ್ಲನು ಎಂದೂ ನಾವು ಬಹಳ ದೃಢವಾಗಿ ನಂಬುತ್ತೇವೆ. ಆದರೆ ಅವನು ತನ್ನ ಪರಿಪೂರ್ಣ ಗುಣವಿಶೇಷತೆಗಳಿಗೆ ಮತ್ತು ತನ್ನ ನಡವಳಿಕೆ ರೀತಿಗೆ ವಿರುದ್ಧವಾದ ಕೆಲಸವನ್ನು ಖಂಡಿತವಾಗಿಯೂ ಮಾಡುವುದಿಲ್ಲ.

ಹಝ್ರತ್ ಈಸಾ ಮಸೀಹರು(ಅ) ಜೀವಂತವಾಗಿ ಇರುವರು ಎಂಬ ನಂಬಿಕೆ ಆರಂಭದಲ್ಲಿ ಕೇವಲ ಒಂದು ತಪ್ಪು ಎಂಬ ನೆಲೆಯಲ್ಲಿತ್ತು. ಆದರೆ ಈಗ ಆ ತಪ್ಪು ಒಂದು ಹೆಬ್ಬಾವು ಆಗಿ ಇಸ್ಲಾಮನ್ನು ನುಂಗಿ ಬಿಡುವಂತಿದೆ. ಆರಂಭ ಕಾಲದಲ್ಲಿ ಈ ವಿಶ್ವಾಸದಿಂದ ಯಾವುದೇ ಹಾನಿ ಸಂಭವಿಸುವ ಸಾಧ್ಯತೆ ಇದ್ದಿರಲಿಲ್ಲ. ಅದೊಂದು ತಪ್ಪು ನಂಬಿಕೆ ಎಂಬ ರೂಪದಲ್ಲಿ ಮಾತ್ರವಿತ್ತು. ಆದರೆ ಕ್ರೈಸ್ತ ಧರ್ಮ ಪ್ರಬಲಗೊಂಡಾಗ, ಈಸಾ ಮಸೀಹರು(ಅ) ಜೀವಿಸಿರುವುದನ್ನು ಅವರ ದೇವತ್ವಕ್ಕೆ ಇರುವ (ಅವರು ದೇವರು ಎಂಬುದಕ್ಕೆ ಇರುವ) ಬಹಳ ದೊಡ್ಡ ಪುರಾವೆ ಎಂದು ಕ್ರೈಸ್ತರು ಪ್ರತಿಪಾದಿಸಿದರು. ಆಗ ಇದು ಅಪಾಯಕಾರಿ ವಿಷಯವಾಯಿತು. ಈಸಾ ಮಸೀಹ್(ಅ) ದೇವನಲ್ಲ ಎಂದಾದರೆ ಅವರು ಆಕಾಶದ ಸಿಂಹಾಸನದಲ್ಲಿ ಕುಳಿತುಕೊಂಡದ್ದು ಹೇಗೆ? ಎಂಬ ಪ್ರಶ್ನೆಯನ್ನು ಕ್ರೈಸ್ತರು ಪದೇ ಪದೇ ಬಹಳ ಶಕ್ತವಾಗಿ ಮುಂದಿರಿಸಿದರು. ಮನುಷ್ಯನಾದ ಒಬ್ಬನಿಗೆ ಜೀವಂತವಾಗಿ ಆಕಾಶಕ್ಕೆ ಏರಿ ಹೋಗಲು ಸಾಧ್ಯವಿದ್ದರೆ ಆದಮರಿಂದ ಮೊದಲುಗೊಂಡು ಇದು ವರೆಗೂ ಯಾರೂ ಏಕೆ ಆಕಾಶಕ್ಕೇರಿ ಹೋಗಲಿಲ್ಲ? ಇಂತಹ ಪುರಾವೆಗಳನ್ನು ನೀಡಿ ಕ್ರೈಸ್ತರು ಹಝ್ರತ್ ಈಸಾರನ್ನು(ಅ) ದೇವನನ್ನಾಗಿ ಮಾಡಲು ಇಚ್ಛಿಸುತ್ತಾರೆ. ಕ್ರೈಸ್ತರು ಈಸಾ ಮಸೀಹರನ್ನು(ಅ) ದೇವನನ್ನಾಗಿ ಮಾಡಿ ಲೋಕದ ಅನೇಕ ಜನರನ್ನು ದಾರಿ ತಪ್ಪಿಸಿರುವರು. ಈ ತಪ್ಪನ್ನು ಸರಿ ಎಂದು ನಂಬಿರುವ ಕಾರಣದಿಂದ ಮೂವತ್ತು ಲಕ್ಷಕ್ಕಿಂತ ಹೆಚ್ಚಿನ ಮುಸ್ಲಿಮರು ಈ ಪಿತೂರಿಗೆ ಬಲಿಯಾಗಿರುವರು. ಕ್ರೈಸ್ತರು ಹೇಳುವ ಹಾಗೆ ಹಝ್ರತ್ ಈಸಾ(ಅ) ಆಕಾಶಕ್ಕೆ ಏರಿ ಹೋದದ್ದು ಸತ್ಯವಾಗಿದ್ದರೆ ಮತ್ತು ಮುಸ್ಲಿಮರು ಅಜ್ಞಾನದಿಂದ ಅವರ ಮಾತನ್ನು ಬೆಂಬಲಿಸುತ್ತಿರುವುದು ಸರಿಯೆಂದಾದರೆ, ಅದು ಇಸ್ಲಾಮ್ ಧರ್ಮಕ್ಕೆ ಶೋಕದ ದಿನವಾಗುತಿತ್ತು. ಏಕೆಂದರೆ ಇಸ್ಲಾಮ್ ಧರ್ಮ ಆಗಮಿಸಿದ್ದು ಅಲ್ಲಾಹನ ಅಸ್ತಿತ್ವದ ಬಗ್ಗೆ ನಂಬಿಕೆ ಮತ್ತು ದೃಢವಿಶ್ವಾಸ ಉಂಟುಮಾಡಲಿಕ್ಕೂ ಏಕದೇವ ವಿಶ್ವಾಸವನ್ನು ಹಬ್ಬಿಸಲಿಕ್ಕೂ ಆಗಿದೆ. ಇಸ್ಲಾಮ್ ಎಂಬುದು ಯಾವುದೇ ನ್ಯೂನತೆ ಇಲ್ಲದ ಧರ್ಮವಾಗಿದೆ. ಅದು ಅಲ್ಲಾಹನನ್ನು ಏಕನೆಂದೂ ಸಹಭಾಗಿ ಇಲ್ಲದವನೆಂದೂ ಘೋಷಿಸುತ್ತದೆ. ಈ ವೈಶಿಷ್ಟ್ಯ ಬೇರೆ ಯಾರಲ್ಲಾದರೂ ಇದೆ ಎಂದು ಒಪ್ಪುವುದಾದರೆ, ಅದು ಅಲ್ಲಾಹನ ಘನತೆಗೆ ಕುಂದುಂಟು ಮಾಡುವುದು. ಇದಕ್ಕೆ ಇಸ್ಲಾಂ ಅನುಮತಿ ನೀಡುವುದಿಲ್ಲ. ಆದರೆ ಕ್ರೈಸ್ತರು ಈಸಾ ಮಸೀಹರ(ಅ) ಈ ವೈಶಿಷ್ಟ್ಯವನ್ನು ಮುಂದಿರಿಸಿ ಲೋಕದ ಜನರನ್ನು ದಾರಿ ತಪ್ಪಿಸಿರುವರು. ಮುಸ್ಲಿಮರು ಆ ವಿಷಯದ ಬಗ್ಗೆ ಚಿಂತಿಸದೆ ಕ್ರೈಸ್ತರ ಮಾತನ್ನು

ಅಂಗೀಕರಿಸಿರುವರು ಮತ್ತು ಅದರಿಂದ ಇಸ್ಲಾಮಿಗೆ ಉಂಟಾದ ಹಾನಿಯ ಕುರಿತು ಚಿಂತಿಸಲಿಲ್ಲ.

ಈಸಾ ಮಸೀಹರನ್ನು[ಅ] ಜೀವಂತವಾಗಿ ಆಕಾಶಕ್ಕೆ ಎತ್ತಿಕೊಳ್ಳಲು ಅಲ್ಲಾಹನಿಗೆ ಸಾಮರ್ಥ್ಯವಿಲ್ಲವೇ? ಎಂದು ಹೇಳುವವರ ಮಾತಿನಿಂದ ಎಂದೂ ಮೋಸಕ್ಕೆ ಒಳಪಡಬಾರದು. ನಿಸ್ಸಂಶಯವಾಗಿಯೂ ಅಲ್ಲಾಹನಿಗೆ ಸಾಮರ್ಥ್ಯವಿದೆ. ಆದರೆ ಅಲ್ಲಾಹನಿಗೆ ಸಹಭಾಗಿಯನ್ನು ಉಂಟುಮಾಡಲು ಮೂಲ ಕಾರಣವಾಗುವಂತಹ ಸಂಗತಿಯನ್ನು ಅಲ್ಲಾಹನು ಎಂದೂ ಇಷ್ಟಪಡುವುದಿಲ್ಲ. ಒಬ್ಬ ವ್ಯಕ್ತಿಗೆ ಕೆಲವು ವಿಧದ ದೈವಿಕ ವೈಶಿಷ್ಟ್ಯಗಳನ್ನು ನೀಡುವುದು ಶಿರ್ಕಿನ (ಬಹುದೇವಾರಾಧನೆಯ) ಆರಂಭ ಘಟ್ಟವಾಗಿದೆ. ಆದುದರಿಂದ ಈಸಾ ಮಸೀಹ್[ಅ] ಈಗ ಕೂಡ ಜೀವಿಸಿರುವರು ಮತ್ತು ಅವರು ಇತರ ಮನುಷ್ಯರಂತೆ ಅಲ್ಲವೆಂದು ಹೇಳುವುದು ಎಂತಹ ವೈಶಿಷ್ಟ್ಯವೆಂದರೆ, ಇದನ್ನು ಈಸಾ ಮಸೀಹರ[ಅ] ದೇವತ್ವಕ್ಕೆ ಇರುವ ಸಾಕ್ಷ್ಯಾಧಾರವಾಗಿ ನೀಡಲು ಕ್ರೈಸ್ತರಿಗೆ ಸದವಕಾಶ ದೊರೆತಿದೆ.

ಇಂತಹ ವೈಶಿಷ್ಟ್ಯ ಬೇರೆ ಯಾರಿಗಾದರೂ ಇದೆಯೇ? ಎಂದು ಕ್ರೈಸ್ತರು ಮುಸ್ಲಿಮರೊಂದಿಗೆ ಕೇಳಿದರೆ ಅದಕ್ಕೆ ಯಾವುದೇ ಉತ್ತರ ಮುಸ್ಲಿಮರ ಬಳಿ ಇಲ್ಲ. ಏಕೆಂದರೆ ನಮ್ಮ ವಿರೋಧಿಗಳಾದ ಮುಸ್ಲಿಮರ ಅಭಿಪ್ರಾಯ ಪ್ರಕಾರ ಎಲ್ಲ ಪ್ರವಾದಿಗಳು ಮೃತರಾಗಿರುವರು. ಆದರೆ ಈಸಾ ಮಸೀಹರು ಮೃತಪಟ್ಟಿರುವರೆಂದು ಸಾಬೀತಾಗುವುದಿಲ್ಲ. ಏಕೆಂದರೆ **"ತವಪ್ಫಾ"** ಎಂಬ ಅರಬಿ ಪದಕ್ಕೆ "ಆಕಾಶಕ್ಕೆ ಜೀವಸಹಿತ ಎತ್ತುವುದು" ಎಂಬರ್ಥವನ್ನು ಅವರು ನೀಡುತ್ತಾರೆ.

ಆದುದರಿಂದ **فَلَمَّا تَوَفَّيْتَنِيْ - "ಫಲಮ್ಮಾ ತವಫ್ಫೈತನೀ"** **(ಪವಿತ್ರ ಖುರ್‌ಆನ್ 5:118)** ಎಂಬ ವಚನಕ್ಕೆ "ನೀನು ನನ್ನನ್ನು ಜೀವಂತವಾಗಿ ಆಕಾಶಕ್ಕೆ ಎತ್ತಿದಾಗ" ಎಂಬ ಅರ್ಥವನ್ನು ನೀಡಬೇಕಾಗುತ್ತದೆ. ಈಸಾ ಮಸೀಹರ[ಅ] ಮೃತ್ಯುವನ್ನು ಸಾಬೀತುಗೊಳಿಸುವ ಯಾವ ಸೂಕ್ತವೂ ಅವರ ಪ್ರಕಾರ ಇಲ್ಲ. ಹಾಗಾದರೆ ಇದರ ಪರಿಣಾಮ ಏನಾಗುವುದು ಎಂದು ಹೇಳಿರಿ. ಅಲ್ಲಾಹನು ಈ ಜನರಿಗೆ ಮಾರ್ಗದರ್ಶನ ನೀಡಲಿ. ಅವರು ತಮ್ಮ ತಪ್ಪನ್ನು ಅರಿಯುವಂತಾಗಲಿ. ಈ ನಂಬಿಕೆಯ ಬಲಹೀನತೆ ಮತ್ತು ಕೆಡುಕು ಬಹಿರಂಗಗೊಂಡ ನಂತರವೂ ಈ ನಂಬಿಕೆಯನ್ನು ಬಿಡದಂತಹ ಮುಸ್ಲಿಮ್ ನಾಮಧಾರಿಗಳು ಇಸ್ಲಾಮಿನ ಶತ್ರುಗಳು ಮತ್ತು ಅಂಗಿತೋಳಿನೊಳಗೆ ಅವಿತಿರುವ ಸರ್ಪಗಳಂತೆ ವಿಶ್ವಾಸಘಾತಕರು ಆಗಿರುತ್ತಾರೆ.

ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪವಿತ್ರ ಖುರ್‌ಆನ್ ಪದೇ ಪದೇ ಪ್ರಸ್ತಾಪಿಸುತ್ತದೆ ಮತ್ತು ಇತರ ಪ್ರವಾದಿಗಳ ಹಾಗೆ ಅವರು ಕೂಡ ಮೃತರಾಗಿರುವರೆಂದು ಸಾಬೀತುಗೊಳಿಸುತ್ತದೆ. ಇತರ ಪ್ರವಾದಿಗಳಲ್ಲಿ ಮತ್ತು ಮನುಷ್ಯರಲ್ಲಿ ಇರದಂತಹ ಯಾವ ಸಂಗತಿಯೂ ಅವರಲ್ಲಿ ಇರಲಿಲ್ಲ. **ತವಫ್ಫಾ** ಎಂಬ ಪದದ ಅರ್ಥ ಮೃತ್ಯು ಎನ್ನುವುದು ಅಪ್ಪಟ ಸತ್ಯವಾಗಿದೆ. **ತವಫ್ಫಾ** ಎಂಬ ಪದಕ್ಕೆ ಆಕಾಶಕ್ಕೆ ದೇಹಸಮೇತ ಎತ್ತುವುದು ಎಂಬ ಅರ್ಥವಿದೆ ಎಂದು ಯಾವ ನಿಘಂಟಿನಲ್ಲಿಯೂ ಬರೆದಿಲ್ಲ. ಭಾಷೆಯ ಶ್ರೇಷ್ಠತೆಯನ್ನು ಅದರಲ್ಲಿರುವ ಧಾರಾಳ ಶಬ್ದಸಂಗ್ರಹ ಮತ್ತು ಪದಸಂಪತ್ತಿನ ವ್ಯಾಪ್ತಿಯಿಂದ ಅರಿಯಲಾಗುತ್ತದೆ. ಲೋಕದ ಯಾವುದೇ ನಿಘಂಟಿನಲ್ಲಿ ಒಬ್ಬನಿಗೋಸ್ಕರ ನೀಡಲಾಗುವ ಅರ್ಥ ಮತ್ತೊಬ್ಬನಿಗೆ ಅನ್ವಯಿಸದೆ ಇರುವುದಿಲ್ಲ. ಆದರೆ ಅಲ್ಲಾಹನಿಗೆ ನಿಸ್ಸಂದೇಹವಾಗಿಯೂ ಈ ವೈಶಿಷ್ಟ್ಯಗಳಿವೆ. ಏಕೆಂದರೆ ಅವನು ಏಕನೂ ಸಹಭಾಗಿಯಿಲ್ಲದವನೂ ಆಗಿರುವನು. **ತವಫ್ಫಾ** ಎಂಬ ಪದವನ್ನು ಈಸಾ ಮಸೀಹರಿಗೆ(ಅ) ಸಂಬಂಧಿಸಿ ಹೇಳಲ್ಪಡುವಾಗ ಅದರ ಅರ್ಥ ಜೀವಂತವಾಗಿ ಆಕಾಶಕ್ಕೆ ಎತ್ತಲ್ಪಡುವುದು ಎಂದಾಗಿದೆ ಎಂದೂ ಆದರೆ ಉಳಿದ ಎಲ್ಲರಿಗೂ ಸಂಬಂಧಿಸಿ ಈ ಪದ ಬಳಸಲಾಗುವಾಗ ಅದರ ಅರ್ಥ ಮರಣ ಎಂದಾಗುತ್ತದೆ ಎಂದೂ ಯಾವುದಾದರೂ ಅರಬಿ ನಿಘಂಟಿನಲ್ಲಿ ಇರುವುದಾಗಿ ಸಾಬೀತುಗೊಳಿಸಿರಿ. ಇಂತಹ ವೈಶಿಷ್ಟ್ಯವನ್ನು ಅರಬಿ ನಿಘಂಟಿನ ಪೈಕಿ ಯಾವುದರಲ್ಲಾದರೂ ತೋರಿಸಿರಿ. ನಿಮಗೆ ತೋರಿಸಲು ಸಾಧ್ಯವಾಗದಿದ್ದರೆ ಅಥವಾ ಹಾಗೆ ಇಲ್ಲವೆಂದಾದರೆ ನೀವು ಅಲ್ಲಾಹನಿಗೆ ಭಯಪಡಿರಿ. ಏಕೆಂದರೆ ಈ ನಂಬಿಕೆ ಶಿರ್ಕಿನ (ಬಹುದೇವಾರಾಧನೆಯ) ಆರಂಭವಾಗಿದೆ. ಈ ತಪ್ಪು ನಂಬಿಕೆ ಕಾರಣದಿಂದ ಮುಸ್ಲಿಮರು ಕ್ರೈಸ್ತರ ಬೆಂಬಲಿಗರಾಗುತ್ತಾರೆ. ಈಸಾ ಮಸೀಹರು(ಅ) ಆಕಾಶದಲ್ಲಿ ಜೀವಿಸಿರುವರು ಎಂದೂ ಅವರು ಮರಳಿ ಬರುವರು ಎಂದೂ ಅವರು ಹಕಮ್ (ತೀರ್ಪುಗಾರ) ಆಗಿ ಬರುವರೆಂದೂ ನಂಬುತ್ತೀರಿ. ಬಂದ ನಂತರ ಅವರು ಮೃತಪಡುವರು ಎಂದು ಎಲ್ಲೂ ಹೇಳಲಾಗಿಲ್ಲ. ಹೀಗಿರುವಾಗ ಅವರು ದೇವನಾಗಿರುವುದರಲ್ಲಿ ಸಂಶಯವೇನು? ಎಂದು ಕ್ರೈಸ್ತರು ಮುಸ್ಲಿಮರೊಡನೆ ಕೇಳಿದರೆ ಅದಕ್ಕೆ ಹೇಗೆ ಉತ್ತರಿಸುವುದು? ಕ್ರೈಸ್ತರ ಪ್ರಶ್ನೆಗೆ ಉತ್ತರವಿಲ್ಲವೆಂಬುದು ಎಷ್ಟು ವಿಪತ್ತಿನ ವಿಷಯವಾಗಿದೆ.

ಒಟ್ಟಿನಲ್ಲಿ, ಈಗ ಈ ತಪ್ಪು ನಂಬಿಕೆಯ ಕೆಟ್ಟ ಪ್ರಭಾವ ಬಹಳ ವರ್ಧಿಸಿದೆ. ಸತ್ಯದಲ್ಲಿ ಈಸಾ ಮಸೀಹರ ಮೃತ್ಯುವಿನ ಪ್ರಶ್ನೆ ಬಹಳ ಮಹತ್ವ ಉಳ್ಳದ್ದೇನೂ

ಆಗಿರಲಿಲ್ಲ. ಅದಕ್ಕೋಸ್ಕರ ಒಬ್ಬ ಮಹೋನ್ನತ ವ್ಯಕ್ತಿಯನ್ನು ನಿಯೋಜಿಸುವ ಆವಶ್ಯಕತೆಯೂ ಇರಲಿಲ್ಲ. ಆದರೆ ಮುಸ್ಲಿಮರ ಸ್ಥಿತಿ ಬಹಳ ದುರ್ಬಲಗೊಂಡಿದೆ ಎಂದು ನಾನು ನೋಡುತ್ತಿದ್ದೇನೆ. ಅವರು ಪವಿತ್ರ ಖುರ್‌ಆನಿನ ಅಧ್ಯಯನ ಮಾಡುವುದನ್ನು ಬಿಟ್ಟಿದ್ದಾರೆ ಮತ್ತು ಅವರ ನಡೆವಳಿಕೆ ರೀತಿ ಕೆಟ್ಟುಹೋಗಿದೆ. ಅವರ ನಡೆವಳಿಕೆ ಉತ್ತಮವಾಗಿರುತ್ತಿದ್ದರೆ ಹಾಗೂ ಅವರು ಪವಿತ್ರ ಖುರ್‌ಆನ್ ಮತ್ತು ಅದರ ಶಬ್ದಾರ್ಥಗಳ ಬಗ್ಗೆ ಗಮನ ಹರಿಸುವವರಾಗಿದ್ದರೆ ಈ ರೀತಿಯ ಅರ್ಥವನ್ನು ಖಂಡಿತವಾಗಿ ನೀಡುತ್ತಿರಲಿಲ್ಲ. ಅವುಗಳ ಬಗ್ಗೆ ಗಮನವಿಲ್ಲದ ಕಾರಣದಿಂದ ಅವರು ತಮಗಿಷ್ಟ ಬಂದ ಅರ್ಥವನ್ನು ಕೊಟ್ಟರು. **ತವಫ್ಫಾ** ಎಂಬುದು ಅಪರೂಪದ ಅಥವಾ ಹೊಸ ಪದವೇನೂ ಅಲ್ಲ. ಸಕಲ ಅರಬಿ ನಿಘಂಟುಗಳಲ್ಲಿ **ತವಫ್ಫಾ** ಎಂಬ ಪದದ ಅರ್ಥ ಮೃತ್ಯು ಎಂದೇ ಬರೆಯಲಾಗಿದೆ. ಹೀಗಿರುವಾಗ ಶರೀರ ಸಮೇತ ಆಕಾಶಕ್ಕೆ ಎತ್ತುವುದು ಎಂಬ ಅರ್ಥ ಈ ಪದಕ್ಕೆ ಈ ಜನರು ಸ್ವತಃ ಏಕೆ ನೀಡಿದರು? ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್‌ರಿಗೆ(ಸ) ಸಂಬಂಧಿಸಿಯೂ ಈ ಪದಕ್ಕೆ ಇದೇ ಅರ್ಥವನ್ನು ಕೊಟ್ಟಿದ್ದರೆ ನಮಗೆ ದುಃಖವಾಗುತ್ತಿರಲಿಲ್ಲ. ಏಕೆಂದರೆ **ತವಫ್ಫಾ** ಎಂಬ ಪದ ಹಝ್ರತ್ ಪೈಗಂಬರರಿಗೆ(ಸ) ಸಂಬಂಧಿಸಿಯೂ ಪವಿತ್ರ ಖುರ್‌ಆನಿನಲ್ಲಿ ಬಳಸಲಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

وَإِمَّا نُرِيَنَّكَ بَعْضَ الَّذِي نَعِدُهُمْ أَوْ نَتَوَفَّيَنَّكَ

**ವ ಇಮ್ಮಾ ನುರಿಯನ್ನಕ ಬಅಝುಲ್ಲಧೀ ನಇದುಹುಮ್ ಅವ್ ನತವಫ್ಫಯನ್ನಕ**

ನಾವು ಅವರಿಗೆ ಮುನ್ನೆಚ್ಚರಿಕೆ ನೀಡುತ್ತಿರುವ ಶಿಕ್ಷೆಗಳಲ್ಲಿ ಕೆಲವನ್ನು ನಿನ್ನ ಜೀವಮಾನದಲ್ಲೇ ನಾವು ನಿನಗೆ ತೋರಿಸಿಕೊಟ್ಟರೆ ಅಥವಾ ಅದಕ್ಕಿಂತ ಮುಂಚೆಯೇ ನಿನ್ನನ್ನು ಮೃತಪಡಿಸಿದರೆ. **(ಪವಿತ್ರ ಖುರ್‌ಆನ್ 10:47).**

ಈಗ ಹೇಳಿರಿ, **ತವಫ್ಫಾ** ಎಂಬ ಪದದ ಅರ್ಥ ಶರೀರ ಸಮೇತ ಆಕಾಶಕ್ಕೆ ಎತ್ತುವುದೇ ಆಗಿದ್ದರೆ, ಹಝ್ರತ್ ಪೈಗಂಬರರಿಗೆ(ಸ) ಸಂಬಂಧಿಸಿಯೂ ಇದೇ ಅರ್ಥ ನೀಡಲು ನಮಗೆ ಹಕ್ಕಿಲ್ಲವೇ? ಹಝ್ರತ್ ಪೈಗಂಬರ್‌ಗಿಂತ(ಸ) ಸಾವಿರಪಟ್ಟು ಕೆಳಮಟ್ಟದಲ್ಲಿರುವ ಪ್ರವಾದಿಗೆ ಸಂಬಂಧಿಸಿ **ತವಫ್ಫಾ** ಪದ ಬಳಸುವಾಗ ನೀವು ಮನಸ್ಸಿಗೆ ಬಂದಂತೆ ಅರ್ಥ ಹೇಳಿ ಆಕಾಶಕ್ಕೆ ಏರಿಸುತ್ತಿರುವಿರಿ. ಆದರೆ ಹಿಂದೆ ಮತ್ತು ಮುಂದಿನ ಕಾಲದವರ ನೇತಾರರಾದ ಹಝ್ರತ್ ಪೈಗಂಬರರ(ಸ) ಕುರಿತು ಈ ಪದ ಬಳಸುವಾಗ

ಅದಕ್ಕೆ ಮೃತ್ಯು ಎಂಬ ಅರ್ಥವಲ್ಲದೆ ಬೇರೇನೂ ನೀಡುವುದಿಲ್ಲ. ಇದೇಕೆ ಹೀಗೆ? ವಾಸ್ತವದಲ್ಲಿ ಹಝ್ರತ್ ಪೈಗಂಬರ್(ಸ) ಜೀವಂತ ಪ್ರವಾದಿಯಾಗಿದ್ದಾರೆ. ಹಝ್ರತ್ ಪೈಗಂಬರ್(ಸ) ಜೀವಂತರಾಗಿರುವರು ಎಂಬುದು ಬೇರೆ ಯಾವ ಪ್ರವಾದಿಗಿಂತಲೂ ಹೆಚ್ಚಾಗಿ ಸಾಬೀತಾಗುತ್ತದೆ. ಆದುದರಿಂದ ಯಾವುದಾದರೂ ಪ್ರವಾದಿ ಜೀವಂತವಾಗಿದ್ದರೆ ಹಾಗೆ ಜೀವಂತವಾಗಿರುವ ಪ್ರವಾದಿ ಹಝ್ರತ್ ಪೈಗಂಬರರೇ(ಸ) ಆಗಿದ್ದಾರೆ ಎಂದು ನಾವು ಶಕ್ತವಾಗಿ ವಾದಿಸುತ್ತೇವೆ. ಹಝ್ರತ್ ಪೈಗಂಬರರು(ಸ) ಜೀವಂತರಾಗಿರುವರು ಎಂಬ ವಿಷಯದಲ್ಲಿ ಅನೇಕ ಹಿರಿಯ ವಿದ್ವಾಂಸರು ಪುಸ್ತಕಗಳನ್ನು ರಚಿಸಿದ್ದಾರೆ. ಹಝ್ರತ್ ಪೈಗಂಬರ್(ಸ) ಜೀವಂತರಾಗಿರುವರು ಎಂಬುವುದಕ್ಕೆ ನಮ್ಮ ಬಳಿ ಎಷ್ಟು ಪ್ರಬಲವಾದ ಸಾಕ್ಷ್ಯಾಧಾರಗಳಿವೆ ಎಂದರೆ ಯಾರಿಗೂ ಅವುಗಳನ್ನು ಎದುರಿಸಲಾಗದು. ಈ ಸಾಕ್ಷ್ಯಾಧಾರಗಳಲ್ಲಿ ಒಂದೇನೆಂದರೆ, ಯಾರ ಅನುಗ್ರಹಗಳು ಮತ್ತು ಔದಾರ್ಯಗಳು ಸದಾ ಜಾರಿಯಲ್ಲಿರುತ್ತವೆಯೋ ಅಂತಹ ಪ್ರವಾದಿಯೇ ಜೀವಂತ ಪ್ರವಾದಿಯಾಗಲು ಸಾಧ್ಯ. ನಾವು ನೋಡುತ್ತಿರುವುದೇನೆಂದರೆ, ಹಝ್ರತ್ ಪೈಗಂಬರರ(ಸ) ಕಾಲದಿಂದ ಇಂದಿನ ತನಕ ಅಲ್ಲಾಹನು ಮುಸ್ಲಿಮರನ್ನು ಕಡೆಗಣಿಸಲಿಲ್ಲ. ಪ್ರತಿಯೊಂದು ಶತಮಾನದ ಆರಂಭದಲ್ಲಿ ಅಲ್ಲಾಹನು ಸುಧಾರಕರನ್ನು ಕಳುಹಿಸಿ ಪ್ರತಿಯೊಂದು ಕಾಲದ ಆವಶ್ಯಕತೆಗೆ ಅನುಸಾರವಾಗಿ ಸುಧಾರಣೆ ಮಾಡುತ್ತಾ ಇದ್ದನು. ಕೊನೆಗೆ ಹಝ್ರತ್ ಪೈಗಂಬರರು(ಸ) ಜೀವಂತ ಪ್ರವಾದಿಯಾಗಿರುವರು ಎಂಬುವುದಕ್ಕೆ ಸಾಕ್ಷ್ಯಾಧಾರಗಳನ್ನು ನೀಡಲಿಕ್ಕಾಗಿ ಈ ಶತಮಾನದಲ್ಲಿ ಅಲ್ಲಾಹನು ನನ್ನನ್ನು ಕಳುಹಿಸಿದನು. ಅಲ್ಲಾಹನು ಹಝ್ರತ್ ಪೈಗಂಬರರ(ಸ) ಧರ್ಮವನ್ನು ಸಂರಕ್ಷಿಸುತ್ತಾ ಇದ್ದಾನೆಂದೂ ಇನ್ನು ಮುಂದೆಯೂ ಸಂರಕ್ಷಿಸುವನೆಂದೂ ಪವಿತ್ರ ಖುರ್‌ಆನಿನಿಂದಲೂ ಸಾಬೀತಾಗುತ್ತದೆ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೀಗೆ ಹೇಳಿರುವನು: إِنَّا نَحْنُ نَزَّلْنَا الذِّكْرَ وَإِنَّا لَهُ لَحَافِظُونَ – **ಇನ್ನಾ ನಹ್‌ನು ನಝ್ಝಲ್‌ನಧ್ಧಿಕ್ರ ವ ಇನ್ನಾಲಹೂ ಲ ಹಾಫಿಝೂನ್** – ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದೆವು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು. **(ಪವಿತ್ರ ಖುರ್‌ಆನ್ 15:10)**

ಜನರು ಮರೆತುಬಿಟ್ಟ ಅಮೂಲ್ಯ ವಿಷಯಗಳನ್ನು ನೆನಪಿಸಿಕೊಡಲು ಪ್ರತಿಯೊಂದು ಶತಮಾನದ ಆದಿಭಾಗದಲ್ಲಿ ಮಹಾನುಭಾವರು ಆಗಮಿಸುವರು ಎಂಬುದನ್ನು **“ಇನ್ನಾಲಹೂ ಲ ಹಾಫಿಝೂನ್”** ಎಂಬ ವಾಕ್ಯ ಸ್ಪಷ್ಟವಾಗಿ ಸೂಚಿಸುತ್ತದೆ.

ಒಂದು ಶತಮಾನ ದಾಟಿ ಹೋಗುವಾಗ ಆ ಪೀಳಿಗೆ ಕೂಡ ಗತಿಸಿ ಹೋಗುತ್ತದೆ

ಎಂಬುದು ರೂಢಿ. ಆ ಪೀಳಿಗೆಯ ವಿದ್ವಾಂಸರು, ಹಾಫಿಝ್‌ಗಳು (ಪವಿತ್ರ ಖುರ್‌ಆನ್ ಬಾಯಿಪಾಠ ಮಾಡಿದವರು), ಸಾತ್ವಿಕರು, ವರಿಷ್ಠರಾದ ಎಲ್ಲರೂ ಮೃತರಾಗುತ್ತಾರೆ. ಆದುದರಿಂದ ಸಮುದಾಯದ ಪುನಶ್ಚೇತನ ಮತ್ತು ಪುನರುಜ್ಜೀವನಕ್ಕೆ ಒಬ್ಬ ಸುಧಾರಕನ ಜನನ ಆವಶ್ಯಕವಾಗುತ್ತದೆ. ಏಕೆಂದರೆ ನಂತರ ಬರುವ ಶತಮಾನದಲ್ಲಿ ಇಸ್ಲಾಮನ್ನು ಜೀವಂತವಾಗಿ ಮತ್ತು ಚೈತನ್ಯಪೂರ್ಣವಾಗಿ ಇರಿಸಲು ಹೊಸ ವ್ಯವಸ್ಥೆ ಮಾಡದಿದ್ದರೆ ಈ ಧರ್ಮ ಸಾಯುವುದು. ಆದುದರಿಂದ ಇಸ್ಲಾಮನ್ನು ಸಾಯುವುದರಿಂದ ರಕ್ಷಿಸಲಿಕ್ಕಾಗಿ ಅಲ್ಲಾಹನು ಪ್ರತಿಯೊಂದು ಶತಮಾನದ ಆದಿಭಾಗದಲ್ಲಿ ಒಬ್ಬ ಸುಧಾರಕನನ್ನು ನಿಯೋಜಿಸುತ್ತಾನೆ. ಅವರು ಅದಕ್ಕೆ ನವಜೀವನವನ್ನು ನೀಡುತ್ತಾರೆ ಮತ್ತು ಲೋಕದ ಜನರಲ್ಲಿ ತಲೆದೋರಿರುವ ತಪ್ಪುಗಳು, ನವೀನಾಚಾರಣೆಗಳು, ಅಸಡ್ಡೆಗಳು ಮತ್ತು ಉದಾಸೀನತೆಗಳಿಂದ ಸಂರಕ್ಷಿಸುತ್ತಾರೆ.

ಈ ವೈಶಿಷ್ಟ್ಯ ಹಝ್ರತ್ ಪೈಗಂಬರರಿಗೆ[ಸ] ಮಾತ್ರ ಲಭಿಸಿದ್ದಾಗಿದೆ. ಇದು ಅವರು ಜೀವಂತರಾಗಿರುವರು ಎಂಬುದಕ್ಕೆ ಯಾರಿಗೂ ಎದುರಿಸಲು ಸಾಧ್ಯವಿಲ್ಲದಂತಹ ಪ್ರಬಲವಾದ ಸಾಕ್ಷ್ಯಾಧಾರವಾಗಿದೆ. ಈ ರೀತಿಯಾಗಿ ಅವರ ಅನುಗ್ರಹಗಳ ಮತ್ತು ವರದಾನಗಳ ಶೃಂಖಲೆ ಅಂತ್ಯವಿಲ್ಲದ್ದೂ ಕಡಿದು ಹೋಗದ್ದೂ ಆಗಿದೆ. ಪ್ರತಿಯೊಂದು ಕಾಲಘಟ್ಟದಲ್ಲಿ ಮುಸ್ಲಿಮ್ ಸಮುದಾಯದವರು ಅವರದೇ ಅನುಗ್ರಹವನ್ನು ಪಡೆಯುತ್ತಿದ್ದಾರೆ ಮತ್ತು ಅವರಿಂದಲೇ ಕಲಿಯುತ್ತಿದ್ದಾರೆ ಹಾಗೂ ಅಲ್ಲಾಹನ ಪ್ರೀತಿಗೆ ಪಾತ್ರರಾಗುತ್ತಿದ್ದಾರೆ. ಅಲ್ಲಾಹನು ಇದರ ಬಗ್ಗೆ ಹೀಗೆ ಹೇಳಿದ್ದಾನೆ:

اِنۡ كُنۡتُمۡ تُحِبُّوۡنَ اللّٰهَ فَاتَّبِعُوۡنِىۡ يُحۡبِبۡكُمُ اللّٰهُ

**ಖುಲ್ ಇನ್‌ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್**

ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. **(ಪವಿತ್ರ ಖುರ್‌ಆನ್ 3:32)**

ಒಟ್ಟಿನಲ್ಲಿ ಈ ಸಮುದಾಯವನ್ನು ಯಾವ ಶತಮಾನದಲ್ಲೂ ಕೈಬಿಟ್ಟಿಲ್ಲ ಎಂಬುದು ಅಲ್ಲಾಹನಿಗೆ ಈ ಸಮುದಾಯದೊಂದಿಗೆ ಇರುವ ಪ್ರೀತಿಯನ್ನು ವ್ಯಕ್ತಪಡಿಸುತ್ತಿದೆ. ಹಝ್ರತ್ ಪೈಗಂಬರ್[ಸ] ಜೀವಂತರಾಗಿರುವರು ಎಂಬುದಕ್ಕೆ ಇದೇ ಪ್ರಕಾಶಮಾನವಾದ ಸಾಕ್ಷ್ಯಾಧಾರವಾಗಿದೆ. ಆದರೆ ಹಝ್ರತ್ ಈಸಾ ಮಸೀಹ್[ಅ] ಜೀವಂತರಾಗಿರುವರು ಎಂಬುದು ಸಾಬೀತುಗೊಂಡಿಲ್ಲ. ಬೇರೆ ಯಾವ ಪ್ರವಾದಿಯ

ಕಾಲದಲ್ಲೂ ಉಂಟಾಗಿರದಂತಹ ಪಿತೂರಿ ಈಸಾ ಮಸೀಹರ[ಅ] ಜೀವಿತ ಕಾಲದಲ್ಲಿಯೇ ಉಂಟಾಗಿತ್ತು.

ءَاَنْتَ قُلْتَ لِلنَّاسِ اتَّخِذُوْنِيْ وَاُمِّيَ اِلٰهَيْنِ – **ಅ ಅನ್‌ತ ಖುಲ್‌ತಲಿನ್ನಾಸಿತ್ತಖಿಧೂನಿ ವ ಉಮ್ಮಿಯ ಇಲಾಹೈನಿ (ಪವಿತ್ರ ಖುರ್‌ಆನ್ 5:117)** – ನನ್ನನ್ನೂ ನನ್ನ ತಾಯಿಯನ್ನೂ ಅಲ್ಲಾಹನ ಹೊರತಾಗಿ ಇಬ್ಬರು ದೇವರುಗಳನ್ನಾಗಿ ಅಂಗೀಕರಿಸಿರಿ ಎಂದು ನೀನು ಜನರೊಡನೆ ಹೇಳಿರುವಿಯೋ? ಎಂದು ಅಲ್ಲಾಹನಿಗೆ ಹಝ್ರತ್ ಈಸಾ ಮಸೀಹರೊಡನೆ[ಅ] ವಿಚಾರಿಸಬೇಕಾಗಿ ಬಂದ ಕಾರಣ ಇದೇ ಆಗಿದೆ.

ಹಝ್ರತ್ ಈಸಾ ಮಸೀಹ್[ಅ] ಸ್ಥಾಪಿಸಿದ ಸಂಘಟನೆ ಅತ್ಯಂತ ಬಲಹೀನ ಮತ್ತು ವಿಶ್ವಾಸಾರ್ಹವಲ್ಲದ್ದು ಆಗಿತ್ತು ಎಂದು ಸ್ವತಃ ಕ್ರೈಸ್ತರೇ ಒಪ್ಪುತ್ತಾರೆ. ಬೈಬಲಿನಿಂದ ಸಾಬೀತಾಗುವುದೇನೆಂದರೆ, ಈಸಾ ಮಸೀಹರ[ಅ] ವಿಶಿಷ್ಟವಾದ ಪರಿಶುದ್ಧ ಶಕ್ತಿಯಿಂದ ಪ್ರಭಾವಿತರಾದ ಹನ್ನೆರಡು ಶಿಷ್ಯರಲ್ಲಿ ಇಸ್ಕರಿಯೋತ ಯೂದನೆಂಬವನು ಮೂವತ್ತು ರೂಪಾಯಿ ಪಡೆದು ತನ್ನ ಯಜಮಾನನೂ ಗುರುವೂ ಆದ ಈಸಾ ಮಸೀಹರನ್ನು[ಅ] ಮಾರಾಟ ಮಾಡಿದನು. ಪ್ರಥಮ ಸ್ಥಾನದಲ್ಲಿದ್ದವನೂ ಸನ್ಮಾರ್ಗಿ ಶಿಷ್ಯ ಎಂದು ಕರೆಯಲ್ಪಟ್ಟವನೂ ತನ್ನ ಕೈಯಲ್ಲಿ ಸ್ವರ್ಗದ ಕೀಲಿಗೈ ಹೊಂದಿದವನೂ ಆದ ಪೇತ್ರನು ಈಸಾ ಮಸೀಹರ[ಅ] ಮುಂದೆ ನಿಂತು ಅವರನ್ನು ಮೂರು ಸಾರಿ ಶಪಿಸಿದನು. ಈಸಾ ಮಸೀಹ್[ಅ] ಜೀವಿಸಿರುವಾಗ ಅವರ ಪ್ರಭಾವ ಮತ್ತು ಅನುಗ್ರಹ ಹೀಗಾಗಿತ್ತು ಎಂದಾದರೆ, ಈಗ 1900 ವರ್ಷ ಕಳೆದ ನಂತರ ಅವುಗಳ ಪ್ರಭಾವ ಎಷ್ಟಿರಬಹುದು ಎಂದು ಸ್ವತಃ ಅಂದಾಜು ಮಾಡಬಹುದಾಗಿದೆ. ಇದಕ್ಕೆದುರಾಗಿ ಹಝ್ರತ್ ಪೈಗಂಬರರು[ಸ] ಸ್ಥಾಪಿಸಿದ ಜಮಾಅತಿಗೆ ಸೇರಿದವರು ಎಷ್ಟು ಸತ್ಯವಂತರೂ ನಿಷ್ಠಾವಂತರೂ ಆಗಿದ್ದರು ಎಂದರೆ, ಅವರು ಹಝ್ರತ್ ಪೈಗಂಬರರಿಗೋಸ್ಕರ[ಸ] ಜೀವಾರ್ಪಣೆ ಮಾಡಿದರು, ಸ್ವದೇಶವನ್ನು ಬಿಟ್ಟರು, ನಿಕಟ ಮಿತ್ರರನ್ನೂ ಸಂಬಂಧಿಕರನ್ನೂ ತ್ಯಜಿಸಿದರು. ಅವರು ಹಝ್ರತ್ ಪ್ರವಾದಿಗೋಸ್ಕರ[ಸ] ಎಲ್ಲವನ್ನೂ ನಿರ್ಲಕ್ಷಿಸಿದರು. ಇದೆಂತಹ ಬಲಿಷ್ಠವಾದ ಪ್ರಭಾವವಾಗಿತ್ತು! ಈ ಪ್ರಭಾವಶಕ್ತಿಯನ್ನು ಶತ್ರುಗಳು ಕೂಡ ಒಪ್ಪಿಕೊಂಡಿರುವರು. ಅವರ ಪ್ರಭಾವದ ಶೃಂಖಲೆ ಕೊನೆಗೊಂಡಿಲ್ಲ, ಅದು ಇಂದಿನ ತನಕ ಜಾರಿಯಲ್ಲಿದೆ. ಪವಿತ್ರ ಖುರ್‌ಆನಿನ ಉಪದೇಶಗಳಲ್ಲಿ ಅದೇ ಪ್ರಭಾವ ಮತ್ತು ಅದೇ ಅನುಗ್ರಹಗಳು ಈಗಲೂ ಇವೆ. ಅದರ ಪ್ರಭಾವದ ಇನ್ನೊಂದು ಉದಾಹರಣೆ ಸಹ ಪ್ರಸ್ತಾಪಿಸುತ್ತೇನೆ. ಅದೇನೆಂದರೆ **ಇಂಜೀಲ್** (ಬೈಬಲಿನ ಹೊಸ ಒಡಂಬಡಿಕೆ) ಎಂಬ ಗ್ರಂಥದ ಕುರಿತು

ಗೊತ್ತಾಗುವುದೇ ಇಲ್ಲ. ಮೂಲ **ಇಂಜೀಲ್** ಗ್ರಂಥ ಯಾವುದು, ಅದು ಯಾವ ಭಾಷೆಯಲ್ಲಿದೆ ಮತ್ತು ಎಲ್ಲಿದೆ ಎನ್ನುವುದರ ಕುರಿತು ಕ್ರೈಸ್ತರಿಗೆ ಕೂಡ ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಪವಿತ್ರ ಖುರ್‌ಆನ್ ಸಂರಕ್ಷಿಸಲ್ಪಡುತ್ತಾ ಬಂದಿದೆ. ಅದರ ಒಂದು ಪದ ಮತ್ತು ಒಂದು ಬಿಂದು ಕೂಡ ಆಚೆ ಈಚೆ ಆಗಲು ಸಾಧ್ಯವಿಲ್ಲ. ಅದು ಎಷ್ಟು ಸಂರಕ್ಷಿಸಲ್ಪಟ್ಟಿದೆ ಎಂದರೆ ಅದನ್ನು ಬಾಯಿಪಾಠ ಮಾಡಿದ ಲಕ್ಷಾಂತರ ಜನರು ಪ್ರತಿಯೊಂದು ದೇಶದಲ್ಲೂ ಪ್ರತಿಯೊಂದು ಜನಾಂಗದಲ್ಲೂ ಇದ್ದಾರೆ. ಅವರು ಪರಸ್ಪರ ಐಕ್ಯಮತ ಹೊಂದಿದ್ದಾರೆ. ಅವರು ಯಾವಾಗಲೂ ಪವಿತ್ರ ಖುರ್‌ಆನನ್ನು ನೆನಪಿನಲ್ಲಿಡುತ್ತಾರೆ ಮತ್ತು ಕಂಠಪಾಠ ಓದಿ ಹೇಳುತ್ತಾರೆ. ಇದು ಹಝ್ರತ್ ಪೈಗಂಬರರ(ಸ) ಅನುಗ್ರಹಗಳು ಮತ್ತು ಜೀವಂತ ಅನುಗ್ರಹಗಳು ಅಲ್ಲವೇ ಎಂದು ಈಗ ಹೇಳಿರಿ. ಹಝ್ರತ್ ಪೈಗಂಬರ್(ಸ) ಜೀವಂತವಾಗಿದ್ದಾರೆಂದು ಇದರಿಂದ ಸಾಬೀತಾಗುವುದಿಲ್ಲವೇ?

ಪವಿತ್ರ ಖುರ್‌ಆನ್ ಸಂರಕ್ಷಿಸಲ್ಪಟ್ಟುದರಿಂದಲೂ ಹದೀಸಿನಲ್ಲಿ ಹೇಳಿದ ಪ್ರಕಾರ ಪ್ರತಿ ಶತಮಾನದ ಆದಿ ಭಾಗದಲ್ಲಿ **ಮುಜದ್ದಿದ್** (ಧರ್ಮ ಸುಧಾರಕ) ಆಗಮಿಸುವುದರಿಂದಲೂ ಮತ್ತು ಈಗಿನ ತನಕ ಜಾರಿಯಲ್ಲಿರುವ ಹಝ್ರತ್ ಪೈಗಂಬರರ(ಸ) ಪ್ರಭಾವ ಮತ್ತು ಅನುಗ್ರಹಗಳಿಂದಲೂ ಅವರು ಜೀವಂತರಾಗಿರುವ ಪ್ರವಾದಿ ಎನ್ನುವುದು ಸಾಬೀತು ಆಗುವುದಿಲ್ಲವೇ? ಈಗ ಚಿಂತಿಸಬೇಕಾದ ವಿಷಯವೇನೆಂದರೆ, ಹಝ್ರತ್ ಈಸಾ(ಅ) ಜೀವಿಸಿರುವರೆಂಬ ನಂಬಿಕೆಯಿಂದ ಲೋಕಕ್ಕೆ ಉಂಟಾದ ಲಾಭವೇನು? ಇದರಿಂದ ಸ್ವಭಾವಗುಣಗಳ ಮತ್ತು ಕರ್ಮಗಳ ಸುಧಾರಣೆ ಆಯಿತೇ ಅಥವಾ ಅದರಿಂದ ಕೆಡುಕು ತಲೆದೋರಿತೇ? ಈ ವಿಷಯದ ಬಗ್ಗೆ ಚಿಂತಿಸುವಷ್ಟೇ ಪ್ರಮಾಣದಲ್ಲಿ ಅದರ ಕೆಡುಕುಗಳು ಗೊತ್ತಾಗುತ್ತಾ ಹೋಗುವುವು. ನಾನು ಸತ್ಯವಾಗಿ ಹೇಳುತ್ತೇನೆ, ಈ ನಂಬಿಕೆಯಿಂದ ಇಸ್ಲಾಮಿಗೆ ಬಹಳಷ್ಟು ಹಾನಿ ಉಂಟಾಗಿದೆ. ನಲ್ವತ್ತು ಕೋಟಿಗಳಷ್ಟು ಜನರು ಕ್ರೈಸ್ತರಾಗಿದ್ದಾರೆ. ಅವರು ಸತ್ಯದೇವನನ್ನು ಬಿಟ್ಟು ಒಬ್ಬ ಬಲಹೀನ ಮನುಷ್ಯನನ್ನು ದೇವನನ್ನಾಗಿ ಮಾಡಿದ್ದಾರೆ. ಕ್ರೈಸ್ತಧರ್ಮ ಲೋಕಕ್ಕೆ ಏನು "ಪ್ರಯೋಜನ" ನೀಡಿದೆ ಎಂಬುದು ಸ್ಪಷ್ಟ. ಕ್ರೈಸ್ತ ಧರ್ಮದ ಮೂಲಕ ಅನೇಕ ಕೆಟ್ಟ ಸ್ವಭಾವಗುಣಗಳು ಲೋಕದಲ್ಲಿ ಹಬ್ಬಿವೆ ಎಂದು ಕ್ರೈಸ್ತರು ಸ್ವತಃ ಅಂಗೀಕರಿಸುತ್ತಾರೆ. ಏಕೆಂದರೆ ಒಬ್ಬನ ಪಾಪಗಳ ಹೊಣೆಯನ್ನು ಬೇರೊಬ್ಬನಿಗೆ ಒಪ್ಪಿಸಲಾಗಿದೆ ಎಂಬ ಧರ್ಮೋಪದೇಶ ಲಭಿಸಿದರೆ ಮನುಷ್ಯನು ಪಾಪಕೃತ್ಯ ಮಾಡಲು ಧೈರ್ಯಪಡುತ್ತಾನೆ. ಪಾಪವು

ಮನುಕುಲಕ್ಕೆ ಒಂದು ಅಪಾಯಕರ ವಿಷವಾಗಿದೆ. ಅದನ್ನು ಕ್ರೈಸ್ತಧರ್ಮ ಹಬ್ಬಿಸಿದೆ. ಈ ರೀತಿಯಾಗಿ ಈ ನಂಬಿಕೆಯಿಂದ ಉಂಟಾಗಿರುವ ಹಾನಿ ಇನ್ನಷ್ಟು ವರ್ಧಿಸುತ್ತಿದೆ.

ಈಸಾ ಮಸೀಹ್[ಅ] ಜೀವಿಸಿರುವರೆಂಬ ತಪ್ಪು ನಂಬಿಕೆ ಹೊಂದಿದುದಕ್ಕೆ ನಾನು ಈ ಕಾಲದ ಜನರನ್ನು ಮಾತ್ರ ಆಕ್ಷೇಪಿಸುವುದಿಲ್ಲ. ಹಿಂದಿನ ಕಾಲದ ಕೆಲವರು ಕೂಡ ತಪ್ಪು ಮಾಡಿದ್ದಾರೆ. ಆದರೆ ಅವರು ತಪ್ಪು ಮಾಡಿ ಕೂಡ ಪುಣ್ಯ ಗಳಿಸಿದರು. ಏಕೆಂದರೆ **ಮುಜ್ತಹಿದ್**[*1] ಬಗ್ಗೆ ಹೀಗೆ ಬರೆಯಲಾಗಿವೆ: **قد يخطئ ويصيب – ಖದ್ ಯುಖ್‌ತಿಉ ವ ಯುಸೀಬು** – ಕೆಲವು ಸಾರಿ **ಮುಜ್ತಹಿದ್** ತನ್ನ ಶೋಧನೆಯಲ್ಲಿ ತಪ್ಪು ಮಾಡುತ್ತಾನೆ. ಕೆಲವು ಸಾರಿ ಸರಿಯಾದ ನಿರ್ಣಯಕ್ಕೆ ಬರುತ್ತಾನೆ. ಆದರೆ ಎರಡು ಸ್ಥಿತಿಗಳಲ್ಲೂ ಅವನಿಗೆ ಪುಣ್ಯ ಲಭಿಸುತ್ತದೆ. ವಾಸ್ತವದಲ್ಲಿ ಅವರಿಂದ ಈ ವಿಷಯ ಮರೆಯಾಗಿರಿಸಲು ದೇವೇಚ್ಛೆ ಬಯಸಿತು. ಅವರು ಅದರ ಬಗ್ಗೆ ತಿಳುವಳಿಕೆ ಇಲ್ಲದವರಾಗಿದ್ದರು. **ಅಸ್‌ಹಾಬ್ ಕಹ್‌ಫಿ**ನವರ[*2] ಹಾಗೆ ಈ ವಿಷಯ ಅವರಿಗೆ ಮರೆಯಾಗಿತ್ತು. ನನಗೂ ಹೀಗೆ ದಿವ್ಯವಾಣಿ ಲಭಿಸಿತ್ತು:

اَمْ حَسِبْتَ اَنَّ اَصْحٰبَ الْكَهْفِ وَالرَّقِيْمِ ۙ كَانُوْا مِنْ اٰيٰتِنَا عَجَبًا

**ಅಮ್ ಹಸಿಬ್‌ತ ಅನ್ನ ಅಸ್‌ಹಾಬುಲ್ ಕಹ್‌ಫಿ ವರ್‌ರಖೀಮಿ ಕಾನೂ ಮಿನ್ ಆಯಾತಿನಾ ಅಜಬ** – ಗುಹಾನಿವಾಸಿಗಳು ಮತ್ತು ಶಿಲಾ ಲೇಖನಗಳ ಜನರು ನಮ್ಮ ದೃಷ್ಟಾಂತಗಳಲ್ಲಿ ಒಂದು ಅದ್ಭುತವೆಂದು ನೀನು ಭಾವಿಸುತ್ತೀಯೋ?

ಇದೇ ರೀತಿ ಹಝ್ರತ್ ಈಸಾ ಮಸೀಹರ[ಅ] ಜೀವಿತ ಮತ್ತು ಮರಣದ ವಿಷಯವು ಒಂದು ಅದ್ಭುತಕರವಾದ ರಹಸ್ಯವಾಗಿದೆ. ಈಸಾ ಮಸೀಹರು[ಅ] ಮೃತಪಟ್ಟಿರುವರು ಎಂದು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಸಾಬೀತುಗೊಳಿಸುತ್ತದೆ ಮತ್ತು ಹದೀಸುಗಳಿಂದಲೂ ಇದು ಸಾಬೀತಾಗುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರರು[ಸ] ನಿಧನಗೊಂಡಾಗ ಅದನ್ನು ಸಮರ್ಥಿಸಲು ಸಾಕ್ಷ್ಯಾಧಾರವಾಗಿ ನೀಡಿದ ಪವಿತ್ರ ಖುರ್‌ಆನಿನ ವಚನ ಸಹ ಇದನ್ನೇ ಸಾಬೀತುಗೊಳಿಸುತ್ತದೆ. ಇಷ್ಟೆಲ್ಲ ವಿಷಯಗಳು ಪ್ರಕಟಗೊಂಡರೂ ಅಲ್ಲಾಹನು ಈ ವಿಷಯವನ್ನು ಗುಟ್ಟಾಗಿರಿಸಿದನು ಮತ್ತು ಆಗಮಿಸಲಿರುವ ವಾಗ್ದತ್ತ ವ್ಯಕ್ತಿಗೋಸ್ಕರ ರಹಸ್ಯವಾಗಿರಿಸಿದನು. ಆ ವಾಗ್ದತ್ತ ಪುರುಷ ಬಂದಾಗ ಅಲ್ಲಾಹನು ಈ ರಹಸ್ಯವನ್ನು ಬಹಿರಂಗಗೊಳಿಸಿದನು.

* 1. ಧಾರ್ಮಿಕ ವಿಷಯಗಳ ಬಗ್ಗೆ ಪವಿತ್ರ ಖುರ್‌ಆನ್, ಪ್ರವಾದಿಚರ್ಯೆ, ಹದೀಸ್‌ಗಳ ಆಧಾರದಲ್ಲಿ ತಾರ್ಕಿಕವಾಗಿ ಚಿಂತಿಸಿ ಒಂದು ನಿರ್ಣಯಕ್ಕೆ ಬರುವ ಇಸ್ಲಾಮಿಕ ವಿದ್ವಾಂಸ.

* 2. ಗುಹಾವಾಸಿಗಳು.

ಅಲ್ಲಾಹನು ತನ್ನ ಜಾಣ್ಮೆ ಪ್ರಕಾರ ಕೆಲವು ವಿಷಯಗಳನ್ನು ತಾನು ಇಚ್ಛಿಸುವ ತನಕ ರಹಸ್ಯವಾಗಿಡುತ್ತಾನೆ ಮತ್ತು ತಾನು ಇಚ್ಛಿಸುವಾಗ ಬಹಿರಂಗಗೊಳಿಸುತ್ತಾನೆ. ಆದುದರಿಂದ ಅಲ್ಲಾಹನು ಈ ವಿಷಯವನ್ನು ಒಂದು ಸಮಯದ ತನಕ ಗುಟ್ಟಾಗಿರಿಸಿದನು. ಈಗ ಆಗಮಿಸಲಿದ್ದ ವಾಗ್ದತ್ತ ಪುರುಷನು ಆಗಮಿಸಿರುವರು. ಆ ವ್ಯಕ್ತಿಯ ಕೈಯಲ್ಲಿ ಈ ರಹಸ್ಯವನ್ನು ಬಹಿರಂಗಪಡಿಸುವ ಕೀಲಿಗೈ ಇತ್ತು. ಆ ವ್ಯಕ್ತಿ ಅದನ್ನು ತೆರೆದು ತೋರಿಸಿದನು. ಈಗ ಯಾರಾದರೂ ನಂಬುವುದಿಲ್ಲವಾದರೆ ಮತ್ತು ಹಠದೋರುವುದಾದರೆ ಆತ ಅಲ್ಲಾಹನಿಗೆ ವಿರುದ್ಧವಾಗಿ ನಿಲ್ಲುವವನಾಗುತ್ತಾನೆ.

ಒಟ್ಟಿನಲ್ಲಿ, **"ಈಸಾ ಮಸೀಹರ ಮರಣ"** ಎಂಬುದು ಈಗ ಯಾವುದೇ ರೀತಿಯಲ್ಲಿ ರಹಸ್ಯವಾಗಿರದ ಒಂದು ವಿಷಯವಾಗಿ ಬಿಟ್ಟಿದೆ. ಎಲ್ಲ ರೀತಿಗಳಲ್ಲೂ ಅದು ಸ್ಪಷ್ಟಗೊಂಡಿದೆ. ಪವಿತ್ರ ಖುರ್‌ಆನಿನಿಂದ ಹಝ್ರತ್ ಈಸಾ ಮಸೀಹರ(ಅ) ಮರಣ ಸಾಬೀತಾಗುತ್ತದೆ ಮತ್ತು ಹದೀಸುಗಳು ಅದನ್ನು ಬೆಂಬಲಿಸುತ್ತವೆ. ಹಝ್ರತ್ ಪೈಗಂಬರರ(ಸ) **'ಮಿಅ್‌ರಾಜ್'*** ಘಟನೆ ಹಝ್ರತ್ ಈಸಾ ಮಸೀಹರ(ಅ) ಮರಣವನ್ನು ಸಾಬೀತುಗೊಳಿಸುತ್ತದೆ. ಹಝ್ರತ್ ಪೈಗಂಬರರು(ಸ) ಸ್ವತಃ ಅದಕ್ಕೆ ಸಾಕ್ಷ್ಯ ನುಡಿದಿರುವರು. ಏಕೆಂದರೆ ಅವರು **ಮಿಅ್‌ರಾಜ್** ರಾತ್ರಿಯಂದು ಹಝ್ರತ್ ಈಸಾರನ್ನು(ಅ) ಹಝ್ರತ್ ಯಹ್‌ಯಾರೊಂದಿಗೆ(ಅ) ಇರುವುದಾಗಿ ಕಂಡರು.

قُلْ سُبْحَانَ رَبِّيْ هَلْ كُنْتُ اِلَّا بَشَرًا رَّسُوْلًا

**ಖುಲ್ ಸುಬ್‌ಹಾನ ರಬ್ಬೀ ಹಲ್ ಕುನ್‌ತು ಇಲ್ಲಾ ಬಶರರ್ರಸೂಲ.** ಅರ್ಥ: ಹೇಳು, ನನ್ನ ಪ್ರಭು ಪರಿಶುದ್ಧನು. ನಾನೊಬ್ಬ ಸಂದೇಶವಾಹಕನಾದ ಮನುಷ್ಯನು ಮಾತ್ರವಾಗಿದ್ದೇನೆ. **(ಪವಿತ್ರ ಖುರ್‌ಆನ್ 17:94)** ಎಂಬ ಪವಿತ್ರ ಖುರ್‌ಆನಿನ ವಚನ ಈಸಾ ಮಸೀಹ್(ಅ) ಜೀವಂತವಾಗಿ ಆಕಾಶಕ್ಕೆ ಏರಿ ಹೋಗುವುದನ್ನು ನಿರಾಕರಿಸುತ್ತದೆ. ಏಕೆಂದರೆ ಮಕ್ಕದ ಅವಿಶ್ವಾಸಿಗಳು ಹಝ್ರತ್ ಪೈಗಂಬರರೊಡನೆ(ಸ) ಆಕಾಶಕ್ಕೇರಿ ಹೋಗುವ ಅದ್ಭುತ ಕೃತ್ಯ ತೋರಿಸಲು ಹೇಳಿದಾಗ ಅಲ್ಲಾಹನು ಹಝ್ರತ್ ಪೈಗಂಬರರೊಡನೆ(ಸ) ಹೀಗೆ ಉತ್ತರ ಕೊಡಲು ಹೇಳಿದನು: قُلْ سُبْحَانَ رَبِّيْ هَلْ كُنْتُ اِلَّا بَشَرًا رَّسُوْلًا – **ಖುಲ್ ಸುಬ್‌ಹಾನ ರಬ್ಬೀ ಹಲ್ ಕುನ್‌ತು ಇಲ್ಲಾ ಬಶರರ್ರಸೂಲ** – ನೀನು ಹೇಳು ನನ್ನ ಪ್ರಭು ಪರಿಶುದ್ಧನು. ನಾನೊಬ್ಬ ಸಂದೇಶವಾಹಕನಾದ ಮನುಷ್ಯನು ಮಾತ್ರ ಆಗಿದ್ದೇನೆ. **(ಪವಿತ್ರ ಖುರ್‌ಆನ್ 17:94).**

---

1 * ಅದೊಂದು ಆಧ್ಯಾತ್ಮಿಕ ದರ್ಶನವಾಗಿತ್ತು; ಶಾರೀರಿಕವಾದುದಾಗಿರಲಿಲ್ಲ.

2 * ಎಂದರೆ, ಹಝ್ರತ್ ಪೈಗಂಬರರು(ಸ) ದರ್ಶನದಲ್ಲಿ ಹಝ್ರತ್ ಈಸಾ ಮಸೀಹ್‌ರನ್ನು(ಅ) ಮೃತಪಟ್ಟ ಹಝ್ರತ್ ಯಹ್‌ಯ(ಅ) ಪ್ರವಾದಿಯೊಂದಿಗೆ ಕಂಡರು.

فِيهَا تَحْيَوْنَ وَفِيهَا تَمُوتُونَ وَمِنْهَا تُخْرَجُونَ

**ಫೀಹಾತಹ್‌ಯೌನ ವಫೀಹಾ ತಮೂತೂನ** – ಅದರಲ್ಲಿಯೇ (ಭೂಮಿಯಲ್ಲಿಯೇ) ನೀವು ಬದುಕುವಿರಿ ಅದರಲ್ಲೇ ಮಡಿಯುವಿರಿ. **(ಪವಿತ್ರ ಖುರ್‌ಆನ್ 7:26).** ಆದ್ದರಿಂದಲೇ "ನಾನೊಬ್ಬ ಮನುಷ್ಯನಾಗಿರುವ ಕಾರಣದಿಂದ ಆಕಾಶಕ್ಕೆ ಏರಿ ಹೋಗಲಾರೆ" ಎಂದು ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಹೇಳಿದರು.

ಈ ಪ್ರಶ್ನೆಯಿಂದ ಮಕ್ಕದ ಅವಿಶ್ವಾಸಿಗಳ ಉದ್ದೇಶವೂ ಇದೇ ಆಗಿತ್ತು. ಮನುಷ್ಯನು ಭೂಮಿಯಲ್ಲಿಯೇ ಜೀವಿಸುತ್ತಾನೆ ಮತ್ತು ಸಾಯುತ್ತಾನೆ ಎಂದು ಅವಿಶ್ವಾಸಿಗಳು ಮೊದಲೇ ಆಲಿಸಿದ್ದರು. ಆದುದರಿಂದ ಅವರು ದುರುದ್ದೇಶದಿಂದಲೇ ಈ ಬೇಡಿಕೆಯನ್ನು ಇರಿಸಿದ್ದರು. ಅವರ ಕುತಂತ್ರ ವ್ಯರ್ಥವಾಗುವ ರೀತಿಯಲ್ಲಿ ಅದಕ್ಕೆ ಉತ್ತರಕೊಡಲಾಯಿತು. ಈಸಾ ಮಸೀಹ್[ಅ] ಮೃತರಾಗಿರುವರೆಂಬುದು ಸಾಬೀತಾದ ವಿಷಯವಾಗಿದೆ. ಆದರೆ ಅದರ ಬಗ್ಗೆ ನಿರ್ಲಕ್ಷ್ಯ ಉಂಟಾಗುವಂತೆ ಮಾಡಿದ್ದು ಮತ್ತು ಪ್ರಜ್ಞಾವಂತರಿಗೂ ಅದರ ಬಗ್ಗೆ ಗಮನವಿರದೇ ಹೋದದ್ದು ಒಂದು ದೃಷ್ಟಾಂತವಾಗಿದೆ.

ಈ ಕಾಲಘಟ್ಟಕ್ಕೆ ಮುಂಚಿನ ಜನರು ಕ್ಷಮಾರ್ಹರಾಗಿದ್ದಾರೆ ಎಂದು ನೆನಪಿಡಿರಿ. ಸ್ಪಷ್ಟವಾದ ಸಾಕ್ಷ್ಯಾಧಾರಗಳು ಇರದಿದ್ದ ಕಾರಣದಿಂದ ಅವರಿಗೆ ಇದರ ಬಗ್ಗೆ ಸರಿಯಾಗಿ ಗೊತ್ತಿರಲಿಲ್ಲ. ಆ ಕಾಲದಲ್ಲಿ ಅವರು ತಮ್ಮ ಸ್ವಂತ ಪ್ರಯತ್ನದಿಂದ ಏನನ್ನು ಮನವರಿಕೆ ಮಾಡಿದ್ದರೋ ಅದಕ್ಕೆ ಅವರಿಗೆ ಅಲ್ಲಾಹನಿಂದ ಪ್ರತಿಫಲ ಲಭಿಸುವುದು. ಆದರೆ ಈಗ ಅಂತಹ ಕಾಲವಲ್ಲ. ಇಂದಿನ ಕಾಲಘಟ್ಟದಲ್ಲಿ ಅಲ್ಲಾಹನು ಆ ಮರೆಯನ್ನು ನೀಗಿಸಿರುವನು ಮತ್ತು ಆ ನಿಗೂಢ ರಹಸ್ಯವನ್ನು ಹಾಗೂ ಈ ಸಮಸ್ಯೆಯ ಕೆಟ್ಟ ಮತ್ತು ಭಯಾನಕ ಪ್ರಭಾವಗಳನ್ನು ಬಹಿರಂಗಪಡಿಸಿರುವನು. ಇಸ್ಲಾಮ್ ಈಗ ಅವನತಿಯ ಸ್ಥಿತಿಯಲ್ಲಿದೆ ಎಂದು ನೀವು ನೋಡುತ್ತಿರುವಿರಿ. ಈಸಾ ಮಸೀಹರು[ಅ] ಜೀವಿಸಿರುವರು ಎಂಬ ವಿಶ್ವಾಸವೇ ಕ್ರೈಸ್ತರ ಆಯುಧವಾಗಿದೆ. ಈ ಆಯುಧ ಬಳಸಿ ಕ್ರೈಸ್ತರು ಇಸ್ಲಾಮನ್ನು ಆಕ್ರಮಿಸುತ್ತಿದ್ದಾರೆ. ಮುಸ್ಲಿಮರ ಮಕ್ಕಳು ಕ್ರೈಸ್ತರಿಗೆ ಬಲಿಯಾಗುತ್ತಿದ್ದಾರೆ. ನಾನು ಸತ್ಯವಾಗಿ ಹೇಳುತ್ತೇನೆ – ಇಂತಹ ವಿಷಯಗಳನ್ನು ಪ್ರಚಾರಮಾಡಿ ಕ್ರೈಸ್ತರು ಜನರನ್ನು ದಾರಿತಪ್ಪಿಸುತ್ತಿದ್ದಾರೆ. ಈಸಾ ಮಸೀಹರಿಗೆ[ಅ] ಇರುವುದಾಗಿ ಮುಸ್ಲಿಮರು ಅವಿವೇಕದಿಂದ ಹೇಳುತ್ತಿರುವ ವಿಶೇಷತೆಗಳನ್ನು ಕ್ರೈಸ್ತರು ಶಾಲೆಗಳಲ್ಲೂ ಕಾಲೇಜುಗಳಲ್ಲೂ ಪ್ರಸ್ತಾಪಿಸಿ ಮುಸ್ಲಿಮ್ ವಿದ್ಯಾರ್ಥಿಗಳನ್ನು ಇಸ್ಲಾಮಿನಿಂದ ದೂರಸರಿಸುತ್ತಿದ್ದಾರೆ. ಆದುದರಿಂದ

ಈಗ ಮುಸ್ಲಿಮರಿಗೆ ಎಚ್ಚರಿಕೆ ನೀಡಲು ಅಲ್ಲಾಹನು ಬಯಸಿರುವನು.

ಒಟ್ಟಿನಲ್ಲಿ, ಈಗ ಮುಸ್ಲಿಮರು ಎಚ್ಚರಿಕೆಯಿಂದ ಇರಬೇಕು ಎಂದು ಅಲ್ಲಾಹನು ಇಚ್ಛಿಸುತ್ತಾನೆ. ಈಸಾ ಮಸೀಹರ(ಅ) ಮೃತ್ಯುವಿನ ವಿಷಯಕ್ಕೆ ಒತ್ತುಕೊಡುವುದು ಮತ್ತು ಈಸಾ ಮಸೀಹ್(ಅ) ಜೀವಂತವಾಗಿ ಆಕಾಶಕ್ಕೆ ಏರಿ ಹೋಗಿರುವರೆಂಬ ವಿಶ್ವಾಸವನ್ನು ಒಪ್ಪಿಕೊಳ್ಳದೇ ಇರುವುದು ಇಸ್ಲಾಮ್ ಧರ್ಮದ ಅಭಿವೃದ್ಧಿಗೋಸ್ಕರ ಅತ್ಯಂತ ಅಗತ್ಯವಾದ ಸಂಗತಿಯಾಗಿದೆ. ಆದರೆ ನನ್ನ ವಿರೋಧಿಗಳು ತಮ್ಮ ದೌರ್ಭಾಗ್ಯದಿಂದ ಈ ರಹಸ್ಯವನ್ನು ಮನವರಿಕೆ ಮಾಡುವುದಿಲ್ಲ ಮತ್ತು ಅನಾವಶ್ಯಕವಾಗಿ ಗದ್ದಲವೆಬ್ಬಿಸುತ್ತಾರೆ ಎಂಬುದು ಖೇದಕರ. ನಾವೆಲ್ಲರೂ ಸೇರಿ ಈಸಾ ಮಸೀಹರು(ಅ) ಮೃತರಾದ ಬಗ್ಗೆ ಒತ್ತಿ ಹೇಳಿದರೆ ಈ ಕ್ರೈಸ್ತ ಧರ್ಮ ಬಾಕಿಯಾಗಿ ಉಳಿಯಲಾರದು ಎಂದು ಈ ಅವಿವೇಕಿಗಳು ಅರ್ಥ ಮಾಡಿಕೊಳ್ಳುತ್ತಿದ್ದರೆ ಎಷ್ಟು ಚೆನ್ನ! ಇಸ್ಲಾಮಿನ ಜೀವನ ಈಸಾ ಮಸೀಹರ(ಅ) ಮರಣದಲ್ಲಿದೆ ಎಂದು ನಾನು ದೃಢವಾಗಿ ಹೇಳುತ್ತೇನೆ. ಈಸಾ ಮಸೀಹ್(ಅ) ಜೀವಂತರಾಗಿ ಇಲ್ಲ, ಅವರು ಮರಣಹೊಂದಿರುವರು ಎಂದು ಸಾಬೀತಾದರೆ ಅವರ ಧರ್ಮದಲ್ಲಿ ಬಾಕಿಯಾಗಿ ಉಳಿಯುವುದಾದರೂ ಏನೆಂದು ಸ್ವತಃ ಕ್ರೈಸ್ತರೊಂದಿಗೆ ವಿಚಾರಿಸಿರಿ. ಈ ಒಂದು ವಿಷಯ ಅವರ ಧರ್ಮವನ್ನು ಬೇರು ಸಹಿತ ಕಿತ್ತು ಹಾಕುವುದು ಎಂದು ಕ್ರೈಸ್ತರು ಸ್ವತಃ ಹೇಳುತ್ತಾರೆ, ಆದರೆ ಮುಸ್ಲಿಮರು ಈಸಾ ಮಸೀಹ್ ಜೀವಿಸಿರುವರೆಂದು ನಂಬಿ ಕ್ರೈಸ್ತರಿಗೆ ಶಕ್ತಿ ನೀಡುತ್ತಾರೆ ಮತ್ತು ಇಸ್ಲಾಮಿಗೆ ಹಾನಿಯನ್ನು ಉಂಟುಮಾಡುತ್ತಿದ್ದಾರೆ. ಅವರ ಉದಾಹರಣೆ ತಾನು ಕುಳಿತುಕೊಂಡಿರುವ ಮರದ ಕೊಂಬೆಯನ್ನು ಸ್ವತಃ ಕಡಿಯುವವನ ಹಾಗಿದೆ.

ಇಸ್ಲಾಮಿಗೆ ವಿರುದ್ಧವಾಗಿ ಕ್ರೈಸ್ತರು ಬಳಸುತ್ತಿದ್ದ ಆಯುಧವನ್ನು ಮುಸ್ಲಿಮರು ತಮ್ಮ ಕೈಯಲ್ಲಿ ಎತ್ತಿಕೊಂಡರು.* ಅವರು ತಮ್ಮ ತಿಳಿಗೇಡಿತನದಿಂದ ಅದನ್ನು ಚಲಾಯಿಸಿದರು. ಅದರ ಮೂಲಕ ಇಸ್ಲಾಮ್ ಧರ್ಮಕ್ಕೆ ಎಷ್ಟೋ ಹಾನಿ ಉಂಟಾಯಿತು. ಆದರೆ ಸಂತೋಷಕರವಾದುದೇನೆಂದರೆ, ಅಲ್ಲಾಹನು ತಕ್ಕ ಸಂದರ್ಭದಲ್ಲಿ ಮುಸ್ಲಿಮರಿಗೆ ಅದರ ಬಗ್ಗೆ ಮುನ್ನೆಚ್ಚರಿಕೆ ನೀಡಿದನು ಮತ್ತು ಶಿಲುಬೆಯನ್ನು ಒಡೆದು ಹಾಕಲು ಅಸಾಧಾರಣವಾದ ಆಯುಧ ನೀಡಿದನು. ಅದನ್ನು ಬಳಸಲು ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸಿರುವನು. ಅಲ್ಲಾಹನ ಅನುಗ್ರಹ ಮತ್ತು ಸಹಾಯದಿಂದ ಈಸಾ

---

* ಆಶ್ಚರ್ಯಕರವಾದುದೇನೆಂದರೆ ಕ್ರೈಸ್ತರು ಮುಸ್ಲಿಮರ ಕೊರಳು ಕತ್ತರಿಸಲು ಈ ಅಸ್ತ್ರವನ್ನು ಬಳಸುತ್ತಾರೆ. ಮುಸ್ಲಿಮರು ಅವರಿಗೆ ಸಹಾಯ ಮಾಡಲು ತಮ್ಮ ಕೊರಳನ್ನು ಅವರಿಗೆ ಒಡ್ಡುತ್ತಾರೆ. **(ಬದ್ರ್ ಪತ್ರಿಕೆಯ ವರದಿ 26–1–1906)**

ಮಸೀಹರ ಮರಣವೆಂಬ ಆಯುಧವು ಶಿಲುಬೆಯ ಧರ್ಮವನ್ನು (ಕ್ರೈಸ್ತ ಧರ್ಮವನ್ನು) ಎಷ್ಟು ಬಲಹೀನಗೊಳಿಸಿದೆ ಎಂಬುದು ರಹಸ್ಯವಾದ ವಿಷಯವೇನೂ ಅಲ್ಲ. ಅವರ ಧರ್ಮವನ್ನು ನಾಶಮಾಡಬಲ್ಲ ಪಂಗಡ ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ ಎಂದು ಕ್ರೈಸ್ತಧರ್ಮ ಮತ್ತು ಅದರ ಹಿತೈಷಿಗಳು ಮನವರಿಕೆ ಮಾಡಿದ್ದಾರೆ. ಇದೇ ಕಾರಣದಿಂದ ಅವರು ಎಲ್ಲ ಧರ್ಮಗಳನ್ನು ಎದುರಿಸಲು ಸಿದ್ಧರಾಗುತ್ತಾರೆ. ಆದರೆ ಈ ಜಮಾಅತನ್ನು ಎದುರಿಸಲು ಬರುವುದಿಲ್ಲ. (ಲಾಹೋರಿನ) ಬಿಷಪರನ್ನು ಸಂವಾದಕ್ಕೆ ಕರೆಯಲಾಗಿತ್ತು. ಕೆಲವು ಇಂಗ್ಲಿಷ್ ಪತ್ರಿಕೆಗಳು ಕೂಡ ಅವರಿಗೆ ಉತ್ತೇಜನ ನೀಡಿದ್ದುವು. ಆದರೆ ಅವರು ಮುಂದೆ ಬರಲು ತಯಾರಾಗಲಿಲ್ಲ. ಇದಕ್ಕೆ ಕಾರಣವೇನೆಂದರೆ, ಕ್ರೈಸ್ತಧರ್ಮವನ್ನು ಬೇರುಸಹಿತ ಕಿತ್ತುಹಾಕಲು ಇತರರ ಬಳಿ ಇಲ್ಲದಂತಹ ಆಯುಧಗಳು ನಮ್ಮ ಬಳಿಯಲ್ಲಿವೆ. ಅವುಗಳಲ್ಲಿ ಮೊದಲನೆಯ ಆಯುಧ ಈಸಾ ಮಸೀಹರ ಮರಣವೆಂಬ ಆಯುಧವಾಗಿದೆ. ಈಸಾ ಮಸೀಹರು[ಅ] ಮೃತಪಟ್ಟಿರುವರು ಎಂದು ಸಾಬೀತುಗೊಳಿಸುವುದೇ ಮುಖ್ಯವಾದ ಉದ್ದೇಶವಲ್ಲ. ಆದರೆ ಇಸ್ಲಾಮಿಗೆ ಉಂಟಾಗಿದ್ದ ಹಾನಿಯನ್ನು ತಡೆಯಲು ಈ ಆಯುಧವನ್ನು ಬಳಸಲಾಯಿತು. ಈ ತಪ್ಪುಗ್ರಹಿಕೆಯನ್ನು ಬಹಳ ಶಕ್ತವಾದ ರೀತಿಯಲ್ಲಿ ನೀಗಿಸಲು ಅಲ್ಲಾಹನು ಬಯಸಿದನು.

**ಇಸ್ಲಾಮಿನಲ್ಲಿ ತಲೆದೋರಿರುವ ಇನ್ನಿತರ ತಪ್ಪುಗಳನ್ನು ಮತ್ತು ನವೀನಾಚಾರಗಳನ್ನು ದೂರಸರಿಸುವುದು ಕೂಡ ಮೂಲ ಉದ್ದೇಶವಾಗಿದೆ. ಈ ಜಮಾಅತ್ ಮತ್ತು ಇತರ ಮುಸ್ಲಿಮರ ಮಧ್ಯೆ ವ್ಯತ್ಯಾಸವಿಲ್ಲ ಎಂದು ಏನೂ ಯೋಚಿಸದೇ ಹೇಳುವುದು ಸರಿಯಲ್ಲ. ಇಂದಿನ ಕಾಲದ ಮುಸ್ಲಿಮರ ನಂಬಿಕೆಗಳು ವ್ಯತ್ಯಾಸಗೊಂಡಿಲ್ಲವಾದರೆ ಮತ್ತು ಈ ಜಮಾಅತಿನ ಹಾಗೂ ಇತರ ಮುಸ್ಲಿಮರ ನಂಬಿಕೆಗಳು ಒಂದೇ ಆಗಿದ್ದರೆ ಅಲ್ಲಾಹನು ಈ ಜಮಾಅತನ್ನು ನಿರರ್ಥಕವಾಗಿ ಸ್ಥಾಪಿಸಿದನೋ?** ಹೀಗೆ ಯೋಚಿಸುವುದು ಈ ಜಮಾಅತನ್ನು ತೀವ್ರ ಅವಮಾನಿಸಿದಂತೆ ಆಗಿದೆ ಮತ್ತು ಅಲ್ಲಾಹನ ಮುಂದೆ ನಿಂತುಕೊಂಡು ಧೈರ್ಯಪಟ್ಟು ಧಿಕ್ಕಾರದಿಂದ ವರ್ತಿಸುವುದಾಗಿದೆ. ಲೋಕದಲ್ಲಿ ಬಹಳ ಅಂಧಕಾರ ಕವಿದಿದೆ ಎಂದು ಅಲ್ಲಾಹನು ಪದೇ ಪದೇ ತಿಳಿಸಿರುವನು. ಅನುಷ್ಠಾನ ಕರ್ಮಗಳಲ್ಲೂ ನಂಬಿಕೆಗಳಲ್ಲೂ ಇದು ಸಂಭವಿಸಿದೆ. ಯಾವ **ತೌಹೀದ್** (ಏಕದೇವ ವಿಶ್ವಾಸ) ಸ್ಥಾಪಿಸಲು ಅಸಂಖ್ಯಾತ ಪ್ರವಾದಿಗಳೂ ಸಂದೇಶವಾಹಕರೂ ಆಗಮಿಸಿದರೋ ಮತ್ತು ಯಾವುದಕ್ಕೋಸ್ಕರ ಅವರು ಅತ್ಯಂತ ಪರಿಶ್ರಮ ನಡೆಸಿದರೋ ಅದರ ಮೇಲೆ ಕಪ್ಪು ಪರದೆ ಬಿದ್ದಿದೆ ಮತ್ತು ಜನರು ಅನೇಕ ವಿಧಗಳ ಬಹುದೇವಾರಾಧನೆಯಲ್ಲಿ

(ಶಿರ್ಕ್‌ನಲ್ಲಿ) ಮುಳುಗಿರುವರು. ಲೋಕವನ್ನು ಮೋಹಿಸಬೇಡಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಆದರೆ ಈಗ ಲೌಕಿಕ ವಸ್ತುಗಳ ಮೇಲೆ ಇರುವ ಪ್ರೀತಿ ಪ್ರತಿಯೊಬ್ಬನ ಹೃದಯವನ್ನು ಜಯಗಳಿಸಿದೆ ಮತ್ತು ಎಲ್ಲರೂ ಇದೇ ಪ್ರೀತಿಯಲ್ಲಿ ಮುಳುಗಿರುವರು. ಧರ್ಮದ ಪರವಾಗಿ ಒಣಗಿದ ಹುಲ್ಲುಕಡ್ಡಿ ನೀಗಿಸಲು ಹೇಳಿದರೆ ಕೂಡ ಅವರು ಯೋಚಿಸಲು ತೊಡಗುತ್ತಾರೆ ಮತ್ತು ಸಾವಿರಾರು ನೆವನಗಳನ್ನು ಮತ್ತು ನೆಪಗಳನ್ನು ಹೇಳುತ್ತಾರೆ. ಪ್ರತಿಯೊಂದು ರೀತಿಯ ಕೆಟ್ಟಕೆಲಸವನ್ನು ಸರಿಯೆಂದು ಭಾವಿಸುತ್ತಿದ್ದಾರೆ. ನಿಷಿದ್ಧಗೊಳಿಸಲಾದ ಕೆಲಸಗಳನ್ನು ಮಾಡಲು ಬಹಿರಂಗವಾಗಿ ಒತ್ತು ಕೊಡುತ್ತಾರೆ. ಧರ್ಮ ಸಂಪೂರ್ಣವಾಗಿ ನಿರ್ಗತಿಕ ಮತ್ತು ಅನಾಥವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಇಸ್ಲಾಮಿಗೆ ಸಹಾಯ ಮಾಡದಿದ್ದರೆ ಬೇರೆ ಯಾವ ಸಂದರ್ಭದಲ್ಲಿ ಸಹಾಯ ಮಾಡಲು ಸಾಧ್ಯ? ಇಸ್ಲಾಮ್ ಕೇವಲ ಹೆಸರಿಗೆ ಬಾಕಿಯಾಗಿ ಉಳಿದಿದೆ. ಈಗಲೂ ಅದನ್ನು ಸಂರಕ್ಷಿಸದಿದ್ದರೆ ಅದು ಅಳಿದು ಹೋಗುವುದರ ಬಗ್ಗೆ ಸಂಶಯವಿಲ್ಲ. ಅನ್ಯ ಮುಸ್ಲಿಮರ ಮತ್ತು ನಮ್ಮ ಮಧ್ಯೆ ಏನು ವ್ಯತ್ಯಾಸವಿದೆ ಎಂದು ಹೇಳುವುದು ಚೆನ್ನಾಗಿ ಯೋಚಿಸದೇ ಇರುವುದರ ಕಾರಣದಿಂದಾಗಿದೆ ಎಂದು ನಾನು ಸತ್ಯವಾಗಿಯೂ ಹೇಳುತ್ತೇನೆ. ಇದೊಂದೇ ವಿಷಯವಾಗಿದ್ದರೆ ಇಷ್ಟು ಕಷ್ಟಪಡುವ ಆವಶ್ಯಕತೆ ಏನಿತ್ತು? ಒಂದು ಜಮಾಅತ್ ಸ್ಥಾಪಿಸುವ ಆವಶ್ಯಕತೆ ಏನಿತ್ತು? ಏನೂ ಕಾಣಲು ಸಾಧ್ಯವಿಲ್ಲದಷ್ಟು ಅಂಧಕಾರ ಕವಿದಿದೆ ಎಂಬುದನ್ನು ಅಲ್ಲಾಹನು ಪದೇ ಪದೇ ಸ್ಪಷ್ಟಪಡಿಸಿ ತೋರಿಸಿದ್ದಾನೆ. ಯಾವ **ತೌಹೀದ್** (ಏಕದೇವ ವಿಶ್ವಾಸ) ಬಗ್ಗೆ ನಮಗೆ ಅಭಿಮಾನವಿತ್ತೋ ಮತ್ತು ಯಾವುದರ ಬಗ್ಗೆ ಇಸ್ಲಾಮ್ ಹೆಮ್ಮೆಪಡುತ್ತಿತ್ತೋ ಅದು ಕೇವಲ ಬಾಯಿ ಮಾತಾಗಿ ಉಳಿದಿದೆ. ಅನುಷ್ಠಾನಕರ್ಮಗಳಲ್ಲಿ ಮತ್ತು ನಂಬಿಕೆಗಳಲ್ಲಿ ಅದನ್ನು ಪಾಲಿಸುವವರು ಬಹಳ ಕಡಿಮೆ ಎಂದು ನಾವು ನೋಡುತ್ತಿದ್ದೇವೆ. ಲೋಕವನ್ನು ಮೋಹಿಸಬೇಡಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಆದರೆ ಈಗ ಪ್ರತಿಯೊಂದು ಹೃದಯ ಅದರಲ್ಲಿ ಮುಳುಗಿದೆ ಮತ್ತು ಧರ್ಮವು ಸಹಾಯಕನಿಲ್ಲದೆ ಅನಾಥ ಸ್ಥಿತಿಯಲ್ಲಿದೆ.

حُبُّ الدُّنْيَا رَأْسُ كُلِّ خَطِيْئَةٍ – **ಹುಬ್ಬುದ್ದುನ್‌ಯಾ ರಅ್‌ಸು ಕುಲ್ಲ ಖತಿಅತಿನ್ – (ಮಿಶ್ಕಾತುಲ್ ಮಸಾಬಿಹ್ ಕಿತಾಬುರ್ರಿಖಾಖ್; ಹದೀಸ್ ಸಂಖ್ಯೆ: 5212)** ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಎಂದರೆ ಲೋಕವನ್ನು ಮೋಹಿಸುವುದು ಎಲ್ಲ ತಪ್ಪುಗಳಿಗೆ ಬೇರಾಗಿದೆ. ಇದೆಷ್ಟು ಪರಿಶುದ್ಧವೂ ಸತ್ಯವೂ ಆಗಿರುವ ಮಾತಾಗಿದೆ. ಆದರೆ ಈಗ

ಪ್ರತಿಯೊಬ್ಬನು ಈ ತಪ್ಪಿನಲ್ಲಿ ಮುಳುಗಿರುವನು. ನಮ್ಮ ವಿರೋಧಿಗಳಾದ ಆರ್ಯ ಸಾಮಾಜಿಗಳು ಮತ್ತು ಕ್ರೈಸ್ತರು ತಮ್ಮ ಧರ್ಮಗಳ ನಿಜಸ್ಥಿತಿಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವರು. ಆದರೆ ಈಗ ಅವರು ಅವುಗಳನ್ನು ನಿಭಾಯಿಸಲು ಬಯಸುತ್ತಿದ್ದಾರೆ. ತಮ್ಮ ಧರ್ಮದ ಸಿದ್ಧಾಂತಗಳು ಚೆನ್ನಾಗಿಲ್ಲವೆಂದು ಕ್ರೈಸ್ತರು ಚೆನ್ನಾಗಿ ಬಲ್ಲರು. ಒಬ್ಬ ಮನುಷ್ಯನನ್ನು ದೇವನನ್ನಾಗಿ ಮಾಡುವುದು ಸರಿಯಲ್ಲ ಎಂದು ಅವರಿಗೆ ಗೊತ್ತಿದೆ. ಇಂದಿನ ಕಾಲದಲ್ಲಿ ಫಿಲೋಸಫಿ (ತತ್ವಶಾಸ್ತ್ರ), ಭೌತಶಾಸ್ತ್ರ ಮತ್ತು ವಿಜ್ಞಾನ ಅಭಿವೃದ್ಧಿಗೊಂಡಿವೆ ಮತ್ತು ಈಸಾ ಮಸೀಹ್[ಅ] ಒಬ್ಬ ಬಲಹೀನ ಮನುಷ್ಯನಾಗಿದ್ದರೆಂದೂ ಅವರಿಗೆ ಯಾವುದೇ ಶಕ್ತಿ ಸಾಮರ್ಥ್ಯಗಳಿರಲಿಲ್ಲವೆಂದೂ ಜನರು ಚೆನ್ನಾಗಿ ತಿಳಿದುಕೊಂಡಿರುವರು. ಈ ಜ್ಞಾನಗಳನ್ನು ಕಲಿತುಕೊಂಡು, ತಮ್ಮ ವೈಯಕ್ತಿಕ ಅನುಭವವನ್ನು ಇರಿಸಿಕೊಂಡು ಮತ್ತು ಈಸಾ ಮಸೀಹರ[ಅ] ಬಲಹೀನತೆಯನ್ನು ನೋಡಿಕೊಂಡು ಅವರನ್ನು ದೇವನೆಂದು ನಂಬಲು ಸಾಧ್ಯವೇ? ಖಂಡಿತವಾಗಿಯೂ ಸಾಧ್ಯವಲ್ಲ.

ಶಿರ್ಕ್ (ಬಹುದೇವಾರಾಧನೆ) ಸ್ತ್ರೀಯಿಂದ ಪ್ರಾರಂಭವಾಯಿತು. ಸ್ತ್ರೀಯಿಂದಲೇ ಅದಕ್ಕೆ ಅಸ್ತಿಭಾರ ಹಾಕಲಾಯಿತು. ಎಂದರೆ, ಅಲ್ಲಾಹನ ಆಜ್ಞೆಯನ್ನು ಬಿಟ್ಟು ಶೈತಾನನ ಆಜ್ಞೆಯನ್ನು ಅಂಗೀಕರಿಸಿದ ಹವ್ವಾರಿಂದ ಪ್ರಾರಂಭವಾಯಿತು. ಅದಲ್ಲದೇ ಈ ಬೃಹತ್ತಾದ ಬಹುದೇವಾರಾಧನೆ ಎಂದರೆ ಕ್ರೈಸ್ತ ಧರ್ಮದ ಬೆಂಬಲಿಗರು ಕೂಡ ಮಹಿಳೆಯರೇ ಆಗಿದ್ದಾರೆ. ಕ್ರೈಸ್ತಧರ್ಮ ಎಂತಹ ಧರ್ಮವೆಂದರೆ, ಮಾನವನ ಸಹಜಗುಣ ಅದನ್ನು ದೂರದಿಂದಲೇ ಒದೆಯುತ್ತದೆ ಮತ್ತು ಅದು ಎಂದೂ ಅದನ್ನು ಅಂಗೀಕರಿಸಲಾರದು. ಲೌಕಿಕಾಸಕ್ತಿ ನಡುವೆ ಬರದೇ ಇರುತ್ತಿದ್ದರೆ ಕ್ರೈಸ್ತರಲ್ಲಿ ಬಹುತೇಕ ಜನರು ಮುಸ್ಲಿಮರಾಗುತ್ತಿದ್ದರು. ಕ್ರೈಸ್ತರಲ್ಲಿ ಕೆಲವರು ರಹಸ್ಯವಾಗಿ ಮುಸ್ಲಿಮರಾಗಿದ್ದರು. ಇಸ್ಲಾಂ ಧರ್ಮದ ಮೇಲೆ ಅವರಿಗೆ ಇದ್ದ ವಿಶ್ವಾಸವನ್ನು ಅವರು ರಹಸ್ಯವಾಗಿಟ್ಟರು. ಆದರೆ ತಾವು ಮುಸ್ಲಿಮರಾಗಿದ್ದೇವೆ ಎಂದು ಸಾಯುವಾಗ ಮರಣ ಶಾಸನದಲ್ಲಿ ಪ್ರಕಟಿಸಿಕೊಂಡರು. ಅಂತಹ ಜನರಲ್ಲಿ ಹಿರಿಯ ಸರಕಾರಿ ಅಧಿಕಾರಿಗಳೂ ಇದ್ದರು. ಅವರು ಲೌಕಿಕ ಪ್ರೇಮದ ಕಾರಣದಿಂದ ತಮ್ಮ ಜೀವಿತ ಕಾಲದಲ್ಲಿ ತಮ್ಮ ಇಸ್ಲಾಂ ಧರ್ಮ ವಿಶ್ವಾಸವನ್ನು ರಹಸ್ಯವಾಗಿಟ್ಟರು. ಆದರೆ ಕೊನೆಗೆ ಅದನ್ನು ತಿಳಿಸಬೇಕಾಗಿ ಬಂತು. ಅಂತಹ ಜನರ ಹೃದಯಗಳಲ್ಲಿ ಇಸ್ಲಾಮ್ ದಾರಿಮಾಡಿದೆ ಮತ್ತು ಅದು ಅಭಿವೃದ್ಧಿಗೊಳ್ಳುತ್ತಾ ಇದೆ ಎಂದು ನಾನು ನೋಡುತ್ತಿದ್ದೇನೆ. ಆದರೆ ಲೌಕಿಕ ಆಸಕ್ತಿಗಳು

ಜನರನ್ನು ಮರೆಮಾಚಿವೆ.

ಮುಸ್ಲಿಮರಲ್ಲಿ ಆಂತರಿಕ ಒಡಕಿಗೆ ಕಾರಣ ಲೌಕಿಕ ಮೋಹವೇ ಆಗಿದೆ. ಏಕೆಂದರೆ ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೆ ಅವರು ಪ್ರಾಮುಖ್ಯತೆ ನೀಡುತ್ತಿದ್ದರೆ ಅವರಿಗೆ "ಈ ಪಂಗಡದ ಸಿದ್ಧಾಂತಗಳು ಹೆಚ್ಚು ಸ್ಪಷ್ಟವಾಗಿವೆ" ಎಂದು ಮನವರಿಕೆ ಆಗುತ್ತಿತ್ತು ಮತ್ತು ಅದನ್ನು ಅಂಗೀಕರಿಸಿ ಒಟ್ಟಾಗುತ್ತಿದ್ದರು. ಈಗ ಲೌಕಿಕ ಪ್ರೇಮದ ಕಾರಣದಿಂದ ಇಂತಹ ಕೆಡುಕುಗಳು ತಲೆದೋರಿರುವಾಗ ಇಂತಹ ಜನರನ್ನು ಮುಸ್ಲಿಮರೆಂದು ಹೇಳಲು ಹೇಗೆ ತಾನೆ ಸಾಧ್ಯ? ಅವರು ಹಾಕುವ ಹೆಜ್ಜೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಹೆಜ್ಜೆಯ ಮೇಲೆ ಅಲ್ಲ. قُلْ إِنْ كُنْتُمْ تُحِبُّوْنَ اللّٰهَ فَاتَّبِعُوْنِيْ يُحْبِبْكُمُ اللّٰهُ **– ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ** – (ಅರ್ಥ: ಹೇಳು; ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು. **(ಪವಿತ್ರ ಖುರ್‌ಆನ್ 3:32)** ಎಂದು ಅಲ್ಲಾಹನು ಸ್ವತಃ ಹಝ್ರತ್ ಪೈಗಂಬರ್‌ರೊಡನೆ(ಸ) ಹೇಳಲು ಆಜ್ಞಾಪಿಸಿದ್ದನು.

ಆದರೆ ಈಗ ಅಲ್ಲಾಹನ ಸಂಪ್ರೀತಿ ಗಳಿಸುವುದಕ್ಕೆ ಬದಲಾಗಿ ಮತ್ತು ಹಝ್ರತ್ ಪೈಗಂಬರರನ್ನು(ಸ) ಅನುಸರಿಸುವುದಕ್ಕೆ ಬದಲಾಗಿ ಲೌಕಿಕ ಪ್ರೇಮಕ್ಕೆ ಆದ್ಯತೆ ನೀಡಲಾಗುತ್ತಿದೆ. ಏನು ಇದೇ ಹಝ್ರತ್ ಪೈಗಂಬರರ(ಸ) ಅನುಸರಣೆ ಆಗಿದೆಯೇ? ಹಝ್ರತ್ ಪೈಗಂಬರ್(ಸ) ಲೌಕಿಕ ಪ್ರೇಮಿಯಾಗಿದ್ದರೇ? ಅವರು ಬಡ್ಡಿ ಪಡೆಯುತ್ತಿದ್ದರೇ? ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರಲ್ಲಿ ಅವರು ಅಸಡ್ಡೆ ತೋರಿಸುತ್ತಿದ್ದರೇ? ಅವರಲ್ಲಿ ಕಾಪಟ್ಯವಿತ್ತೇ? (ಅಲ್ಲಾಹನ ಅಭಯ ಕೋರುತ್ತೇನೆ). ಅವರು ಇತರರ ಮುಖಸ್ತುತಿ ಮಾಡುತ್ತಿದ್ದರೇ? ಅವರು ಲೌಕಿಕ ಕಾರ್ಯಗಳಿಗೆ ಧಾರ್ಮಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತಿದ್ದರೇ? ಚಿಂತಿಸಿರಿ.

ಹಝ್ರತ್ ಪೈಗಂಬರರನ್ನು(ಸ) ಅನುಸರಿಸುವುದು ಎಂದರೆ ಅವರ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆಯುವುದಾಗಿದೆ. ಆಗ ಅಲ್ಲಾಹನು ಎಂತೆಂತಹ ಅನುಗ್ರಹ ನೀಡುತ್ತಾನೆಂದು ನೀವು ನೋಡುವಿರಿ. ಸಹಾಬಿಯರು ಹಝ್ರತ್ ಪೈಗಂಬರರ(ಸ) ನಡೆವಳಿಕೆಯನ್ನು ಅನುಸರಿಸಿದ್ದರು. ಅನಂತರ ಅವರನ್ನು ಅಲ್ಲಾಹನು ಎಲ್ಲಿಂದ ಎಲ್ಲಿಗೆ ತಲಪಿಸಿದನೆಂದು ನೋಡಿರಿ. ಅವರು ಲೌಕಿಕ ಕಾರ್ಯಗಳನ್ನು ಕಾಲಿನಿಂದ ಒದ್ದು ಹಾಕಿದ್ದರು ಮತ್ತು ಲೌಕಿಕ ಪ್ರೇಮದಿಂದ ಪೂರ್ಣವಾಗಿ ಬಿಟ್ಟುನಿಂತಿದ್ದರು. ಅವರು ತಮ್ಮ ಆಶಾಭಿಲಾಷೆಗಳನ್ನು ಪೂರ್ಣವಾಗಿ ತ್ಯಜಿಸಿದ್ದರು. ಈಗ ನೀವು ನಿಮ್ಮ ಸ್ಥಿತಿಯನ್ನು

ಅವರೊಂದಿಗೆ ಹೋಲಿಸಿ ನೋಡಿರಿ. ಏನು ನೀವು ಅವರ ಹೆಜ್ಜೆಗುರುತುಗಳನ್ನು ಅನುಸರಿಸುತ್ತಿರುವಿರೇನು? ಅಲ್ಲಾಹನು ಮನುಷ್ಯನಿಂದ ಏನನ್ನು ಬಯಸುತ್ತಾನೆಂದು ಜನರಿಗೆ ಗೊತ್ತಿಲ್ಲ ಎಂಬುದು ಖೇದಕರ.

رَأْسُ كُلِّ خَطِيْئَةٍ - **ರಅ್‌ಸು ಕುಲ್ಲಿ ಖತೀಅತಿನ್** ಅನೇಕ ಮಕ್ಕಳನ್ನು ಹುಟ್ಟಿಸಿದೆ*. ನ್ಯಾಯಾಲಯಕ್ಕೆ ಹೋಗಿ ಎರಡು ಪೈಸೆ ಪಡೆದು ಸುಳ್ಳು ಸಾಕ್ಷಿ ಹೇಳಲು ಸ್ವಲ್ಪ ಕೂಡ ನಾಚಿಕೆಪಡುವುದಿಲ್ಲ. ಸಾಕ್ಷಿ ಹೇಳಲು ಸತ್ಯವಂತರನ್ನು ಮಾತ್ರ ತರಲಾಗುತ್ತಿದೆ ಎಂದು ನ್ಯಾಯವಾದಿಗಳು ಆಣೆಹಾಕಿ ಹೇಳಬಲ್ಲರೇ? ಈಗ ಲೋಕದ ಸ್ಥಿತಿ ಎಲ್ಲ ರೀತಿಯಲ್ಲೂ ಬಹಳ ದುರ್ಬಲಗೊಂಡಿದ್ದಾಗಿ ಕಾಣುತ್ತಿದ್ದೇವೆ. ಸುಳ್ಳು ಸಾಕ್ಷಿಗಾರರನ್ನು ಸಿದ್ಧಪಡಿಸಲಾಗುತ್ತದೆ. ಸುಳ್ಳು ಮೊಕದ್ದಮೆ ಹೂಡುವುದು ಸರ್ವಸಾಧಾರಣವಾಗಿದೆ. ಸುಳ್ಳು ಪ್ರಮಾಣಪತ್ರಗಳನ್ನು ತಯಾರುಮಾಡಲಾಗುತ್ತದೆ. ಯಾವುದಾದರೂ ಸಂಗತಿಯನ್ನು ಹೇಳುವಾಗ ಸತ್ಯಾಂಶವನ್ನು ಬಚ್ಚಿಟ್ಟು ಮಾತನಾಡಲಾಗುತ್ತದೆ. ಹಝ್ರತ್ ಪೈಗಂಬರ್[ಸ] ತಂದದ್ದು ಇದೇ ಧರ್ಮವನ್ನೇ ಆಗಿತ್ತೇ ಎಂದು ಈ ಜಮಾಅತಿನ ಆವಶ್ಯಕತೆ ಇಲ್ಲ ಎಂದು ಭಾವಿಸುವವರೊಡನೆ ಕೇಳಬೇಕು.

ಸುಳ್ಳನ್ನು ಕೊಳಕು ಎಂದು ತಿಳಿಸಿ ಅಲ್ಲಾಹನು ಅದನ್ನು ವರ್ಜಿಸಲು ಹೇಳಿದ್ದಾನೆ. فَاجْتَنِبُوا الرِّجْسَ مِنَ الْأَوْثَانِ وَاجْتَنِبُوْا قَوْلَ الزُّوْرِ – **ಫಜ್‌ತನಿಬರ್ರಿಜ್‌ಸ ಮಿನಲ್ ಅವ್‌ಸಾನಿ ವಜ್‌ತನಿಬೂ ಖೌಲಝ್ಝೂರಿ** ಎಂದು ಅಲ್ಲಾಹನು ಹೇಳಿರುವನು. (ಅರ್ಥ: ವಿಗ್ರಹಾರಾಧನೆಯ ಕೆಡುಕಿನಿಂದಲೂ ಸುಳ್ಳು ಹೇಳುವುದರಿಂದಲೂ ದೂರವಿದ್ದುಕೊಳ್ಳಿರಿ. **– (ಪವಿತ್ರ ಖುರ್‌ಆನ್ 22:31).**

ಈ ವಚನದಲ್ಲಿ ವಿಗ್ರಹಾರಾಧನೆಯೊಂದಿಗೆ ಸುಳ್ಳನ್ನು ಸೇರಿಸಿ ಹೇಳಲಾಗಿದೆ. ಅವಿವೇಕಿಯಾದ ವ್ಯಕ್ತಿ ಅಲ್ಲಾಹನನ್ನು ಬಿಟ್ಟು ಕಲ್ಲಿನ ವಿಗ್ರಹದ ಕಡೆಗೆ ತಲೆಬಾಗುವ ಹಾಗೆಯೇ ಕೆಲವರು ಸತ್ಯವನ್ನು ಬಿಟ್ಟು ತನ್ನ ಲಾಭಕ್ಕೋಸ್ಕರ ಸುಳ್ಳನ್ನು ತನ್ನ ಆರಾಧ್ಯ ವಿಗ್ರಹವನ್ನಾಗಿ ಮಾಡಿಕೊಳ್ಳುತ್ತಾನೆ. ಇದೇ ಕಾರಣದಿಂದ ಸುಳ್ಳು ಹೇಳುವುದನ್ನು ಅಲ್ಲಾಹನು ವಿಗ್ರಹರಾಧನೆಯೊಂದಿಗೆ ಸೇರಿಸಿ ಹೇಳಿರುವನು. ಒಬ್ಬ ಮೂರ್ತಿಪೂಜಕ ಮೂರ್ತಿಪೂಜೆ ಮಾಡಿ ಮೋಕ್ಷವನ್ನು ಆಶಿಸುವ ಹಾಗೆಯೇ ಸುಳ್ಳು ಹೇಳುವವನು ಸುಳ್ಳೆಂಬ ವಿಗ್ರಹವನ್ನು ನಿರ್ಮಿಸಿ ಅದರ ಮೂಲಕ ರಕ್ಷಣೆ ಪಡೆಯಬಹುದೆಂದು ಭಾವಿಸುತ್ತಾನೆ. ಎಂತಹ ಕೆಡುಕು ಬಂದುಬಿಟ್ಟಿದೆ. ನೀವೇಕೆ ವಿಗ್ರಹಾರಾಧಕರಾಗುತ್ತೀರಿ?

* (ಎಂದರೆ, ಲೋಕದೊಂದಿಗೆ ಇರುವ ಆಸಕ್ತಿ ಇನ್ನಷ್ಟು ಕೆಡುಕುಗಳಿಗೆ ಕಾರಣವಾಗಿದೆ – ಅನುವಾದಕ)

ಈ ಮಾಲಿನ್ಯವನ್ನು ಬಿಟ್ಟುಬಿಡಿರಿ ಎಂದು ಅವರೊಡನೆ ಹೇಳಿದರೆ, ಸುಳ್ಳನ್ನು ಹೇಗೆ ತಾನೆ ಬಿಡಲು ಸಾಧ್ಯ ಮತ್ತು ಅದಿಲ್ಲದೇ ಜೀವಿಸಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಸುಳ್ಳನ್ನು ತಮ್ಮ ಜೀವಿತದ ಕೇಂದ್ರಬಿಂಧುವೆಂದು ಭಾವಿಸುವುದಕ್ಕಿಂತ ದೊಡ್ಡ ದೌರ್ಭಾಗ್ಯ ಬೇರೇನಿದೆ? ಆದರೆ ನಾನು ನಿಮ್ಮೊಡನೆ ದೃಢವಾಗಿ ಹೇಳುತ್ತೇನೆ – ಕೊನೆಗೆ ಸತ್ಯವೇ ಜಯಶಾಲಿಯಾಗುವುದು. ಒಳಿತು ಮತ್ತು ಜಯ ಅದಕ್ಕೆ ಮಾತ್ರ ಲಭಿಸುತ್ತದೆ.

ಅಮೃತಸರದ ಮುದ್ರಣಾಲಯಕ್ಕೆ ನಾನೊಂದು ಬಾರಿ ಲೇಖನ ಕಳುಹಿಸಿದ್ದು ನನಗೆ ನೆನಪಿದೆ. ಅದರ ಜೊತೆ ಒಂದು ಪತ್ರವೂ ಇತ್ತು. ಅದರಲ್ಲಿ ವಕೀಲನಾದ ರಲಿಯಾ ರಾಮಿನ ಹಿಂದ್ ಪತ್ರಿಕೆಯ ಕುರಿತು ಬರೆಯಲಾಗಿತ್ತು. ಲೇಖನದೊಂದಿಗೆ ಪತ್ರವನ್ನು ಇರಿಸಿ ಕಳುಹಿಸುವುದು ಅಂಚೆ ಕಾನೂನಿನ ಉಲ್ಲಂಘನೆ ಎಂದು ಹೇಳಿಕೊಂಡು ನನ್ನ ವಿರುದ್ಧ ಮೊಕದ್ದಮೆ ದಾಖಲು ಮಾಡಲಾಯಿತು. ಪತ್ರವನ್ನು ಇರಿಸಿರಲಿಲ್ಲ ಎಂದು ಹೇಳದೇ ಮೊಕದ್ದಮೆಯಲ್ಲಿ ಜಯಗಳಿಸಲು ಸಾಧ್ಯವಲ್ಲ ಎಂದು ವಕೀಲರು ಕೂಡ ಸಲಹೆ ನೀಡಿದರು – ಸುಳ್ಳು ಹೇಳದೆ ಪಾರಾಗಲು ಸಾಧ್ಯವಲ್ಲ ಎಂಬಂತೆ. ಆದರೆ ಈ ಸಲಹೆಯನ್ನು ನಾನು ಕಿಂಚಿತ್ತೂ ಇಷ್ಟಪಡಲಿಲ್ಲ. ಸತ್ಯ ಹೇಳುವುದರಿಂದ ಶಿಕ್ಷೆ ಲಭಿಸುವುದಾದರೆ ಲಭಿಸಲಿ; ಆದರೆ ನಾನು ಸುಳ್ಳು ಹೇಳಲಾರೆನು ಎಂದು ನಾನು ಹೇಳಿದೆ. ಕೊನೆಗೆ ಈ ಮೊಕದ್ದಮೆ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂತು. ಅಂಚೆ ಇಲಾಖೆಯ ಅಧಿಕಾರಿ ವಾದಿ ಎಂಬ ನೆಲೆಯಲ್ಲಿ ಹಾಜರಾದರು. ನನ್ನೊಂದಿಗೆ ಅದರ ಬಗ್ಗೆ ಕೇಳಿದಾಗ ನಾನು ಹೇಳಿದೆ –ಇದು ನನ್ನ ಪತ್ರವೇ ಆಗಿದೆ. ಆದರೆ ನಾನು ಈ ಪತ್ರವನ್ನು ನನ್ನ ಪ್ರಬಂಧದ ಭಾಗವೆಂದೇ ಗಣಿಸಿ ಅದರೊಂದಿಗೆ ಇರಿಸಿದ್ದೆ. ನ್ಯಾಯಾಧೀಶರಿಗೆ ಆ ವಿಷಯ ಮನವರಿಕೆಯಾಯಿತು. ಅಲ್ಲಾಹನು ಅವರಿಗೆ ತಿಳುವಳಿಕೆ ನೀಡಿದನು. ಅಂಚೆ ಇಲಾಖೆಯ ಅಧಿಕಾರಿ ಬಹಳ ಶಕ್ತವಾಗಿ ವಾದಿಸಿದರೂ ನ್ಯಾಯಾಧಿಪತಿ ಅವರ ಪರವಾಗಿ ನಿಲ್ಲದೇ ನನ್ನನ್ನು ಬಿಡುಗಡೆಗೊಳಿಸಿದರು.*

* ಬದ್ರ್ ಪತ್ರಿಕೆಯಲ್ಲಿ ಈ ಘಟನೆ ಹೆಚ್ಚಿನ ವಿವರಣೆಯೊಂದಿಗೆ ಹೀಗೆ ಬರೆಯಲಾಗಿದೆ: 27 ಅಥವಾ 28 ವರ್ಷಗಳ ಹಿಂದೆ ಅಥವಾ ಅದಕ್ಕಿಂತಲೂ ಮೊದಲು ಇಸ್ಲಾಮನ್ನು ಬೆಂಬಲಿಸಿ ಆರ್ಯಾ ಸಮಾಜಿಗಳನ್ನು ವಿರೋಧಿಸಿ ನಾನೊಂದು ಲೇಖನ ಬರೆದುದನ್ನು ಅಮೃತಸರದ ಒಬ್ಬ ಕ್ರೈಸ್ತನ ಮುದ್ರಣಾಲಯಕ್ಕೆ ಕಳುಹಿಸಿದೆ. ರಲಿಯಾ ರಾಮ್ ಎಂಬ ಹೆಸರಿನ ಆತನು ವಕೀಲನು ಆಗಿದ್ದನು ಮತ್ತು ಅವನೊಂದು ಪತ್ರಿಕೆ ನಡೆಸುತ್ತಿದ್ದನು. ನನ್ನ ಈ ಲೇಖನವನ್ನು ಮುದ್ರಿಸಲಿಕ್ಕಾಗಿ ನಾನು ಒಂದು ಲಕೋಟೆಯಲ್ಲಿರಿಸಿ ಕಳುಹಿಸಿದೆ. ಅದು ಎರಡು ಭಾಗಗಳೂ ತೆರೆದಿರುವಂತಹ ಲಕೋಟೆಯಾಗಿತ್ತು. ಆ ಲೇಖನದೊಂದಿಗೆ ಒಂದು ಪತ್ರ ಸಹ ಇರಿಸಿದ್ದೆ. ಆ ಪತ್ರದಲ್ಲಿ ಇಸ್ಲಾಮನ್ನು ಬೆಂಬಲಿಸಿ ಮತ್ತು

ಸುಳ್ಳು ಹೇಳದೆ ಜೀವಿಸಲು ಸಾಧ್ಯವಲ್ಲವೆಂದು ನಾನು ಹೇಗೆ ತಾನೆ ಹೇಳಬಲ್ಲೆನು. ಇಂತಹ ಮಾತುಗಳು ಕೇವಲ ನಿರರ್ಥಕ. ನಿಜವೇನೆಂದರೆ, ಸತ್ಯವಿಲ್ಲದೆ ಜೀವಿಸಲು ಸಾಧ್ಯವಲ್ಲ. ಮೇಲೆ ಉಲ್ಲೇಖಿಸಿದ ನನ್ನ ಈ ಘಟನೆಯನ್ನು ಈಗಲೂ ನೆನಪಿಸುವಾಗ ನಾನು ಅಲ್ಲಾಹನ ಪರವಾಗಿ ನಿಂತೆನು ಎಂಬುದಕ್ಕಾಗಿ ನನಗೆ ಸಂತೋಷವಾಗುತ್ತದೆ. ಅವನು ನನ್ನನ್ನು ಅದ್ಭುತಕರವಾಗಿ ಸಂರಕ್ಷಿಸಿದನು.

---

ಇತರ ಧರ್ಮಗಳನ್ನು ಖಂಡಿಸುವ ವಿಷಯವಿತ್ತು ಹಾಗೂ ಲೇಖನವನ್ನು ಮುದ್ರಿಸಲು ಒತ್ತು ನೀಡಲಾಗಿತ್ತು. ತನ್ನ ಧರ್ಮವನ್ನು ವಿರೋಧಿಸಿದ ಕಾರಣದಿಂದ ಆ ಕ್ರೈಸ್ತನು ಸಿಟ್ಟಾಗಿದ್ದನು. ವಿರೋಧದಿಂದ ಆಕ್ರಮಣ ಮಾಡಲು ಆತನಿಗೆ ಸಾಂದರ್ಭಿಕವಾಗಿ ಒಂದು ಅವಕಾಶ ದೊರಕಿತು. ಇಂತಹ ಲಕೋಟೆಯ ಒಳಗೆ ಪತ್ರವಿರಿಸುವುದು ಅಂಚೆ ಕಾನೂನು ಪ್ರಕಾರ ಅಪರಾಧವಾಗಿತ್ತು. ನನಗೆ ಈ ಕಾನೂನಿನ ಬಗ್ಗೆ ಗೊತ್ತಿರಲಿಲ್ಲ. ಅಂಚೆ ನಿಯಮಗಳ ಪ್ರಕಾರ ಈ ಅಪರಾಧಕ್ಕಿರುವ ಶಿಕ್ಷೆ ಐನೂರು ರೂಪಾಯಿ ದಂಡ ಅಥವಾ ಆರು ತಿಂಗಳ ಸೆರೆಮನೆವಾಸವಾಗಿತ್ತು. ಆ ಕ್ರೈಸ್ತನು ಈ ವಿಷಯವನ್ನು ಅಂಚೆ ಅಧಿಕಾರಿಗಳಿಗೆ ತಿಳಿಸಿ ನನ್ನ ವಿರುದ್ಧ ಮೊಕದ್ದಮೆ ದಾಖಲಾಗುವಂತೆ ಮಾಡಿದನು. ನನಗೆ ಈ ಮೊಕದ್ದಮೆ ಬಗ್ಗೆ ಸಮಾಚಾರ ತಿಳಿಯುವ ಮೊದಲೇ ಕನಸಿನಲ್ಲಿ ಅಲ್ಲಾಹನು ನನಗೆ ಹೀಗೆ ತೋರಿಸಿ ಕೊಟ್ಟನು: ವಕೀಲ ರಲಿಯಾರಾಮ್ ಒಂದು ಸರ್ಪವನ್ನು ನನ್ನನ್ನು ಕಚ್ಚಲು ಕಳುಹಿಸಿರುವನು. ನಾನು ಅದನ್ನು ಮೀನಿನ ಹಾಗೆ ಹುರಿದು ಅವನಿಗೆ ಮರಳಿ ಕಳುಹಿಸಿದೆನು. ವಕೀಲರಿಗೆ ಮೊಕದ್ದಮೆಗಳಲ್ಲಿ ಪ್ರಯೋಜನಕರವಾಗುವ ಒಂದು ಉದಾಹರಣೆಯಾಗಿ ಪರಿಣಮಿಸುವ ರೀತಿಯಲ್ಲಿ ಈ ಮೊಕದ್ದಮೆ ನ್ಯಾಯಾಲಯದಲ್ಲಿ ತೀರ್ಪಾಗುವುದು ಎಂಬ ಸೂಚನೆ ಈ ಕನಸಿನಲ್ಲಿತ್ತು.

ಈ ಮೊಕದ್ದಮೆಯ ವಿಚಾರಣೆಗೋಸ್ಕರ ನನ್ನನ್ನು ಗುರುದಾಸಪುರಕ್ಕೆ ಕರೆಸಲಾಗಿತ್ತು. ಈ ಮೊಕದ್ದಮೆ ಬಗ್ಗೆ ವಕೀಲರೊಂದಿಗೆ ಸಲಹೆ ಕೇಳಿದಾಗ, ಸುಳ್ಳು ಹೇಳದೆ ಬೇರೆ ದಾರಿ ಇಲ್ಲವೆಂದು ಅವರೆಲ್ಲರೂ ಹೇಳಿದರು. ನಾನು ಲಕೋಟೆಯಲ್ಲಿ ಪತ್ರ ಇರಿಸಲಿಲ್ಲವೆಂದೂ ರಲಿಯಾರಾಮ್ ಸ್ವತಃ ಇರಿಸಿರಬೇಕು ಎಂದೂ ಹೇಳಲಿಕ್ಕೆ ಅವರು ನನಗೆ ಸಲಹೆ ನೀಡಿದರು. ಅದರ ಜೊತೆಗೆ ಕೆಲವು ಸುಳ್ಳು ಸಾಕ್ಷಿಗಳನ್ನು ಹಾಜರುಪಡಿಸಿ ಮೊಕದ್ದಮೆಯಿಂದ ದೋಷಮುಕ್ತವಾಗಬಹುದು ಎಂದು ವಕೀಲರು ಸಮಾಧಾನಪಡಿಸಿದರು. ಹೀಗೆ ಮಾಡದೆ ಇದ್ದರೆ ಮೊಕದ್ದಮೆಯಿಂದ ಪಾರಾಗುವುದು ತುಂಬಾ ಕಷ್ಟ. ಆದ್ದರಿಂದ ಇದಲ್ಲದೇ ಬೇರೆ ದಾರಿ ಇಲ್ಲ ಎಂದು ಹೇಳಲಾಯಿತು. ನಾನು ಅವರೆಲ್ಲರೊಡನೆ ಹೀಗೆ ಉತ್ತರಿಸಿದೆ: ನಾನು ಯಾವುದೇ ಸ್ಥಿತಿಯಲ್ಲಿ ಸತ್ಯವನ್ನು ಬಿಡಲು ಇಷ್ಟಪಡುವುದಿಲ್ಲ. ಆಗಬೇಕಾದದ್ದು ಆಗಲಿ. ಅಂದು ಅಥವಾ ಮರುದಿನ ನನ್ನನ್ನು ಒಬ್ಬ ಅಂಗ್ಲೇಯ ನ್ಯಾಯಾಧಿಪತಿಯ ಮುಂದೆ ಹಾಜರುಪಡಿಸಲಾಯಿತು. ನನ್ನ ಎದುರಾಗಿ ಸರ್ಕಾರಿ ವಾದಿಯಾಗಿ ಅಂಚೆ ಇಲಾಖೆಯ ಅಧಿಕಾರಿಗಳು ಹಾಜರಾದರು. ನ್ಯಾಯಾಧಿಪತಿ ನನ್ನ ಹೇಳಿಕೆಯನ್ನು ಸ್ವತಃ ಬರೆದರು. ಅವರು ಮೊತ್ತಮೊದಲಾಗಿ ನನ್ನೊಂದಿಗೆ ಹೀಗೆ ಕೇಳಿದರು: ನೀವು ಈ ಪತ್ರವನ್ನು ಲಕೋಟೆಯಲ್ಲಿ ಇರಿಸಿದಿರೋ ಹಾಗೂ ಈ ಲಕೋಟೆ ಮತ್ತು ಪತ್ರ ನಿಮ್ಮದೋ? ಆಗ ತಡಮಾಡದೇ ನಾನು ಹೀಗೆ ಉತ್ತರಿಸಿದೆ: ಈ ಪತ್ರವೂ ಲಕೋಟೆಯೂ ನನ್ನದೇ ಆಗಿವೆ. ನಾನೇ ಈ ಪತ್ರವನ್ನು ಲಕೋಟೆಯಲ್ಲಿರಿಸಿ ಕಳುಹಿಸಿದ್ದೆ. ಆದರೆ ಸರಕಾರಕ್ಕೆ ನಷ್ಟ ಉಂಟುಮಾಡುವ ಕೆಟ್ಟ ಉದ್ದೇಶದಿಂದ ಹಾಗೆ ಮಾಡಲಿಲ್ಲ. ಈ ಪತ್ರದ ವಿಷಯ ಲೇಖನಕ್ಕೆ ಸಂಬಂಧಿಸಿದ್ದೇ ಆಗಿತ್ತು ಮತ್ತು ಅದರಲ್ಲಿ ನನ್ನ ವೈಯ್ಯಕ್ತಿಕ ವಿಷಯ ಬರೆದಿರಲಿಲ್ಲ. ನನ್ನ

ಅಲ್ಲಾಹನು ಹೇಳುತ್ತಾನೆ:

مَنۡ یَّتَوَکَّلۡ عَلَی اللّٰہِ فَھُوَ حَسۡبُہٗ

**ಮನ್ ಯತವಕ್ಕಲ್ ಅಲಲ್ಲಾಹಿ ಫಹುವ ಹಸ್‌ಬುಹೂ –** ಯಾರು ಅಲ್ಲಾಹನ ಮೇಲೆ ಭರವಸೆ ಇಡುತ್ತಾನೋ ಅವನಿಗೆ ಅಲ್ಲಾಹನು ಸಾಕು. **(ಪವಿತ್ರ ಖುರ್‌ಆನ್ 65:4)**

ಸುಳ್ಳಿನಷ್ಟು ಹೇಯವಾದದ್ದು ಯಾವುದೂ ಇಲ್ಲ ಎಂದು ನೆನಪಿಡಿರಿ. ಸತ್ಯ ಹೇಳುವವರು ಹಿಡಿಗೂಡಲ್ಪಡುತ್ತಾರೆ ಎಂದು ಸಾಮಾನ್ಯವಾಗಿ ಲೌಕಿಕವಾದಿಗಳು ಹೇಳುತ್ತಾರೆ. ಆದರೆ ನಾನು ಇದನ್ನು ಹೇಗೆ ತಾನೆ ನಂಬಬಲ್ಲೆನು? ನನ್ನ ವಿರುದ್ಧ ಏಳು ಮೊಕದ್ದಮೆಗಳು ಹೂಡಲಾಗಿದ್ದುವು. ಆದರೆ ಅಲ್ಲಾಹನ ಅನುಗ್ರಹದಿಂದ ಯಾವುದೇ ಮೊಕದ್ದಮೆಯಲ್ಲೂ ಒಂದು ಪದದಷ್ಟು ಸುಳ್ಳು ಕೂಡ ಹೇಳಬೇಕಾದ ಆವಶ್ಯಕತೆ ಉಂಟಾಗಲಿಲ್ಲ. ಯಾವುದಾದರೂ ಮೊಕದ್ದಮೆಯಲ್ಲಿ ನನಗೆ ಅಲ್ಲಾಹನು ಸೋಲನ್ನು ನೀಡಿದನೆಂದು ಯಾರಿಗಾದರೂ ಹೇಳಲು ಸಾಧ್ಯವೇ? ಅಲ್ಲಾಹನು ಸ್ವತಃ ಸತ್ಯದ ಬೆಂಬಲಿಗನೂ ಸಹಾಯಕನೂ ಆಗಿದ್ದಾನೆ. ಅವನು ಸತ್ಯವಂತರಿಗೆ ಶಿಕ್ಷೆ ನೀಡುವನೋ? ಹಾಗೇನಾದರೂ ಆದರೆ ಯಾರೂ ಸತ್ಯ ಹೇಳಲು ಧೈರ್ಯ ಪಡುತ್ತಿರಲಿಲ್ಲ ಮತ್ತು ಅಲ್ಲಾಹನಲ್ಲಿ ನಂಬಿಕೆಯೇ ಇಲ್ಲವಾಗುತ್ತಿತ್ತು. ಅಂತಹ ಸ್ಥಿತಿಯಲ್ಲಿ ಸತ್ಯವಂತರು ಜೀವಂತವೇ ಸಾಯುತ್ತಿದ್ದರು.

---

ಮಾತನ್ನು ಆಲಿಸಿದ ಕೂಡಲೇ ಆ ಆಂಗ್ಲೇಯ ಅಧಿಕಾರಿಯ ಹೃದಯವನ್ನು ಅಲ್ಲಾಹನು ನನ್ನ ಕಡೆಗೆ ತಿರುಗಿಸಿದನು. ನನ್ನ ವಿರುದ್ಧ ಅಂಚೆ ಅಧಿಕಾರಿ ಕಿರುಚುತ್ತಾ ಇಂಗ್ಲಿಷ್ ಭಾಷೆಯಲ್ಲಿ ಭಾಷಣ ಮಾಡುತ್ತಿದ್ದನು. ಅದೇನೆಂದು ನನಗೆ ಅರ್ಥವಾಗಲಿಲ್ಲ. ಆದರೆ ನನಗೆ ಒಂದು ವಿಷಯ ಅರ್ಥವಾಗುತ್ತಿತ್ತು. ಅದೇನೆಂದರೆ, ಅಂಚೆ ಅಧಿಕಾರಿಯ ಮುಂದಿರಿಸುವ ಪ್ರತಿಯೊಂದು ವಾದವನ್ನು ಆ ನ್ಯಾಯಾಧೀಶ 'ನೋ, ನೋ' ಎಂದು ಹೇಳಿ ನಿರಾಕರಿಸುತ್ತಿದ್ದರು. ಅಂಚೆ ಅಧಿಕಾರಿ ಪೂರ್ಣ ಆವೇಶದಿಂದ ವಾದವನ್ನು ಮಂಡಿಸಿದ ನಂತರ ನ್ಯಾಯಾಧೀಶ ತೀರ್ಪು ಬರೆಯಲು ಪ್ರಾರಂಭಿಸಿದರು. ಒಂದೆರಡು ಸಾಲು ಬರೆದು ಕೂಡಲೇ ಹೇಳಿದರು, ನಿಮ್ಮನ್ನು ದೋಷಮುಕ್ತರನ್ನಾಗಿ ಮಾಡಲಾಗಿದೆ. ಇದನ್ನು ಆಲಿಸಿದ ನಂತರ ನಾನು ನ್ಯಾಯಾಲಯದ ಹೊರಗೆ ಬಂದು ನನ್ನ ನೈಜ ಹಿತೈಷಿಯಾದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದೆ. ಒಬ್ಬ ಆಂಗ್ಲೇಯ ಅಧಿಕಾರಿಗೆ ವಿರುದ್ಧವಾಗಿ ಅಲ್ಲಾಹನು ನನಗೆ ಜಯ ನೀಡಿದನು. ಸತ್ಯದ ಅನುಗ್ರಹದಿಂದ ಅಲ್ಲಾಹನು ನನಗೆ ಬಿಡುಗಡೆ ದಯಪಾಲಿಸಿದನು ಎಂದು ನಾನು ಚೆನ್ನಾಗಿ ಬಲ್ಲೆನು. ಈ ಮೊಕದ್ದಮೆಗೆ ಮುಂಚೆ ನಾನೊಂದು ಕನಸ್ಸನ್ನು ಕೂಡ ಕಂಡಿದ್ದೆ. ಅದೇನೆಂದರೆ, ಒಬ್ಬನು ನನ್ನ ತಲೆಯಿಂದ ಟೊಪ್ಪಿ ತೆಗೆದು ಹಾಕಲು ಕೈ ಚಾಚಿದನು. ನೀನು ಏನು ಮಾಡುತ್ತಿದ್ದೀಯಾ ಎಂದು ನಾನು ಕೇಳಿದೆ. ಆಗ ಆತನು ಟೊಪ್ಪಿಯನ್ನು ನನ್ನ ತಲೆಯಲ್ಲೇ ಬಿಟ್ಟು 'ಸರಿ, ಸರಿ' ಎಂದು ಹೇಳಿದನು. **(ಬದ್ರ್, ಪುಟ 3; ಫೆಬ್ರವರಿ 2, 1906)**

ನಿಜವಾದ ಸಂಗತಿ ಏನೆಂದರೆ, ಸತ್ಯ ಹೇಳುವುದರ ಕಾರಣದಿಂದ ಯಾರು ಶಿಕ್ಷಿಸಲ್ಪಡುತ್ತಾರೋ ಅವರು ಶಿಕ್ಷಿಸಲ್ಪಡುವುದು ಆ ಸತ್ಯ ಹೇಳಿಕೆಯ ಕಾರಣದಿಂದಾಗಿರುವುದಿಲ್ಲ. ಆ ಶಿಕ್ಷೆ ಅವರಿಗೆ ದೊರಕುವುದು ಅವರ ಬೇರೆ ಕೆಲವು ಗುಟ್ಟಾದ ಮತ್ತು ಬಹಳ ರಹಸ್ಯವಾದ ಕೆಟ್ಟ ಕೆಲಸಗಳ ಕಾರಣದಿಂದಾಗಿರುತ್ತದೆ ಮತ್ತು ಬೇರೆ ಯಾವುದೋ ಸುಳ್ಳಿಗೆ ಶಿಕ್ಷೆಯಾಗಿರುತ್ತದೆ. ಅಲ್ಲಾಹನ ಸನ್ನಿಧಿಯಲ್ಲಿ ಅಂತಹ ಜನರ ಕೆಟ್ಟ ಕೆಲಸಗಳ ಮತ್ತು ದುಷ್ಟತೆಗಳ ಪಟ್ಟಿಯೇ ಇರುತ್ತದೆ. ಅವರು ಅನೇಕ ತಪ್ಪು ಕೆಲಸಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಯಾವುದಾದರೂ ಒಂದರ ಶಿಕ್ಷೆ ಅವರು ಪಡೆಯುತ್ತಾರೆ.

ಗುಲ್ ಅಲಿ ಶಾ ಎಂಬ ಹೆಸರಿನ ನನ್ನೊಬ್ಬ ಅಧ್ಯಾಪಕ ಬಟಾಲದ ನಿವಾಸಿಯಾಗಿದ್ದರು. ಅವರು ಶೇರ್‌ಸಿಂಗಿನ ಪುತ್ರನಾದ ಪ್ರತಾಪ ಸಿಂಗ್‌ನಿಗೂ ಕಲಿಸುತ್ತಿದ್ದರು. ಒಮ್ಮೆ ಶೇರ್‌ಸಿಂಗ್ ತನ್ನ ಅಡಿಗೆಯವನನ್ನು ಆಹಾರದಲ್ಲಿ ಉಪ್ಪು ಮತ್ತು ಖಾರ ಅಧಿಕವಾಗಿದ್ದ ಕಾರಣದಿಂದ ಬಹಳ ಹೊಡೆದನು. ನನ್ನ ಅಧ್ಯಾಪಕರು ಸರಳ ಸ್ವಭಾವದವರಾಗಿದ್ದರು. 'ನೀವು ಬಹಳ ದೌರ್ಜನ್ಯ ಮಾಡಿದ್ದೀರಿ ಎಂದು ಅವರು ಹೇಳಿದರು. ಆಗ ಶೇರ್ ಸಿಂಗ್ ಹೀಗೆ ಹೇಳಿದನು: ಮೌಲವಿಯರೇ, ಈತ ನನ್ನ ನೂರು ಕುರಿಗಳನ್ನು ತಿಂದು ಹಾಕಿದ್ದು ನಿಮಗೆ ಗೊತ್ತಿಲ್ಲ.

ಇದೇ ರೀತಿಯಲ್ಲಿ ಮನುಷ್ಯನಲ್ಲಿ ಕೆಟ್ಟ ಕೃತ್ಯಗಳ ಒಂದು ಸಂಗ್ರಹವಿರುತ್ತದೆ. ಅವನು ಯಾವುದಾದರೊಂದು ಸಂದರ್ಭದಲ್ಲಿ ಹಿಡಿಗೂಡಲ್ಪಟ್ಟು ಶಿಕ್ಷೆಗೆ ಗುರಿಯಾಗುತ್ತಾನೆ.* ಸತ್ಯವನ್ನು ಅವಲಂಬಿಸುವವನು ಎಂದೂ ಹೀನೈಸಲ್ಪಡಲಾರನು. ಏಕೆಂದರೆ ಅವನು ಅಲ್ಲಾಹನ ರಕ್ಷಣೆಯಲ್ಲಿ ಇರುತ್ತಾನೆ. ಅಲ್ಲಾಹನ ರಕ್ಷಣೆಗಿಂತ ಭದ್ರವಾದ ಕೋಟೆ ಬೇರೆಯಿಲ್ಲ. ಆದರೆ ಅಪೂರ್ಣವಾದದ್ದು ಪ್ರಯೋಜನಕರವಾಗಲಾರದು. ಬಾಯಾರಿಕೆಯಾದಾಗ ಒಂದು ಹನಿ ನೀರು ಕುಡಿದರೆ ಸಾಕೆಂದು ಯಾರಾದರೂ ಹೇಳುವರೇ? ಬಹಳ ಹಸಿದಿರುವಾಗ ಒಂದು ಕಾಳು ಅಥವಾ ಒಂದು ತುತ್ತಿನಿಂದ ಹಸಿವು ನೀಗುವುದೇ? ಪೂರ್ಣವಾಗಿ ಬಾಯಾರಿಕೆ ನೀಗುವ ತನಕ ನೀರು ಕುಡಿಯದೆ ಮತ್ತು ಹೊಟ್ಟೆ ತುಂಬಾ ಆಹಾರ ತಿನ್ನದೆ ತೃಪ್ತಿಯಾಗದು. ಅದೇ ರೀತಿಯಲ್ಲಿ ನಮ್ಮ ಧಾರ್ಮಿಕ ಕೃತ್ಯಗಳಲ್ಲಿ ಪರಿಪೂರ್ಣತೆ ಇಲ್ಲದಿರುವಾಗ ಅವುಗಳಿಂದ ಲಭಿಸಬೇಕಾದ

* ಬದ್ರ್ ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿದೆ: ಮನುಷ್ಯನು ಪಾಪಕೃತ್ಯವನ್ನು ಒಂದು ಸಂದರ್ಭದಲ್ಲಿ ಮಾಡುತ್ತಾನೆ. ಆದರೆ ಆತ ಬೇರೊಂದು ಸಂದರ್ಭದಲ್ಲಿ ಹಿಡಿಗೂಡಲ್ಪಡುತ್ತಾನೆ. **(ಬದ್ರ್ 6–2–1906)**

ಫಲ ಮತ್ತು ಪರಿಣಾಮ ಲಭಿಸದು. ಅಪೂರ್ಣವಾದ ಕೃತ್ಯಗಳಿಂದ ಅಲ್ಲಾಹನು ಸಂತೋಷಪಡಲಾರನು. ಅವು ಅನುಗ್ರಹದಾಯಕವೂ ಆಗಲಾರವು. ಅವನ ಇಚ್ಛೆಗೆ ಅನುಸಾರವಾಗಿ ನೀವು ಕೆಲಸ ಮಾಡಿದರೆ ಅನುಗ್ರಹಿಸುವನು ಎಂದಾಗಿದೆ ಅಲ್ಲಾಹನ ವಾಗ್ದಾನ.

ಸುಳ್ಳು, ಮೋಸಗಾರಿಕೆ ಮತ್ತು ವಂಚನೆ ಮಾಡದೆ ಜೀವನ ಸಾಧ್ಯವಿಲ್ಲ ಎಂದು ಲೌಕಿಕ ಜನರು ಸ್ವತಃ ಭಾವಿಸಿಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ಮೊಕದ್ದಮೆಯಲ್ಲಿ ಸತ್ಯ ಹೇಳಿದ ಕಾರಣದಿಂದ ನಾಲ್ಕು ವರ್ಷಗಳ ಸೆರೆಮನೆ ವಾಸದ ಶಿಕ್ಷೆ ಪಡೆದನು ಎಂದು ಹೇಳಲಾಗುತ್ತದೆ. ಇವುಗಳೆಲ್ಲ ಅರಿವಿಲ್ಲದ ಕಾರಣದಿಂದ ಹೇಳಲ್ಪಡುವ ಯೋಚನೆಗಳಾಗಿವೆ. **ಕಸ್ಬೇ ಕಮಾಲ್ ಕುನ್ ಕೆ ಅಝೀಝೇ ಜಹಾನ್ ಶವಿ –** "ಪರಿಪೂರ್ಣ ಮತ್ತು ಶ್ರೇಷ್ಠವಾದ ಕೆಲಸವನ್ನು ಮಾಡಿಕೊಂಡು ಲೋಕಕ್ಕೆ ಪ್ರಿಯನಾಗು."

ಇವು ನ್ಯೂನತೆಯುಳ್ಳ ಮತ್ತು ಅಪೂರ್ಣ ಕೃತ್ಯಗಳ ಪರಿಣಾಮಗಳಾಗಿವೆ. ಪರಿಪೂರ್ಣವಾದ ಕೆಲಸ ಇಂತಹ ಕೆಟ್ಟ ಪರಿಣಾಮವನ್ನು ಉಂಟುಮಾಡಲಾರದು. ಒಬ್ಬನು ದಪ್ಪ ಖದರ್ ಬಟ್ಟೆಯಿಂದ ಚೀಲ ಹೊಲಿದರೆ ಆತನು ದರ್ಜಿಯಾಗಲಾರನು. ಉತ್ತಮ ರೇಷ್ಮೆ ಬಟ್ಟೆಯ ಉಡುಪು ಸಹ ಆತನು ಹೊಲಿಯಬಲ್ಲನು ಎಂದು ಹೇಳುವಂತಿಲ್ಲ. ಆತನಿಗೆ ಹೊಲಿಯಲು ರೇಷ್ಮೆ ಬಟ್ಟೆ ಕೊಟ್ಟರೆ ಆತನು ಅದನ್ನು ಹಾಳು ಮಾಡಬಹುದು. ಯಾವ ಒಳಿತಿನಲ್ಲಿ ಕೊಳಕು ಮಿಶ್ರಣವಾಗಿದೆಯೋ ಅದು ನಿರುಪಯುಕ್ತ. ಅಲ್ಲಾಹನ ಸನ್ನಿಧಿಯಲ್ಲಿ ಅದಕ್ಕೆ ಯಾವುದೇ ಬೆಲೆಯಿಲ್ಲ. ಆದರೆ ಇಂತಹ ಅಪೂರ್ಣ ಕೆಲಸ ಮಾಡುವವರು ಅಭಿಮಾನ ಪಡುತ್ತಾರೆ ಮತ್ತು ಅದರ ಮೂಲಕ ಮುಕ್ತಿಯನ್ನು ಬಯಸುತ್ತಾರೆ. ನಿಷ್ಠೆಯಿಂದ ಮಾಡಿದ ಸ್ವಲ್ಪ ಮಾತ್ರ ಒಳಿತನ್ನು ಕೂಡ ಅಲ್ಲಾಹನು ನಾಶ ಮಾಡಲಾರನು. ಅಲ್ಲಾಹನು ಸ್ವತಃ ಹೀಗೆ ಹೇಳಿದ್ದಾನೆ:

مَنْ يَّعْمَلْ مِثْقَالَ ذَرَّةٍ خَيْرًا يَّرَهُ۔

**ಮನ್ ಯಅ್‌ಮಲ್ ಮಿಸ್‌ಖಾಲ ಝ್ಝರ್ರತಿನ್ ಖೈರನ್‌ಯರಹ**

ಯಾರಾದರೂ ಒಂದು ಅಣುವಿನಷ್ಟು ಒಳಿತು ಮಾಡಿದ್ದರೂ ಅದನ್ನು ಕೂಡ ಅವನು ಕಾಣುವನು. **(ಪವಿತ್ರ ಖುರ್‌ಆನ್ 99:8)**

ಒಂದು ಅಣುವಿನಷ್ಟು ಒಳಿತನ್ನು ಮಾಡಿದರೂ ಅಲ್ಲಾಹನಿಂದ ಮನುಷ್ಯನು ಪ್ರತಿಫಲ ಗಳಿಸುವನು. ಹೀಗಿರುವಾಗ ಇಷ್ಟೆಲ್ಲ ಒಳಿತುಗಳನ್ನು ಮಾಡಿದರೂ ಪ್ರತಿಫಲ

ಲಭಿಸದೇ ಇರಲು ಕಾರಣವೇನು? ಇದರ ಕಾರಣವೇನೆಂದರೆ ಅವುಗಳನ್ನು ನಿಷ್ಠೆಯಿಂದ ಮಾಡಿರುವುದಿಲ್ಲ. ಸತ್ಕರ್ಮಗಳಿಗೆ ನಿಷ್ಠೆ ಶರತ್ತಾಗಿದೆ. ಅಲ್ಲಾಹನು ಇದರ ಬಗ್ಗೆ ಹೀಗೆ ಹೇಳಿದ್ದಾನೆ: مُخْلِصِيْنَ لَهُ الدِّيْنَ – **ಮುಖ್ಲಿಸೀನ ಲಹುದ್ದೀನ್** – ಅಲ್ಲಾಹನಿಗೆ ಸಂಪೂರ್ಣ ವಿಧೇಯನಾಗಿದ್ದುಕೊಂಡು. **(ಪವಿತ್ರ ಖುರ್ಆನ್ 98:6).** ಅಲ್ಲಾಹನ ಪ್ರಾಮಾಣಿಕ ದಾಸರಲ್ಲಿ ಇಂತಹ ವಿಧೇಯತೆ ಇರುತ್ತದೆ. **ಅಬ್‌ದಾಲ್** ಎಂದು ಕರೆಯಲ್ಪಡುವ ಈ ಜನರು ಈ ಲೋಕಕ್ಕೆ ಸೇರಿದವರಾಗಿರುವುದಿಲ್ಲ. ಅವರ ಪ್ರತಿಯೊಂದು ಕೆಲಸದಲ್ಲಿ ನಿಷ್ಠೆ ಮತ್ತು ಮೂಲ್ಯ ಇರುತ್ತದೆ. ಆದರೆ ಲೌಕಿಕ ಜನರ ಸ್ಥಿತಿ ಹೇಗಿದೆ ಎಂದರೆ, ಅವರು ದಾನಧರ್ಮ ಮಾಡಿದರೂ ಅದರ ಬಗ್ಗೆ ಹೊಗಳಿಕೆ ಮತ್ತು ಮೆಚ್ಚಿಗೆ ಬಯಸುತ್ತಾರೆ. ಅವರು ಯಾವುದಾದರೂ ಉತ್ತಮ ಕೆಲಸಕ್ಕೆ ದೇಣಿಗೆ ನೀಡಿದರೆ ಅವರ ಉದ್ದೇಶ ಪತ್ರಿಕೆಗಳಲ್ಲಿ ಅವರ ಬಗ್ಗೆ ಹೊಗಳಿಕೆ ಪ್ರಕಟವಾಗಬೇಕು ಮತ್ತು ಜನರು ಹೊಗಳಬೇಕು ಎಂದಾಗಿರುತ್ತದೆ. ಇಂತಹ ಒಳಿತಿಗೆ ಅಲ್ಲಾಹನೊಂದಿಗೆ ಏನು ಸಂಬಂಧ? ಬಹಳ ಜನರು ವಿವಾಹದ ಸಂದರ್ಭದಲ್ಲಿ ಊರಿನವರಿಗೆಲ್ಲ ಆಹಾರ ನೀಡುತ್ತಾರೆ. ಆದರೆ ಅವರು ಹಾಗೆ ಮಾಡುವುದು ಅಲ್ಲಾಹನ ಪ್ರೀತಿ ಗಳಿಸಲಿಕ್ಕೆ ಆಗಿರುವುದಿಲ್ಲ. ಕೇವಲ ಪ್ರದರ್ಶನಕ್ಕಾಗಿ ಮತ್ತು ಹೊಗಳಿಕೆ ಗಳಿಸಲಿಕ್ಕಾಗಿ ಆಗಿರುತ್ತದೆ. ತೋರಿಕೆ ಇಲ್ಲದಿರುತ್ತಿದ್ದರೆ ಮತ್ತು ಅಲ್ಲಾಹನ ಸೃಷ್ಟಿಗಳಿಗೆ ವಾತ್ಸಲ್ಯದೋರಲು ಆ ಕೆಲಸ ಮಾಡಿರುತ್ತಿದ್ದರೆ ಹಾಗೂ ಅಲ್ಲಾಹನಿಗಾಗಿ ಮಾತ್ರವಾಗಿರುತ್ತಿದ್ದರೆ ಅವರು ಅಲ್ಲಾಹನ ಮಿತ್ರರಾಗುತ್ತಿದ್ದರು. ಆದರೆ ಈ ಕೆಲಸಗಳಿಗೆ ಅಲ್ಲಾಹನೊಂದಿಗೆ ಯಾವುದೇ ಸಂಬಂಧವಿಲ್ಲದ ಕಾರಣದಿಂದ ಯಾವುದೇ ಒಳ್ಳೆಯ ಮತ್ತು ಅನುಗ್ರಹೀತ ಪ್ರಭಾವ ಅವರೊಳಗೆ ಉಂಟಾಗುವುದಿಲ್ಲ.

ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ, ಯಾರು ಅಲ್ಲಾಹನಿಗೆ ಸೇರಿದವನಾಗುತ್ತಾನೋ ಅಲ್ಲಾಹನು ಅವನಿಗೆ ಸೇರಿದವನಾಗುತ್ತಾನೆ. ಅಲ್ಲಾಹನು ಯಾರಿಂದಲೂ ಮೋಸಕ್ಕೆ ಒಳಗಾಗುವುದಿಲ್ಲ. ತೋರಿಕೆಯ ಕೆಲಸಗಳಿಂದ ಮತ್ತು ಮೋಸಗಾರಿಕೆಯಿಂದ ಅಲ್ಲಾಹನನ್ನು ವಂಚಿಸಬಹುದೆಂದು ಯಾರಾದರೂ ಇಚ್ಛಿಸುವುದಾದರೆ ಅದು ಮೂರ್ಖತೆ ಮತ್ತು ಅವಿವೇಕತನವಾಗಿದೆ. ಹಾಗೆ ಭಾವಿಸುವವನು ಸ್ವತಃ ಮೋಸಕ್ಕೊಳಗಾಗಿರುತ್ತಾನೆ. ಲೋಕದ ಚೆಲುವು ಮತ್ತು ಲೋಕದ ಬಗ್ಗೆ ಆಸಕ್ತಿ ಎಲ್ಲ ತಪ್ಪು ಕೆಲಸಗಳ ಬೇರಾಗಿದೆ. ಅವುಗಳಿಂದ ಅಂಧನಾಗಿ ಮನುಷ್ಯನು ಮಾನವೀಯತೆಯನ್ನು ಬಿಟ್ಟುಬಿಡುತ್ತಾನೆ ಹಾಗೂ ತಾನೇನು ಮಾಡುತ್ತಿದ್ದೇನೆ ಮತ್ತು ತಾನೇನು ಮಾಡಬೇಕಾಗಿತ್ತು ಎಂಬುದು

ಅವನಿಗೆ ಗೊತ್ತಾಗುವುದಿಲ್ಲ. ಒಬ್ಬ ಬುದ್ಧಿಶಾಲಿ ವ್ಯಕ್ತಿಯನ್ನು ಮೋಸಗೊಳಿಸಲು ಸಾಧ್ಯವಿಲ್ಲದಿರುವಾಗ ಅಲ್ಲಾಹನನ್ನು ಹೇಗೆ ತಾನೆ ಮೋಸಗೊಳಿಸಬಹುದು? ಆದರೆ ಇಂತಹ ಕೆಟ್ಟಕೆಲಸಗಳ ಬೇರು ಲೋಕದೊಂದಿಗೆ ಇರುವ ಅಕ್ಕರೆಯಾಗಿದೆ. ಈಗ ಮುಸ್ಲಿಮರನ್ನು ನಾಶಕ್ಕೀಡು ಮಾಡಿರುವ ಮತ್ತು ಎಲ್ಲದಕ್ಕಿಂತಲೂ ದೊಡ್ಡ ಪಾಪ ಲೋಕದ ಮೇಲೆ ಇರುವ ಈ ಅನುರಕ್ತಿಯಾಗಿದೆ. ಮಲಗಿರುವಾಗಲೂ ಎಚ್ಚರದಿಂದ ಇರುವಾಗಲೂ ಏಳುವಾಗಲೂ ಕುಳಿತಿರುವಾಗಲೂ ತಿರುಗಾಡುತ್ತಿರುವಾಗಲೂ ಸದಾ ಸಮಯ ಜನರು ಇದೇ ಚಿಂತೆ ಮತ್ತು ದುಃಖದಲ್ಲಿ ಸಿಲುಕಿಕೊಂಡಿರುತ್ತಾರೆ. ಗೋರಿಗಳಲ್ಲಿ ಹೂಳಲ್ಪಡುವ ಕಾಲದ ಬಗ್ಗೆ ಯಾವುದೇ ಗಮನ ಮತ್ತು ಚಿಂತೆ ಕೂಡ ಇಲ್ಲ. ಇಂತಹ ಜನರು ಅಲ್ಲಾಹನಿಗೆ ಭಯಪಟ್ಟುಕೊಂಡು ಧರ್ಮದ ಬಗ್ಗೆ ಸ್ವಲ್ಪವಾದರೂ ಚಿಂತೆ ಮತ್ತು ದುಃಖವನ್ನು ಹೊಂದುತ್ತಿದ್ದರೆ ಬಹಳಷ್ಟು ಲಾಭ ಗಳಿಸಬಹುದಾಗಿತ್ತು. ಪಾರ್ಸಿ ಕವಿ ಸಅದಿ ಹೇಳುತ್ತಾರೆ: **ಗರ್ ವಝೀರ್ ಅಝ್ ಖುದಾ ತರ್‌ಸೀದೇ – (ಅರ್ಥ: ಅಧಿಕಾರಿಗೆ ದೇವಭಯ ಇರುತ್ತಿದ್ದರೆ ಎಷ್ಟು ಚೆನ್ನ!)**

ಉದ್ಯೋಗಿಗಳಾದ ಜನರು ಚಿಕ್ಕಮಟ್ಟ ನೌಕರಿ ಹೊಂದಿದ್ದರೂ ತಮ್ಮ ಕೆಲಸದಲ್ಲಿ ಬಹಳ ಚುರುಕಾಗಿ ಕಾರ್ಯನಿರತರಾಗಿರುತ್ತಾರೆ. ಆದರೆ ನಮಾಝಿನ ಸಮಯವಾಗುವಾಗ ಸ್ವಲ್ಪ ತಂಪು ನೀರನ್ನು ನೋಡುತ್ತಲೇ ಹಿಂಜರಿಯುತ್ತಾರೆ. ಹೀಗೆ ಆಗಲು ಕಾರಣವೇನು? ಇದರ ಕಾರಣವೇನೆಂದರೆ ಅಲ್ಲಾಹನ ಮಹತ್ವ ಮತ್ತು ಭವ್ಯತೆ ಜನರ ಹೃದಯದಲ್ಲಿಲ್ಲ. ಅವರಿಗೆ ದೇವನ ಬಗ್ಗೆ ಸ್ವಲ್ಪವಾದರೂ ಗೌರವಾದರಗಳು ಇದ್ದಲ್ಲಿ ಹಾಗೂ ಮರಣದ ಬಗ್ಗೆ ಚಿಂತೆ ಮತ್ತು ದೃಢ ನಂಬಿಕೆ ಇರುವುದಾದರೆ ಎಲ್ಲ ವಿಧ ಉದಾಸೀನತೆ ಮತ್ತು ಅಸಡ್ಡೆ ಹೊರಟು ಹೋಗುತ್ತಿತ್ತು. ಆದುದರಿಂದ ಅಲ್ಲಾಹನ ಘನತೆ ಮತ್ತು ಮಹಿಮೆಯ ಬಗ್ಗೆ ಅರಿವು ಹೊಂದಬೇಕು ಮತ್ತು ಯಾವಾಗಲೂ ಅವನಿಗೆ ಭಯಪಡಬೇಕು. ಅಲ್ಲಾಹನ ಹಿಡಿತ ಬಹಳ ಅಪಾಯಕರವಾಗಿರುತ್ತದೆ. ಅವನು ಅನೇಕ ತಪ್ಪುಗಳನ್ನು ಕಡೆಗಣಿಸುತ್ತಾನೆ. ಆದರೆ ಅವನು ಯಾರನ್ನಾದರೂ ಹಿಡಿಗೂಡುವಾಗ ಬಹಳ ಶಕ್ತವಾಗಿ ಹಿಡಿಯುತ್ತಾನೆ. ಅನಂತರ ಆತನನ್ನು ಅಗಲಿದವರ ಸ್ಥಿತಿ ಏನಾಗುವುದು ಎಂಬುದರ ಬಗ್ಗೆಯೂ ಅಲ್ಲಾಹನು ಲೆಕ್ಕಿಸುವುದಿಲ್ಲ. ಇದರ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ: لَا يَخَافُ عُقْبٰهَا – **ಲಾ ಯಖಾಫು ಉಖ್‌ಬಾಹಾ** – ಅರ್ಥ: ಅಲ್ಲಾಹನು ಅದರಿಂದ ಉಂಟಾಗುವ ಪರಿಣಾಮವನ್ನು ಗಣ್ಯ ಮಾಡುವುದಿಲ್ಲ. **(ಪವಿತ್ರ ಖುರ್‌ಆನ್ 91:16)**

ಇದಕ್ಕೆದುರಾಗಿ ಅಲ್ಲಾಹನಿಗೆ ಭಯಪಡುವವರಿಗೆ ಮತ್ತು ಅವನ ಬಗ್ಗೆ ಹೃದಯದಲ್ಲಿ ಗೌರವಾದರ ಹೊಂದಿರುವವರಿಗೆ ಅಲ್ಲಾಹನು ಗೌರವ ನೀಡುತ್ತಾನೆ ಮತ್ತು ಅವನು ಅವರ ರಕ್ಷಕ ಮತ್ತು ಗುರಾಣಿಯಾಗುತ್ತಾನೆ.

مَنْ كَانَ لِلّٰهِ كَانَ اللّٰهُ لَهٗ – **ಮನ್ ಕಾನ ಲಿಲ್ಲಾಹಿ ಕಾನಲ್ಲಾಹು ಲಹೂ** – ಎಂದು ಒಂದು ಹದೀಸ್ (ಪ್ರವಾದಿ ವಚನ) ಇದೆ. ಎಂದರೆ, ಯಾರು ಅಲ್ಲಾಹನಿಗೆ ಸೇರಿದವನಾಗುತ್ತಾನೋ ಅಲ್ಲಾಹನು ಅವನಿಗೆ ಸೇರಿದವನಾಗುತ್ತಾನೆ. ಆದರೆ ಖೇದಕರವಾದುದೇನೆಂದರೆ, ಅದರ ಬಗ್ಗೆ ಗಮನ ಹರಿಸುವ ಮತ್ತು ಅಲ್ಲಾಹನ ಕಡೆಗೆ ಬರಲು ಇಚ್ಛಿಸುವ ಜನರಲ್ಲೂ ಬಹುತೇಕರು ಬಯಸುವುದು ಕೂಡ ಎಲ್ಲವೂ ತಕ್ಷಣ ಲಭಿಸಬೇಕು ಎಂದಾಗಿದೆ. ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಎಷ್ಟು ಸಹನೆ ಮತ್ತು ಧೈರ್ಯದ ಆವಶ್ಯಕತೆ ಇದೆ ಎಂದು ಅವರು ತಿಳಿಯುವುದಿಲ್ಲ. ಆಶ್ಚರ್ಯಕರವಾದುದೇನೆಂದರೆ, ಅವರು ಲೌಕಿಕ ಲಾಭ ಗಳಿಸಲು ಹಗಲು ರಾತ್ರಿ ಪ್ರಯತ್ನ ಮಾಡುತ್ತಾರೆ ಮತ್ತು ಚಿಂತಾಮಗ್ನರಾಗಿರುತ್ತಾರೆ. ಅಂತಹ ಕೆಲಸಗಳಿಗೋಸ್ಕರ ವರ್ಷಗಟ್ಟಲೆ ಕಾಯುತ್ತಾರೆ. ರೈತ ಬೀಜ ಬಿತ್ತಿ ದೀರ್ಘ ಕಾಲ ಕಾಯುತ್ತಾನೆ. ಆದರೆ ಮಂತ್ರಿಸಿ ಊದಿ ನಮ್ಮನ್ನು ಸಂತರನ್ನಾಗಿ ಮಾಡಿರಿ ಎಂದು ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹೇಳುತ್ತಾರೆ. ಯಾವುದೇ ಕಷ್ಟವನ್ನು ಅನುಭವಿಸದೇ ಮತ್ತು ಯಾವುದೇ ಪರೀಕ್ಷೆಗೆ ಗುರಿಯಾಗದೇ ಮೊದಲ ದಿನವೇ ಅತ್ಯುನ್ನತ ಸ್ಥಾನಕ್ಕೆ ತಲಪಲು ಅವರು ಬಯಸುತ್ತಾರೆ.

ತಕ್ಷಣ ಬದಲಾವಣೆ ಉಂಟುಮಾಡುವುದು ಅಲ್ಲಾಹನ ರೀತಿ ಮತ್ತು ನಿಯಮವಲ್ಲವೆಂದು ಚೆನ್ನಾಗಿ ನೆನಪಿಡಿರಿ. ಆಧ್ಯಾತ್ಮಿಕ ಅಭಿವೃದ್ಧಿ ಕ್ರಮೇಣವಾಗುತ್ತದೆ. ನಾವು ಮುಸ್ಲಿಮರಾಗಿದ್ದೇವೆ, ಸತ್ಯವಿಶ್ವಾಸಿಗಳಾಗಿದ್ದೇವೆ ಎಂಬ ಬರೇ ಬಾಯಿಮಾತಿನಿಂದ ಅಲ್ಲಾಹನು ಸಂತೋಷಪಡುವುದಿಲ್ಲ. ಅಲ್ಲಾಹನು ಹೀಗೆ ಹೇಳಿದ್ದಾನೆ:

اَحَسِبَ النَّاسُ اَنْ يُّتْرَكُوْٓا اَنْ يَّقُوْلُوْٓا اٰمَنَّا وَهُمْ لَا يُفْتَنُوْنَ ○

– **ಅಹಸಿಬನ್ನಾಸು ಅನ್‌ಯುತ್‌ರಕೂ ಅನ್ ಯಖೂಲೂ ಆಮನ್ನಾ ವಹುಮ್ ಲಾ ಯುಫ್ತನೂನ್** – ನಾವು ನಂಬಿದ್ದೇವೆ ಎಂದು ಕೇವಲ ಹೇಳಿದ ಕಾರಣದಿಂದ ಜನರನ್ನು ಪರೀಕ್ಷೆಗೆ ಗುರಿಪಡಿಸದೆ ಬಿಟ್ಟುಬಿಡಲಾಗುವುದೆಂದು ಅವರು ಭಾವಿಸಿದ್ದಾರೆಯೇ? **(ಪವಿತ್ರ ಖುರ್‌ಆನ್ 29:3)**

ಕೇವಲ ಮಂತ್ರಿಸಿ ಊದುವ ಮೂಲಕ ಸಂತನನ್ನಾಗಿ ಮಾಡುವುದು ಅಲ್ಲಾಹನ ನಡೆವಳಿಕೆಗೆ ವಿರುದ್ಧವಾಗಿದೆ. ಹೀಗೆ ಮಾಡುವುದು ಅಲ್ಲಾಹನ ನಡೆವಳಿಕೆಯಾಗಿದ್ದರೆ ಹಝ್ರತ್ ಪೈಗಂಬರ್(ಸ) ಹಾಗೆಯೇ ಮಾಡುತ್ತಿದ್ದರು. ತಮಗೋಸ್ಕರ ಜೀವ ಅರ್ಪಿಸಲು ಸಿದ್ಧರಾಗಿದ್ದ ಸಹಾಬಿಯರನ್ನು ಊದಿ ಅವರನ್ನು ಸಂತರನ್ನಾಗಿ ಮಾಡುತ್ತಿದ್ದರು. ಅವರನ್ನು ಪರೀಕ್ಷೆಗೆ ಒಳಪಡಿಸಿ ಅವರ ತಲೆ ಕಡಿದು ಹೋಗುವಂತೆ ಮಾಡುತ್ತಿರಲಿಲ್ಲ. مِنْهُمْ مَّنْ قَضٰى نَحْبَهٗ وَمِنْهُمْ مَّنْ يَّنْتَظِرُ ۖ وَمَا بَدَّلُوْا تَبْدِيْلًا – **ಮಿನ್‌ಹುಮ್ ಮನ ಖಝಾ ನಹ್‌ಬಹೂ ವ ಮಿನ್‌ಹುಮ್ ಮನ್ ಯನ್‌ತಝಿರ್ ವಮಾ ಬದ್ದಲೂ ತಬ್‌ದೀಲ** – ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ. ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭ ಕಾಯುತ್ತಿದ್ದಾರೆ. ಅವರು ತುಸು ಮಾತ್ರವಾದರೂ ಬದಲಾಗಲಿಲ್ಲ. **(ಪವಿತ್ರ ಖುರ್‌ಆನ್ 33:24)** ಎಂದು ಅವರ ಬಗ್ಗೆ ಅಲ್ಲಾಹನು ಹೇಳುತ್ತಿರಲಿಲ್ಲ.

ಲೌಕಿಕ ಲಾಭಗಳು ಕಷ್ಟಪಡದೆ ದೊರಕದಿರುವಾಗ ಧರ್ಮವು ಸುಲಭವಾಗಿ ದೊರಕುವುದೆಂದು ಭಾವಿಸುವುದು ಅವಿವೇಕತನವಾಗಿದೆ. ಧರ್ಮಾನುಸರಣೆ ಸುಲಭ ವೆಂಬುದು ಸತ್ಯವೇ ಆಗಿದೆ. ಆದರೆ ಪ್ರತಿಯೊಂದು ಅನುಗ್ರಹ ಗಳಿಸಲು ಕಷ್ಟ ಪಡುವುದು ಆವಶ್ಯಕ. ಆದಾಗ್ಯೂ ಇಸ್ಲಾಮ್ ಧರ್ಮ ಅಷ್ಟೇನೂ ಕಷ್ಟಕರವಾದದ್ದನ್ನು ಉಪದೇಶಿಸಿಲ್ಲ. ಹಿಂದುಗಳನ್ನು ನೋಡಿರಿ, ಅವರ ಯೋಗಿಗಳು ಮತ್ತು ಸನ್ಯಾಸಿಗಳು ಎಷ್ಟೆಲ್ಲ ಕಷ್ಟಪಡುತ್ತಾರೆ! ಕೆಲವರ ಸೊಂಟ ಮುರಿದು ಹೋಗುತ್ತದೆ. ಕೆಲವರು ಉಗುರು ಉದ್ದವಾಗಿ ಬೆಳೆಸುತ್ತಾರೆ. ಇದೇ ರೀತಿ ಕ್ರೈಸ್ತರಲ್ಲಿ ಬ್ರಹ್ಮಚರ್ಯ ಇದೆ. ಇಸ್ಲಾಮ್ ಇಂತಹವುಗಳನ್ನು ಉಪದೇಶಿಸಿಲ್ಲ. ಬದಲಾಗಿ قَدْ اَفْلَحَ مَنْ زَكّٰىهَا – **ಖದ್ ಅಫ್‌ಲಹ ಮನ್ ಝುಕ್ಕಾಹಾ** – ಎಂದು ಇಸ್ಲಾಮ್ ಹೇಳುತ್ತದೆ. (ಅರ್ಥ: ಆತ್ಮವನ್ನು ಪರಿಶುದ್ಧಗೊಳಿಸಿದವನು ಖಂಡಿತವಾಗಿಯೂ ಜಯಗಳಿಸಿದನು. **(ಪವಿತ್ರ ಖುರ್‌ಆನ್ 91:10)**

ಎಂದರೆ ಅಲ್ಲಾಹನಿಗೋಸ್ಕರ ಎಲ್ಲ ವಿಧ ನವೀನಾಚಾರ, ಅಶ್ಲೀಲ ಕೃತ್ಯಗಳು, ಪಾಪಗಳು ಮತ್ತು ಕೆಟ್ಟ ಭಾವನೆಗಳಿಂದ ದೂರವಿದ್ದು, ಎಲ್ಲ ವಿಧಗಳ ದೈಹಿಕ ಹಾಗೂ ಇಂದ್ರಿಯ ಆಸಕ್ತಿಗಳನ್ನು ಬಿಟ್ಟು ಅಲ್ಲಾಹನ ಮಾರ್ಗದಲ್ಲಿ ಕಷ್ಟಪಡುವುದಕ್ಕೆ ಆದ್ಯತೆ ನೀಡುವ, ಅಲ್ಲಾಹನಿಗೆ ಪ್ರಾಮುಖ್ಯತೆ ನೀಡುವ, ಲೋಕ ಮತ್ತು ಅದರ ಸೊಗಸುಗಳನ್ನು ಬಿಡುವ ವ್ಯಕ್ತಿ ನಿಜವಾಗಿಯೂ ಮೋಕ್ಷ ಗಳಿಸಿದವನಾಗಿದ್ದಾನೆ.*

---

* ಬದ್ರ್ ಪತ್ರಿಕೆಯಲ್ಲಿ ಹೀಗೆ ಬರೆಯಲಾಗಿದೆ: ಧರ್ಮಕ್ಕೆ ಆದ್ಯತೆ ನೀಡಿದವನು ಅಲ್ಲಾಹನ ಜೊತೆ ಸೇರುತ್ತಾನೆ. ಇಂದ್ರಿಯಾಸಕ್ತಿಗಳನ್ನು ಮಣ್ಣಿನಲ್ಲಿ ಅಳಿಸಿ ಹಾಕಬೇಕು. ಪ್ರತಿಯೊಂದು ಕಾರ್ಯದಲ್ಲೂ ಅಲ್ಲಾಹನಿಗೆ ಆದ್ಯತೆ ನೀಡಬೇಕು. ಇದೇ ಧರ್ಮದ ಸಾರಾಂಶವಾಗಿದೆ. ಎಲ್ಲ ಕೆಟ್ಟ ಮಾರ್ಗಗಳನ್ನು ಬಿಡಬೇಕು. ಆಗಲೇ ಅಲ್ಲಾಹನನ್ನು ಲಭಿಸಲು ಸಾಧ್ಯ. **(ಬದ್ರ್ ಸಂಪುಟ 2, ಸಂಚಿಕೆ 6, ಪುಟ 3, ದಿನಾಂಕ 9 ಫೆಬ್ರವರಿ, 1906)**

ಪುನಃ ಹೀಗೆ ಹೇಳಲಾಗಿದೆ: قَدْ خَابَ مَنْ دَسّٰهَا – **ಖದ್ ಖಾಬ ಮನ್ ದಸ್ಸಾಹಾ** – ಅದನ್ನು ಕಳಂಕಿತಗೊಳಿಸಿದವನು ಖಂಡಿತವಾಗಿಯೂ ಪರಾಜಿತನಾದನು. **(ಪವಿತ್ರ ಖುರ್‌ಆನ್ 91:11)** ಎಂದರೆ ಆತ್ಮವನ್ನು ಕಲುಷಿತಗೊಳಿಸಿದವನು ಮತ್ತು ಭೂಮಿಯ ಕಡೆಗೆ ಬಾಗಿದವನು ಮಣ್ಣಿಗೆ ಸಮವಾದನು. ಈ ಒಂದು ವಾಕ್ಯ ಪವಿತ್ರ ಖುರ್‌ಆನಿನ ಉಪದೇಶಗಳ ಸಾರಾಂಶ ಎಂಬಂತಿದೆ. ಮನುಷ್ಯನು ಅಲ್ಲಾಹನ ಸಾಮೀಪ್ಯವನ್ನು ಹೇಗೆ ಪಡೆಯಬೇಕು ಎಂದು ಇದರಿಂದ ಗೊತ್ತಾಗುತ್ತದೆ. ಮನುಷ್ಯನು ತನ್ನ ಶಾರೀರಿಕ ಶಕ್ತಿಯನ್ನು ಕೆಟ್ಟ ರೀತಿಯಲ್ಲಿ ಬಳಸುವುದನ್ನು ಬಿಡುವ ತನಕ ದೇವನ ಸಾಮೀಪ್ಯ ಗಳಿಸಲು ಸಾಧ್ಯವಿಲ್ಲ ಎಂಬುದು ಸಂಪೂರ್ಣ ಸತ್ಯ ಮತ್ತು ಖಚಿತವಾದ ಸಂಗತಿಯಾಗಿದೆ. ಲೋಕದ ಕೊಳಕುಗಳಿಂದ ಹೊರಗೆ ಬರಲು ಇಚ್ಛಿಸುವುದಾದರೆ ಮತ್ತು ಅಲ್ಲಾಹನನ್ನು ಭೇಟಿಯಾಗಲು ಬಯಸುವುದಾದರೆ ಶಾರೀರಿಕ ಅಭಿರುಚಿಗಳನ್ನು ತ್ಯಜಿಸಿರಿ. ಇಲ್ಲದಿದ್ದರೆ,

**ಹಮ್ ಖುದಾ ಖಾಹೀ ವ ಹಮ್ ದುನ್‌ಯಾಯೇ ದೂನ್**

**ಈನ್ ಖಯಾಲ್ ಅಸ್ತ್ ವ ಮಹಾಲ್ ಅಸ್ತ್ ವ ಜುನೂನ್**

ನೀವು ದೇವನನ್ನು ಆಶಿಸುವುದರ ಜೊತೆಗೆ ಈ ಲೋಕವನ್ನು ಕೂಡ ಬಯಸುವುದಾದರೆ ಈ ಯೋಚನೆ ಸಾಧಿಸಲು ಅಸಾಧ್ಯವೂ ಹುಚ್ಚುತನವೂ ಆಗಿದೆ.

ಸತ್ಯದಲ್ಲಿ ಮನುಷ್ಯನ ಸಹಜಗುಣದಲ್ಲಿ ಕೆಡುಕು ಇರಲಿಲ್ಲ ಮತ್ತು ಯಾವುದೇ ಸಂಗತಿಯೂ ಕೆಟ್ಟದ್ದಲ್ಲ. ಆದರೆ ದುರುಪಯೋಗದಿಂದ ಅದು ಕೆಡುಕು ಆಗುತ್ತದೆ. ಉದಾಹರಣೆಗೆ ತೋರಿಕೆಯ ವರ್ತನೆಯನ್ನೇ ತೆಗೆದುಕೊಳ್ಳಿರಿ. ವಾಸ್ತವದಲ್ಲಿ ಇದು ಕೆಟ್ಟದಲ್ಲ. ಒಬ್ಬನು ಅಲ್ಲಾಹನಿಗೋಸ್ಕರ ಒಂದು ಕೆಲಸ ಮಾಡುವಾಗ ಅದರಿಂದ ಅನ್ಯರಲ್ಲಿ ಅಂತಹ ಒಳ್ಳೆಯ ಕೆಲಸ ಮಾಡುವ ಪ್ರೇರಣೆ ಉಂಟಾಗಲಿ ಎಂದು ಆ ಕೆಲಸ ಮಾಡುವುದಾದರೆ ಅದು ಕೆಟ್ಟದ್ದಲ್ಲ. ಆಗ ಆ ತೋರಿಕೆಯು ಒಂದು ಒಳಿತಾಗುತ್ತದೆ.

ತೋರಿಕೆಯ ಕೆಲಸದ ಎರಡು ವಿಧಗಳಲ್ಲಿವೆ. ಉದಾಹರಣೆಗೆ, ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸುತ್ತಿರುವಾಗ ಒಬ್ಬ ಗಣ್ಯ ವ್ಯಕ್ತಿ ಬಂದರೆ ಆ ವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ನಮಾಝನ್ನು ದೀರ್ಘಗೊಳಿಸುವುದು ತೋರಿಕೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಕೆಲವರು ಬಹಳ ಪ್ರಭಾವಿತರಾಗುತ್ತಾರೆ. ಇದೊಂದು ರೀತಿಯ ತೋರಿಕೆಯಾಗಿದೆ. ಆದರೆ ಇದು ಯಾವಾಗಲೂ ಪ್ರಕಟವಾಗುವುದಿಲ್ಲ.

ಹಸಿದಿರುವಾಗ ರೊಟ್ಟಿ ತಿನ್ನುವ ಹಾಗೆ ಮತ್ತು ದಾಹವಾದಾಗ ನೀರು ಕುಡಿಯುವ ಹಾಗೆ ಅದು ಸಂದರ್ಭಕ್ಕನುಸಾರವಾಗಿ ಪ್ರಕಟವಾಗುತ್ತದೆ. ಆದರೆ ಇದಕ್ಕೆದುರಾಗಿ ಒಬ್ಬನು ಅಲ್ಲಾಹನಿಗೋಸ್ಕರ ನಮಾಝ್‌ನ್ನು ನಿಧಾನವಾಗಿ ಅನುಷ್ಠಿಸಿದರೆ ಅದು ತೋರಿಕೆ ಆಗಲಾರದು. ಬದಲಾಗಿ, ಅದು ಅಲ್ಲಾಹನ ಸಂಪ್ರೀತಿ ಗಳಿಸುವ ಮಾರ್ಗವಾಗಿದೆ. ಒಟ್ಟಾರೆ ಹೇಳುವುದಾದರೆ, ತೋರಿಕೆಗೂ ಅದರದೇ ಆದ ಸಂದರ್ಭ ಮತ್ತು ಸ್ಥಳವಿರುತ್ತದೆ. ಸರಿಯಾದ ಸಂದರ್ಭ ಮತ್ತು ಪರಿಸ್ಥಿತಿ ಬರದೇ ಮನುಷ್ಯನಿಗೆ ತನ್ನ ನ್ಯೂನತೆಗಳ ಬಗ್ಗೆ ಗೊತ್ತಾಗುವುದಿಲ್ಲ. ಉದಾಹರಣೆಗೆ ಒಬ್ಬನು ಸ್ವತಃ ದೊಡ್ಡ ಸದಾಚಾರಿಯೆಂದೂ ಪರಿಶುದ್ಧನೆಂದೂ ಭಾವಿಸುತ್ತಾನೆ. ಆತನು ಮಾರ್ಗದಲ್ಲಿ ಏಕಾಂಗಿಯಾಗಿ ನಡೆದು ಹೋಗುತ್ತಿರುವಾಗ ರತ್ನಗಳು ತುಂಬಿದ ಒಂದು ಚೀಲ ಮಾರ್ಗದಲ್ಲಿ ಬಿದ್ದಿರುವುದಾಗಿ ಕಾಣುತ್ತಾನೆ. ಯಾರೂ ತನ್ನನ್ನು ನೋಡುತ್ತಾ ಇಲ್ಲ, ಆದ್ದರಿಂದ ಯಾರೂ ತಡೆಯಾಗಿ ಬರಲಾರರು ಎಂದು ಆತನು ಅದನ್ನು ನೋಡಿ ಯೋಚಿಸಬಹುದು. ಆದರೆ ಅದೇ ವೇಳೆ, ಆತನು ಅದಕ್ಕೆ ಮಾರುಹೋಗದೇ ಇದು ಬೇರೆ ಯಾರದೋ ಸಂಪತ್ತು ಎಂದು ಯೋಚಿಸಿ ಅದನ್ನು ತೆಗೆದುಕೊಳ್ಳುವುದಿಲ್ಲವಾದರೆ ಮತ್ತು ಅದರ ಮೇಲೆ ಆಸೆ ಇಡುವುದಿಲ್ಲವೆಂದಾದರೆ ಆತನು ಪೂರ್ಣ ಪವಿತ್ರತೆಯಿಂದಲೂ ಧರ್ಮನಿಷ್ಠೆಯಿಂದಲೂ ವರ್ತಿಸಿದ್ದಾನೆ ಎಂದಾಯಿತು. ಆದರೆ ಅವನದ್ದು ಕೇವಲ ಬಾಯಿಮಾತಿನ ವಾದ ಮತ್ತು ಸಮರ್ಥನೆ ಎಂದಾದರೆ ಆತನ ನೈಜ ಗುಣ ಆ ಸನ್ನಿವೇಶದಲ್ಲಿ ಪ್ರಕಟವಾಗುವುದು. ಆತನು ಆ ಚೀಲವನ್ನು ಖಂಡಿತವಾಗಿಯೂ ಎತ್ತಿಕೊಳ್ಳುವನು.

ಅದೇ ರೀತಿಯಲ್ಲಿ ಒಬ್ಬ ವ್ಯಕ್ತಿಯ ಬಗ್ಗೆ ಆತನು ತೋರಿಕೆಯ ಕೆಲಸ ಮಾಡುವುದಿಲ್ಲ ಎಂದು ಭಾವಿಸುತ್ತೀರಿ. ತೋರಿಕೆಯ ಕೆಲಸ ಮಾಡುವ ಸಂದರ್ಭ ಒದಗಿ ಬಂದಾಗಲೂ ಆತನು ಹಾಗೆ ಮಾಡುವುದಿಲ್ಲವೆಂದಾದರೆ, ಆತನು ತೋರಿಕೆಯ ಕೆಲಸ ಮಾಡುವವನಲ್ಲವೆಂದು ಸಾಬೀತಾಗುವುದು. ಆದರೆ ನಾನು ಮುಂಚೆ ಹೇಳಿದಂತೆ ಕೆಲವೊಮ್ಮೆ ಈ ಸಂದರ್ಭದ ಈ ರೀತಿಯ ವರ್ತನೆ ಕೂಡ ಒಳಿತಾಗಿ ಬದಲಾಗುತ್ತದೆ. ಉದಾಹರಣೆಗೆ, ಸಾಮೂಹಿಕವಾಗಿ ನಿರ್ವಹಿಸಲಾಗುವ ನಮಾಝ್‌ನಲ್ಲೂ (ಜಮಾಅತ್ ನಮಾಝ್) ಒಂದು ರೀತಿಯ ತೋರಿಕೆ ಇರುತ್ತದೆ. ಆದರೆ ಹಾಗೆ ಮಾಡುವವನ ಉದ್ದೇಶ ಕೇವಲ ಪ್ರದರ್ಶನವೇ ಆಗಿದ್ದರೆ ಅದು ತೋರಿಕೆ ಆಗುತ್ತದೆ. ಆದರೆ ಅದರ ಮೂಲಕ ಆತನು ಅಲ್ಲಾಹನ ಮತ್ತು ಅವನ ಪ್ರವಾದಿಯ ಅನುಸರಣೆಯನ್ನು ಉದ್ದೇಶಿಸುವುದಾದರೆ ಅದೊಂದು ಮಹತ್ವಪೂರ್ಣ ಅನುಗ್ರಹವೇ ಆಗುತ್ತದೆ.

ಆದುದರಿಂದ ಮಸೀದಿಯಲ್ಲೂ ಮನೆಯಲ್ಲೂ ನಮಾಝ್ ಅನುಷ್ಠಿಸಿರಿ. ಅದೇ ರೀತಿಯಲ್ಲಿ ಒಂದೆಡೆ ಧಾರ್ಮಿಕವಾದ ಕೆಲಸಕ್ಕಾಗಿ ಚಂದಾ ಆವಶ್ಯಪಡಲಾಗುವಾಗ ಜನರೆಲ್ಲರೂ ಮೌನವಾಗಿ ಕುಳಿತುಕೊಂಡಿರುವುದನ್ನು ಕಂಡು ಒಬ್ಬ ವ್ಯಕ್ತಿಯು ಅನ್ಯರಲ್ಲಿ ಪ್ರೇರಣೆ ಉಂಟಾಗಲಿಕ್ಕಾಗಿ ಮೊತ್ತಮೊದಲು ತನ್ನ ದೇಣಿಗೆಯನ್ನು ನೀಡುವುದಾದರೆ ಅದು ಬಾಹ್ಯವಾಗಿ ತೋರಿಕೆಯಾಗಿ ಕಾಣಬಹುದಾದರೂ ಅದು ಪುಣ್ಯದಾಯಕ ಕೆಲಸವಾಗಿರುತ್ತದೆ. ಇದೇ ರೀತಿ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: وَلَا تَمْشِ فِي الْأَرْضِ مَرَحًا – **ಲಾ ತಮ್‌ಶಿ ಫಿಲ್ ಅರ್‌ಝಿ ಮರಹನ್** – ಜಂಬದಿಂದ ನೀನು ಭೂಮಿಯ ಮೇಲೆ ನಡೆಯಬೇಡ. **(ಪವಿತ್ರ ಖುರ್‌ಆನ್ 31:19)**

ಆದರೆ ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಂದು ಯುದ್ಧದ ಸಂದರ್ಭದಲ್ಲಿ ಒಬ್ಬನು ಎದೆ ಉಬ್ಬಿಸಿ ಬಿಗುಮಾನದಿಂದ ನಡೆದಾಡುತ್ತಿದ್ದನು. ಆಗ ಅದನ್ನು ನೋಡಿ ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: ಹೀಗೆ ಮಾಡುವುದು ಅಲ್ಲಾಹನಿಗೆ ಇಷ್ಟವಲ್ಲ. ಆದರೆ (ಯುದ್ಧದ) ಈ ಪರಿಸ್ಥಿತಿಯಲ್ಲಿ ಅಲ್ಲಾಹನು ಅದನ್ನು ಇಷ್ಟಪಡುತ್ತಾನೆ. **– ಗರ್ ಹಿಫ್ಝ್‌ಝೇ ಮರಾತಿಬ್ ನ ಕುನೀ ಝಿಂದೀಕೀ –** ನೀನು ಸೂಕ್ತ ಮತ್ತು ಸಂದರ್ಭಕ್ಕೆ ಅನುಸಾರವಾದ ಶಿಷ್ಟಾಚಾರವನ್ನು ಪಾಲಿಸದಿದ್ದರೆ ಅಧರ್ಮಿಯಾಗುವಿ.

ಒಟ್ಟಾರೆ ಹೇಳುವುದಾದರೆ, ಒಂದು ಸ್ವಭಾವಗುಣ ಅನುಯೋಜ್ಯ ಮತ್ತು ಸರಿಯಾದ ಸಂದರ್ಭದಲ್ಲಿ ಮಾಡುವಾಗ ಅದು ಒಬ್ಬನನ್ನು **ಮುಅ್‌ಮಿನ್** (ಸತ್ಯವಿಶ್ವಾಸಿ) ಆಗಿ ಮಾಡುತ್ತದೆ. ತಪ್ಪಾದ ಸಂದರ್ಭದಲ್ಲಿ ಮಾಡುವಾಗ ಅದು ಒಬ್ಬನನ್ನು **ಕಾಫಿರ್** (ಅವಿಶ್ವಾಸಿ) ಆಗಿ ಮಾಡುತ್ತದೆ. ನಾನು ಹಿಂದೆ ಹೇಳಿದಂತೆ, ಯಾವುದೇ ಸ್ವಭಾವಗುಣ ಕೆಟ್ಟದ್ದಲ್ಲ; ಅದರ ಅನುಚಿತ ಬಳಕೆ ಅದನ್ನು ಕೆಟ್ಟದನ್ನಾಗಿ ಮಾಡುತ್ತದೆ.

ಹಝ್ರತ್ ಉಮರರ(ರ) ಸಿಟ್ಟಿನ ಸ್ವಭಾವದ ಬಗ್ಗೆ ಹೀಗೆ ವರದಿಯಾಗಿದೆ – ಅವರೊಂದಿಗೆ ಒಬ್ಬ ವ್ಯಕ್ತಿ ಕೇಳಿದರು: ನೀವು ಇಸ್ಲಾಮ್ ಧರ್ಮಕ್ಕೆ ಸೇರುವ ಮೊದಲು ಬಹಳ ಸಿಟ್ಟು ಮಾಡುವ ಸ್ವಭಾವದವರಾಗಿದ್ದೀರಲ್ಲವೇ? ಹಝ್ರತ್ ಉಮರ್(ರ) ಹೇಳಿದರು: ನನ್ನಲ್ಲಿ ಸಿಟ್ಟು ಮೊದಲಿನ ಹಾಗೆಯೇ ಇದೆ. ಆದರೆ ಹಿಂದೆ ಅದನ್ನು ಅನುಚಿತವಾಗಿ ಬಳಸುತ್ತಿದ್ದೆ. ಈಗ ನಾನು ಅದನ್ನು ತಕ್ಕ ಮತ್ತು ಸರಿಯಾದ ಸಂದರ್ಭದಲ್ಲಿ ಬಳಸುತ್ತೇನೆ. ಮನುಷ್ಯನ ಪ್ರತಿಯೊಂದು ಶಕ್ತಿ ಸಾಮರ್ಥ್ಯವನ್ನು ಅನುಯೋಜ್ಯ ಸಂದರ್ಭದಲ್ಲಿ ಬಳಸಬೇಕೆಂದು ಇಸ್ಲಾಮ್ ಧರ್ಮ ನಿರ್ದೇಶನ ನೀಡುತ್ತದೆ. ಆದುದರಿಂದ ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳು ವ್ಯರ್ಥವಾಗಿ

ಹೋಗುವಂತೆ ಮಾಡದಿರಿ. ಬದಲಾಗಿ, ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಬಳಸಲು ಕಲಿಯಿರಿ.

ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆ ತೋರಿಸಿರಿ ಎಂದು ಹೇಳುವುದು ಸುಳ್ಳು ಮತ್ತು ಊಹಾತ್ಮಕ ನಂಬಿಕೆಗಳಾಗಿವೆ. ಆ ಉಪದೇಶ ಆ ಸ್ಥಳ ಮತ್ತು ಆ ಕಾಲಘಟ್ಟಕ್ಕೆ ಅನುಸಾರವಾಗಿರಲೂಬಹುದು. ಸದಾ ಕಾಲಕ್ಕೆ ಈ ನಿಯಮವನ್ನು ಪಾಲಿಸಲೂ ಸಾಧ್ಯವಲ್ಲ, ಜಾರಿಗೊಳಿಸಲೂ ಸಾಧ್ಯವಲ್ಲ.

ಮನುಷ್ಯನು ನಾಲ್ಕು ದಿಕ್ಕುಗಳಲ್ಲೂ ಕೊಂಬೆಗಳು ಚಾಚಿಕೊಂಡಿರುವ ಒಂದು ವೃಕ್ಷದ ಹಾಗೆ. ಆ ಮರದ ಕೇವಲ ಒಂದು ಕೊಂಬೆಯ ಕಡೆಗೆ ಮಾತ್ರ ಗಮನಕೊಟ್ಟರೆ ಉಳಿದ ಕೊಂಬೆಗಳು ನಾಶವಾಗುವುವು. ಕ್ರೈಸ್ತ ಧರ್ಮದ ಈ ಉಪದೇಶದಲ್ಲಿರುವ ನ್ಯೂನತೆ ಸ್ಪಷ್ಟವಾಗಿ ತಿಳಿದುಬರುತ್ತಿದೆ. ಈ ಉಪದೇಶ ಪಾಲಿಸುವುದರಿಂದ ಮನುಷ್ಯನ ಎಲ್ಲ ಶಕ್ತಿಸಾಮರ್ಥ್ಯಗಳು ಅಭಿವೃದ್ಧಿ ಹೊಂದುವುದಾದರೂ ಹೇಗೆ? ಕೇವಲ ಕ್ಷಮಿಸುವುದೇ ಒಂದು ಉತ್ತಮ ಸಂಗತಿಯಾಗಿದ್ದರೆ ಮನುಷ್ಯನಲ್ಲಿ ಪ್ರತೀಕಾರ ಮಾಡುವ ಗುಣವನ್ನು ಏಕೆ ಇರಿಸಲಾಗಿದೆ? ಮಾತ್ರವಲ್ಲ, ಕ್ಷಮಿಸುವ ಈ ಗುಣದ ಪ್ರಕಾರ ಅವರು ಏಕೆ ನಡೆಯುತ್ತಿಲ್ಲ?

ಆದರೆ ಇದಕ್ಕೆ ಎದುರಾಗಿ ಇಸ್ಲಾಮ್ ಪ್ರತಿಪಾದಿಸುವ ಉಪದೇಶವೇ ಪರಿಪೂರ್ಣವಾದದ್ದು ಆಗಿದೆ. ಅದು ನಮಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೂಲಕ ಲಭಿಸಿದೆ. ಅದು ಹೀಗೆ:

جَزٰٓؤُا سَيِّئَةٍ سَيِّئَةٌ مِّثْلُهَا ۚ فَمَنْ عَفَا وَاَصْلَحَ فَاَجْرُهٗ عَلَى اللّٰهِ

**– ಜಝಾಉ ಸಯ್ಯಿಅತಿನ್ ಸಯ್ಯಿಅತುನ್ ಮಿಸ್‌ಲುಹಾ ಫಮನ್ ಅಫಾ ವ ಅಸ್‌ಲಹ ಫಅಜ್‌ರುಹೂ ಅಲಲ್ಲಾಹಿ –** ಎಂದರೆ ಕೆಡುಕಿನ ಪ್ರತಿಫಲ ಅದಕ್ಕೆ ಸಮಾನವಾದ ಕೆಡುಕಾಗಿದೆ. ಆದರೆ ಸುಧಾರಣೆ ಉಂಟಾಗಬಹುದಾದ ಸಂದರ್ಭದಲ್ಲಿ ಯಾರಾದರೂ ಕ್ಷಮೆ ನೀಡಿದರೆ ಮತ್ತು ಅದರಿಂದ ಕೆಡುಕು ಉಂಟಾಗದಿದ್ದರೆ ಅದರ ಪ್ರತಿಫಲ ಅವನಿಗೆ ಅಲ್ಲಾಹನಿಂದ ಲಭಿಸುವುದು. **(ಪವಿತ್ರ ಖುರ್‌ಆನ್ 42: 41)**

ಮೇಲಿನ ಪವಿತ್ರ ಖುರ್‌ಆನಿನ ವಚನದಿಂದ ಸ್ಪಷ್ಟವಾಗುವುದೇನೆಂದರೆ, ಪ್ರತಿಯೊಂದು ಸಂದರ್ಭದಲ್ಲಿ ಕೆಡುಕನ್ನು ಎದುರಿಸಬಾರದೆಂದು ಮತ್ತು ಪ್ರತೀಕಾರ ಮಾಡಬಾರದೆಂದು ಇಸ್ಲಾಮ್ ಉಪದೇಶಿಸುವುದಿಲ್ಲ. ಅಲ್ಲಾಹನು ಇಚ್ಛಿಸುವುದೇನೆಂದರೆ

ಸಂದರ್ಭ ಮತ್ತು ಸ್ಥಳವನ್ನು ನೋಡಬೇಕು. ಅಪರಾಧವನ್ನು ಕ್ಷಮಿಸುವುದರಿಂದ ಪ್ರಯೋಜನ ಸಿಗುವುದೋ ಅಥವಾ ಶಿಕ್ಷೆ ನೀಡಬೇಕಾಗಿದೆಯೋ ಎನ್ನುವುದನ್ನು ನೋಡಬೇಕು. ಶಿಕ್ಷೆ ನೀಡುವುದು ಯೋಗ್ಯವಾಗಿದ್ದರೆ ಆಗ ಶಿಕ್ಷೆಯನ್ನು ಅಪರಾಧಕ್ಕೆ ಅನುಸಾರವಾಗಿ ನೀಡಬೇಕು. ಒಂದು ವೇಳೆ ಕ್ಷಮಿಸುವುದು ಯೋಗ್ಯವಾಗಿದ್ದರೆ ಶಿಕ್ಷೆ ನೀಡುವ ಯೋಚನೆ ಬಿಟ್ಟುಬಿಡಬೇಕು.

ಇಸ್ಲಾಮಿನ ಉಪದೇಶಗಳ ಶ್ರೇಷ್ಠತೆ ಇದಾಗಿದೆ. ಏಕೆಂದರೆ ಅದು ಪ್ರತಿಯೊಂದು ಅಂಶವನ್ನು ಗಮನದಲ್ಲಿಡುತ್ತದೆ. ಇಂಜೀಲಿನ ಉಪದೇಶವನ್ನು ಅನುಷ್ಠಾನಕ್ಕೆ ತಂದು ಪ್ರತಿಯೊಬ್ಬ ಅಕ್ರಮಿಯನ್ನು ಶಿಕ್ಷಿಸದೆ ಬಿಟ್ಟುಬಿಡುವುದಾದರೆ ಲೋಕದಲ್ಲಿ ಅಂಧಕಾರ ಕವಿಯುವುದು. ನೀವು ಯಾವಾಗಲೂ ನೆನಪಿಡಬೇಕಾದುದೇನೆಂದರೆ, ನೀವು ನಿಮ್ಮ ಎಲ್ಲ ಶಕ್ತಿಗಳನ್ನು ಮೃತವೆಂದು ಭಾವಿಸಬಾರದು. ನೀವು ಅವುಗಳನ್ನು ಅನುಯೋಜ್ಯ ಸಂದರ್ಭದಲ್ಲಿ ಉಪಯೋಗಿಸಲು ಪ್ರಯತ್ನಿಸಬೇಕು. ಇಸ್ಲಾಮಿನ ಉಪದೇಶಗಳು ಹೇಗಿವೆ ಎಂದರೆ ಅವು ಮನುಷ್ಯನ ಶಕ್ತಿಗಳ ರೂಪವನ್ನು ಚಿತ್ರಿಸಿ ತೋರಿಸಿವೆ. ಆದರೆ ಕ್ರೈಸ್ತರ ಸಿಹಿ ಮತ್ತು ಮಧುರವಾದ ಮಾತುಗಳಿಂದ ಆಕರ್ಷಿತರಾಗಿ ಇಸ್ಲಾಮ್ ಎಂಬ ಅನುಗ್ರಹವನ್ನು ಬಿಟ್ಟುಬಿಡುವವರ ಬಗ್ಗೆ ದುಃಖವಾಗುತ್ತದೆ. ಸತ್ಯವಂತನಾದವನು ಪ್ರತಿಯೊಂದು ಪರಿಸ್ಥಿತಿಯಲ್ಲಿ ಅನ್ಯರಿಗೆ ಸಿಹಿಕರವಾಗಿ ಇರುವುದಿಲ್ಲ. ತಾಯಿ ತನ್ನ ಮಗುವಿಗೆ ಯಾವಾಗಲೂ ಸಿಹಿ ತಿನಿಸನ್ನೇ ನೀಡಲು ಸಾಧ್ಯವಿಲ್ಲ. ಬೇಕಾದಾಗ ಆಕೆ ಕಹಿ ಮದ್ದನ್ನು ಕೂಡ ಮಗುವಿಗೆ ಕೊಡುತ್ತಾಳೆ. ಒಬ್ಬ ಸತ್ಯವಂತ ಸುಧಾರಕನ ಸ್ಥಿತಿಯೂ ಇದೇ ಆಗಿದೆ. ಎಲ್ಲ ರೀತಿಯಲ್ಲೂ ಅನುಗ್ರಹೀತ ಉಪದೇಶ ಇದೇ ಆಗಿದೆ. ನಮ್ಮ ದೇವ ಸತ್ಯ ದೇವನಾಗಿದ್ದಾನೆ. ನಮ್ಮ ದೇವನನ್ನು ಕ್ರೈಸ್ತರು ಕೂಡ ನಂಬುತ್ತಾರೆ. ದೇವನ ಯಾವ ಗುಣಗಳನ್ನು ನಾವು ನಂಬುತ್ತೇವೆಯೋ ಅವುಗಳನ್ನು ಕ್ರೈಸ್ತರು ಕೂಡ ಒಪ್ಪಲೇ ಬೇಕಾಗುತ್ತದೆ. ಕ್ರೈಸ್ತ ಧರ್ಮದ ಉಪದೇಶ ತಲಪದ ಒಂದು ದ್ವೀಪದ ಜನರನ್ನು ಪುನರುತ್ಥಾನದ ದಿನದಂದು ಹೇಗೆ ಪ್ರಶ್ನಿಸಲಾಗುವುದು? ಎಂದು ಪ್ರಶ್ನೆಗೆ ಉತ್ತರಕೊಡುತ್ತಾ ಪಾದರಿ ಫಂಡರ್ ಸ್ವತಃ ತನ್ನ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ: ಅವರೊಂದಿಗೆ ನೀವು ಯೇಸುವನ್ನು ನಂಬಿದ್ದಿರೋ, ಪಾಪಪರಿಹಾರ ಸಿದ್ಧಾಂತವನ್ನು ನಂಬಿದ್ದಿರೋ ಎಂಬ ಪ್ರಶ್ನೆ ಕೇಳಲಿಕ್ಕಿಲ್ಲ. ಇಸ್ಲಾಮ್ ವಿವರಿಸುವ ಗುಣಗಳನ್ನು ಹೊಂದಿರುವ ಏಕನೂ ಸಹಭಾಗಿ ಇಲ್ಲದವನೂ ಆದ ದೇವನನ್ನು ನಂಬಿರುವಿರೋ ಎಂದು ಅವರೊಡನೆ ಕೇಳಲಾಗುವುದು.

ಇಸ್ಲಾಮಿನ ದೇವನು ಎಂತಹ ದೇವನೆಂದರೆ ಅರಣ್ಯ ಮತ್ತು ಕಾಡುಗಳಲ್ಲಿ ವಾಸಿಸುವವನು ಕೂಡ ಹುಟ್ಟುಗುಣವಾಗಿ ಮತ್ತು ಪ್ರಕೃತಿ ಸಹಜವಾಗಿ ಅವನನ್ನು ನಂಬಲು ನಿರ್ಬಂಧಿತನಾಗುತ್ತಾನೆ. ಪ್ರತಿಯೊಬ್ಬನ ಮನಸ್ಸಾಕ್ಷಿ ಮತ್ತು ಹೃದಯದ ಪ್ರಕಾಶ ಇಸ್ಲಾಮ್ ಪ್ರತಿಪಾದಿಸುವ ದೇವನನ್ನು ನಂಬಲು ಹೇಳುತ್ತದೆ. ಮೇಲೆ ವಿವರಿಸಲಾದ ಇಸ್ಲಾಮಿನ ಈ ವಾಸ್ತವಿಕತೆಯನ್ನೂ ಅದರ ಮೂಲ ಪಾಠಗಳನ್ನೂ ಇಂದಿನ ಕಾಲದ ಮುಸ್ಲಿಮರು ಮರೆತು ಬಿಟ್ಟಿರುವರು. ಈ ಇಸ್ಲಾಮನ್ನು ಪುನಃ ಸ್ಥಾಪಿಸುವುದು ನಮ್ಮ ಕೆಲಸವಾಗಿದೆ. ಈ ಮಹತ್ತಾದ ಉದ್ದೇಶದಿಂದ ಈ ವೈಭವಶಾಲಿ ಕಾರ್ಯವನ್ನು ಈಡೇರಿಸಲು ನಾನು ಆಗಮಿಸಿದ್ದೇನೆ.

ನಾನು ಮೇಲೆ ವಿವರಿಸಿದ ಸಂಗತಿಗಳಲ್ಲದೆಯೂ ಅರಿವಿಗೆ ಸಂಬಂಧಪಟ್ಟ ಮತ್ತು ನಂಬಿಕೆಗೆ ಸಂಬಂಧಪಟ್ಟ ಬೇರೆ ಅನೇಕ ತಪ್ಪುಗಳು ಮುಸ್ಲಿಮರಲ್ಲಿ ಹಬ್ಬಿವೆ. ಅವುಗಳನ್ನು ದೂರಸರಿಸುವುದು ನಮ್ಮ ಕೆಲಸವಾಗಿದೆ. ಉದಾಹರಣೆಗೆ ಈಸಾ ಮಸೀಹ್(ಅ) ಮತ್ತು ಅವರ ತಾಯಿ ಶೈತಾನನಿಂದ ಸ್ಪರ್ಶಿಸಲ್ಪಡದೆ ಶುದ್ಧರಾಗಿದ್ದಾರೆ. ಅವರಿಬ್ಬರನ್ನು ಹೊರತುಪಡಿಸಿ ಇತರ ಎಲ್ಲರೂ ಅಶುದ್ಧರು ಎಂದು ಮುಸ್ಲಿಮರು ನಂಬುತ್ತಾರೆ. **(ನಊಧುಬಿಲ್ಲಾಹ್).** ಇದು ಸ್ಪಷ್ಟವಾದ ತಪ್ಪು ಮತ್ತು ಅವಿಶ್ವಾಸವಾಗಿದೆ. ಇದರಿಂದ ಹಝ್ರತ್ ಪೈಗಂಬರರನ್ನು(ಸ) ಕಠಿಣವಾಗಿ ಅಪಮಾನಿಸಿದಂತಾಗುತ್ತದೆ. ಇಂತಹ ವಿಷಯಗಳನ್ನು ಉಂಟುಮಾಡಿ ಇಸ್ಲಾಮನ್ನು ಕಠಿಣವಾಗಿ ನಿಂದಿಸಲು ಪ್ರಯತ್ನಿಸುವವರಿಗೆ ಇಸ್ಲಾಮಿನ ಬಗ್ಗೆ ಅಲ್ಪವೂ ಅಭಿಮಾನವಿಲ್ಲ. ಈ ಜನರು ಇಸ್ಲಾಮಿನಿಂದ ಬಹಳ ದೂರ ಸರಿದಿದ್ದಾರೆ. ವಾಸ್ತವದಲ್ಲಿ ಇದಕ್ಕೆ ಸಂಬಂಧಿಸಿದ ವಿವರಣೆ ಹೀಗೆ: ಎರಡು ರೀತಿಗಳ ಜನನವಿರುತ್ತದೆ ಎಂದು ಪವಿತ್ರ ಖುರ್‌ಆನಿನಿಂದ ಸಾಬೀತಾಗುತ್ತದೆ. ಒಂದು, **ರೂಹುಲ್‌ಖುದ್‌ಸಿನ** (ದೇವದೂತ) ಸ್ಪರ್ಶದ ಮೂಲಕ. ಇನ್ನೊಂದು, ಶೈತಾನನ ಸ್ಪರ್ಶದಿಂದ. ಎಲ್ಲ ಸಾತ್ವಿಕರ ಮತ್ತು ಸತ್ಯವಂತರ ಜನನ **ರೂಹುಲ್‌ಖುದ್‌ಸಿನ** ಸ್ಪರ್ಶದಿಂದಾಗಿರುತ್ತದೆ. ಕೆಟ್ಟ ಕೆಲಸದ ಮೂಲಕ ಜನಿಸುವವರು ಶೈತಾನನ ಸ್ಪರ್ಶದಿಂದ ಜನಿಸುತ್ತಾರೆ. ಎಲ್ಲ ಪ್ರವಾದಿಗಳು ರೂಹುಲ್‌ಖುದ್‌ಸಿನ ಸ್ಪರ್ಶದಿಂದ ಜನಿಸಿದವರಾಗಿದ್ದಾರೆ. ಆದರೆ ಯಹೂದಿಯರು ಈಸಾ ಮಸೀಹರ(ಅ) ಬಗ್ಗೆ ಅವರು ವ್ಯಭಿಚಾರ ಪುತ್ರನೆಂದೂ ಪಂಡಾರ ಎಂಬ ಹೆಸರಿನ ಒಬ್ಬ ಸೈನಿಕನೊಂದಿಗೆ ಅವರ ತಾಯಿ ಮರ್‌ಯಮಿಗೆ ಇದ್ದ ಅನೈತಿಕ ಸಂಬಂಧದಿಂದ ಜನಿಸಿದ ಜಾರಜನೆಂದೂ ಆ ಕಾರಣದಿಂದ ಶೈತಾನನ ಸ್ಪರ್ಶ ಪಡೆದವನೆಂದೂ

ಆಕ್ಷೇಪಿಸಿದ್ದರು **(ನಊಝುಬಿಲ್ಲಾಹ್)**. ಆದುದರಿಂದ ಅಲ್ಲಾಹನು ಈಸಾ ಮಸೀಹರಿಂದ(ಅ) ಈ ಅಪವಾದವನ್ನು ನಿವಾರಿಸಲು ಈಸಾ ಮಸೀಹ್(ಅ) ಸಹ **ರೂಹುಲ್‌ಖುದ್‌ಸಿನ** ಸ್ಪರ್ಶದಿಂದ ಜನಿಸಿದವರು ಎಂದು ಅವರ ಬಗ್ಗೆ ಸಾಕ್ಷಿ ಹೇಳಿದನು. ಆದರೆ ನಮ್ಮ ಪೈಗಂಬರ್(ಸ) ಮತ್ತು ಇತರ ಪ್ರವಾದಿಗಳ ವಿರುದ್ಧ ಇಂತಹ ರೀತಿಯ ಆಕ್ಷೇಪಗಳು ಇರಲಿಲ್ಲ. ಆದುದರಿಂದ ಅವರೆಲ್ಲರ ಬಗ್ಗೆ ಆ ರೀತಿಯ ವಿವರಣೆ ನೀಡುವ ಆವಶ್ಯಕತೆ ಇರಲಿಲ್ಲ.

ನಮ್ಮ ಪೈಗಂಬರರ(ಸ) ತಂದೆ ಅಬ್ದುಲ್ಲಾಹ್ ಮತ್ತು ತಾಯಿ ಆಮಿನರನ್ನು ಮೊದಲಿನಿಂದಲೇ ಬಹಳ ಗೌರವದಿಂದ ಕಾಣಲಾಗುತ್ತಿತ್ತು. ಅವರ ಬಗ್ಗೆ ಯಾವುದೇ ದುರಾಲೋಚನೆ ಯಾರಿಗೂ ಇರಲಿಲ್ಲ. ಒಬ್ಬನು ಮೊಕದ್ದಮೆಯಲ್ಲಿ ಹಿಡಿಗೂಡಲ್ಪಟ್ಟರೆ ಆತನು ನಿರಪರಾಧಿ ಎಂಬುದಕ್ಕೆ ಸಾಕ್ಷ್ಯ ನೀಡಬೇಕಾಗುತ್ತದೆ. ಆದರೆ ಒಬ್ಬನು ಮೊಕದ್ದಮೆಯಲ್ಲಿ ಬಂಧಿಸಲ್ಪಡದಿರುವಾಗ ಆತನು ನಿರಪರಾಧಿ ಎಂಬುದರ ಬಗ್ಗೆ ಸಾಕ್ಷ್ಯ ನೀಡಬೇಕಾದ ಆವಶ್ಯಕತೆಯೇ ಇರುವುದಿಲ್ಲ.

ಮುಸ್ಲಿಮರಲ್ಲಿರುವ ಇನ್ನೊಂದು ತಪ್ಪುಗ್ರಹಿಕೆ ಮಿಅ್‌ರಾಜಿನ ಬಗ್ಗೆಯಾಗಿದೆ. ಹಝ್ರತ್ ಪೈಗಂಬರರಿಗೆ(ಸ) **ಮಿಅ್‌ರಾಜ್** ಆಗಿತ್ತು ಎಂದು ನಾವು ನಂಬುತ್ತೇವೆ. ಆದರೆ ಅದು ಸಾಧಾರಣವಾದ ಒಂದು ಕನಸು ಮಾತ್ರವಾಗಿತ್ತು ಎಂದು ಕೆಲವರು ನಂಬುತ್ತಾರೆ. ಇದು ತಪ್ಪು ಅಭಿಪ್ರಾಯವಾಗಿದೆ. ಅದೇ ರೀತಿ ಮಿಅ್‌ರಾಜ್‌ನಲ್ಲಿ ಹಝ್ರತ್ ಪೈಗಂಬರರು(ಸ) ದೇಹಸಮೇತ ಆಕಾಶಕ್ಕೆ ಹೋಗಿದ್ದಾರೆಂಬ ನಂಬಿಕೆ ಕೂಡ ತಪ್ಪಾಗಿದೆ. ವಾಸ್ತವಿಕ ಮತ್ತು ಸರಿಯಾದ ನಂಬಿಕೆ ಏನೆಂದರೆ **ಮಿಅ್‌ರಾಜ್** ಎಂಬುದು ಒಂದು ಕಶ್‌ಫ್ (ದಿವ್ಯದರ್ಶನ) ರೂಪದಲ್ಲಿ (ಹಝ್ರತ್ ಪೈಗಂಬರರದ್ದೇ(ಸ) ಆದ ಮತ್ತೊಂದು) ಪ್ರಕಾಶಮಾನವಾದ ಶರೀರದೊಂದಿಗೆ ಸಂಭವಿಸಿದ್ದಾಗಿದೆ. ಅದೊಂದು ಪ್ರಕಾಶದ ಶರೀರವಾಗಿತ್ತು. ಅದೊಂದು ಎಚ್ಚರದಿಂದಿರುವ ಸ್ಥಿತಿಯಲ್ಲಿ ಸಂಭವಿಸಿತ್ತು. ಆದರೆ ಅದು ದಿವ್ಯದರ್ಶನ ರೂಪದಲ್ಲಿ ಪ್ರಕಾಶಭರಿತ ಶರೀರದೊಂದಿಗೆ ಸಂಭವಿಸಿದ್ದಾಗಿತ್ತು. ಇದನ್ನು ಈ ಲೋಕದ ಜನರು ಮನವರಿಕೆ ಮಾಡಲಾರರು. ಅಂತಹ ಅನುಭವ ಆದವರಿಗೆ ಮಾತ್ರ ಅದನ್ನು ಮನವರಿಕೆ ಮಾಡಲು ಸಾಧ್ಯವಿದೆ. ಸತ್ಯವೇನೆಂದರೆ, ಈ ಭೌತಿಕ ಶರೀರ ಮತ್ತು ಎಚ್ಚರದಿಂದಿರುವ ಸ್ಥಿತಿಯಲ್ಲಿ ಆಕಾಶಕ್ಕೆ ಹೋಗುವ ಅದ್ಭುತ ಕೃತ್ಯ ತೋರಿಸಲು ಯಹೂದಿಯರು ಆವಶ್ಯಪಟ್ಟಿದ್ದರು. ಅದಕ್ಕೆ ಉತ್ತರವಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿತ್ತು.

قُلْ سُبْحَانَ رَبِّيْ هَلْ كُنْتُ اِلَّا بَشَرًا رَّسُوْلًا

**– ಖುಲ್ ಸುಬ್‌ಹಾನ ರಬ್ಬೀ ಹಲ್ ಕುನ್‌ತು ಇಲ್ಲಾ ಬಶರರ್‍ರಸೂಲ –**

ನೀನು ಹೇಳು: ನನ್ನ ಪ್ರಭು ಪರಿಶುದ್ಧನು, ನಾನೊಬ್ಬ ಸಂದೇಶವಾಹಕನಾದ ಮನುಷ್ಯನು ಮಾತ್ರ ಆಗಿದ್ದೇನೆ. **(ಪವಿತ್ರ ಖುರ್‌ಆನ್ 17:94)** ಮನುಷ್ಯನು ಎಂದೂ ಆಕಾಶವನ್ನೇರಿ ಹೋಗಲಾರನು. ಇದು ಪುರಾತನ ಕಾಲದಿಂದ ಜಾರಿಯಲ್ಲಿರುವ ಅಲ್ಲಾಹನ ನಿಯಮವಾಗಿದೆ.

ಬಹುತೇಕ ಮುಸ್ಲಿಮರಲ್ಲಿರುವ ಇನ್ನೊಂದು ತಪ್ಪೇನೆಂದರೆ, ಅವರು ಹದೀಸುಗಳಿಗೆ ಪವಿತ್ರ ಖುರ್‌ಆನಿನ ಮೇಲೆ ಆದ್ಯತೆ ನೀಡುತ್ತಾರೆ. ಪವಿತ್ರ ಖುರ್‌ಆನ್ ದೃಢವಾದ ಸತ್ಯ ಎಂಬ ಪದವಿಯನ್ನು ಹೊಂದಿದೆ. ಆದರೆ ಹದೀಸುಗಳ ಸ್ಥಾನ ಅನುಮಾನಕರವಾಗಿದೆ. ಹದೀಸು* **ಖಾಝೀ** (ನ್ಯಾಯಾಧೀಶ, ತೀರ್ಪುಗಾರ) ಅಲ್ಲ. ಪವಿತ್ರ ಖುರ್‌ಆನ್ ಹದೀಸುಗಳ ಮೇಲೆ ನ್ಯಾಯಾಧೀಶವಾಗಿದೆ. ಹದೀಸುಗಳು ಪವಿತ್ರ ಖುರ್‌ಆನನ್ನು ವ್ಯಾಖ್ಯಾನಿಸುತ್ತದೆ ಎಂದು ಹೇಳಬಹುದು. ಅದನ್ನು ಅದರ ಸ್ಥಾನದಲ್ಲಿರಿಸಬೇಕು. ಪವಿತ್ರ ಖುರ್‌ಆನಿಗೆ ಹದೀಸು ವಿರುದ್ಧವಾಗಿಲ್ಲವಾದರೆ ಮತ್ತು ಅದಕ್ಕೆ ಅನುಸಾರವಾಗಿದ್ದರೆ ಅದನ್ನು ಅಂಗೀಕರಿಸಬೇಕು. ಆದರೆ ಪವಿತ್ರ ಖುರ್‌ಆನಿಗೆ ವಿರುದ್ಧವಾದುದು ಹದೀಸು ಅಲ್ಲ. ಅದು ರದ್ದುಗೊಳ್ಳಲ್ಪಟ್ಟ ನುಡಿಯಾಗಿದೆ. ಆದರೆ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡಿಕೊಳ್ಳಲು ಹದೀಸುಗಳು ಅಗತ್ಯ. ಪವಿತ್ರ ಖುರ್‌ಆನಿನಲ್ಲಿ ಅವತೀರ್ಣವಾದ ಆಜ್ಞೆಗಳನ್ನು ಹಝ್ರತ್ ಪೈಗಂಬರ್(ಸ) ಸ್ವತಃ ಮಾಡಿ ಮತ್ತು ಶಿಷ್ಯರಿಂದ ಮಾಡಿಸಿ ತೋರಿಸಿದರು ಮತ್ತು ಒಂದು ಮಾದರಿಯನ್ನು ನೆಲೆನಿಲ್ಲಿಸಿದರು. ಈ ಮಾದರಿ ಇಲ್ಲದಿರುತ್ತಿದ್ದರೆ ಇಸ್ಲಾಮನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿರಲಿಲ್ಲ. ಆದರೆ ಮೂಲಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಅನ್ಯರಿಗೆ ಗೊತ್ತಿಲ್ಲದಂತಹ ಅಥವಾ ಈಗ ಇರುವ ಹದೀಸುಗಳನ್ನು ಸತ್ಯಪಡಿಸುವಂತಹ ಹಝ್ರತ್ ಪೈಗಂಬರರ(ಸ) ಹದೀಸುಗಳನ್ನು ದಿವ್ಯದರ್ಶನದ ಅನುಭವ ಹೊಂದಿರುವ ಕೆಲವರು ನೇರವಾಗಿ ಆಲಿಸುತ್ತಾರೆ.

ಮೇಲೆ ವಿವರಿಸಿದಂತೆ ಅಲ್ಲಾಹನಿಗೆ ಇಷ್ಟವಿಲ್ಲದ ಅನೇಕ ತಪ್ಪುಗಳು ಮುಸ್ಲಿಮರಲ್ಲಿವೆ. ಅವು ಇಸ್ಲಾಮಿಗೆ ಪೂರ್ಣವಾಗಿಯೂ ವಿರುದ್ಧವಾಗಿವೆ. ಆದುದರಿಂದ ತಮ್ಮ ತಪ್ಪು ನಂಬಿಕೆಗಳನ್ನು ಬಿಟ್ಟು ನೇರಮಾರ್ಗಕ್ಕೆ ಬರುವ ತನಕ ಅಲ್ಲಾಹನು ಈ ಜನರನ್ನು

ಮುಸ್ಲಿಮರೆಂದು ಗಣಿಸಲಾರನು. ಈ ತಪ್ಪುಗಳನ್ನು ದೂರಸರಿಸಿ ಲೋಕದಲ್ಲಿ ನೈಜ ಇಸ್ಲಾಮನ್ನು ನೆಲೆನಿಲ್ಲಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ನಿಯೋಜಿಸಿರುವನು.

ನಮ್ಮ ಮತ್ತು ಇತರ ಮುಸ್ಲಿಮರ ನಡುವೆ ಇರುವ ವ್ಯತ್ಯಾಸ ಇವುಗಳಾಗಿವೆ. ಅವರ ಸ್ಥಿತಿ ಇಸ್ಲಾಮಿಗೆ ಅನುಸಾರವಾಗಿ ಇಲ್ಲ. ಅವರು ಒಂದು ಹಾಳಾದ ಮತ್ತು ನಿರುಪಯುಕ್ತ ತೋಟದ ಹಾಗೆ ಆಗಿರುವರು. ಅವರ ಹೃದಯಗಳು ಮಲಿನಗೊಂಡಿವೆ. ಸತ್ಯ ಮತ್ತು ನೇರಮಾರ್ಗವನ್ನು ಅವಲಂಬಿಸಿ ನೈಜ ಇಸ್ಲಾಮಿನ ಮಾದರಿಯಾದ ಒಂದು ಹೊಸ ಸಮುದಾಯವನ್ನು ಸೃಷ್ಟಿಸಲು ಅಲ್ಲಾಹನು ಬಯಸುತ್ತಾನೆ.

**(ಅಲ್‌ಹಕಮ್ 17–2–1906 ರಿಂದ 7–6–1906ರ ತನಕದ ಸಂಚಿಕೆಗಳಿಂದ)**

# ಪದಕೋಶ

**ಹಝ್ರತ್:** ಸಾತ್ವಿಕರಾದ ವ್ಯಕ್ತಿಗಳ ಹೆಸರುಗಳನ್ನು ಗೌರವ ಸೂಚಕವಾಗಿ ಕರೆಯುವಾಗ ಉಪಯೋಗಿಸುವ ಪದ. ಸನ್ಮಾನ್ಯ ಎಂಬ ಪದಕ್ಕೆ ಸಮಾನಾರ್ಥವನ್ನು ಹೊಂದಿರುವ ಪದ.

**ಹಝ್ರತ್ ಮುಹಮ್ಮದ್(ಸ):** ಇಸ್ಲಾಂ ಧರ್ಮದ ಸ್ಥಾಪಕರು.

**ಹಝ್ರತ್ ಪೈಗಂಬರ್(ಸ):** ಇಸ್ಲಾಂ ಧರ್ಮದ ಸ್ಥಾಪಕರನ್ನು ಹೀಗೆ ಕರೆಯಲಾಗುತ್ತದೆ.

**(ಸ)** – ಸಲ್ಲಲ್ಲಾಹು ಅಲೈಹಿ ವಸಲ್ಲಂ ಎಂಬುದರ ಹ್ರಸ್ವ ರೂಪ. ಅಲ್ಲಾಹನ ಇಷ್ಟಾರ್ಶಿವಾದಗಳು ಹಝ್ರತ್ ಪೈಗಂಬರರ ಮೇಲೆ ವರ್ಷಿಸಲಿ ಎಂದಾಗಿದೆ ಇದರ ಅರ್ಥ.

**(ಅ)** – ಅಲೈಹಿಸ್ಸಲಾಂ ಎಂಬುದರ ಹ್ರಸ್ವ ರೂಪ: ಪ್ರವಾದಿಗಳ ಹೆಸರು ಹೇಳಲ್ಪಡುವಾಗ ಮಾಡುವ ಪ್ರಾರ್ಥನೆ. ಅವರ ಮೇಲೆ ಶಾಂತಿ ಇರಲಿ ಎಂದಾಗಿದೆ ಇದರ ಅರ್ಥ.

**(ರ)** – ರಝಿಯಲ್ಲಾಹು ಅನ್‌ಹು ಎಂಬುದರ ಹ್ರಸ್ವ ರೂಪ: ಸಾಮಾನ್ಯವಾಗಿ ಹಝ್ರತ್ ಪೈಗಂಬರರ(ಸ) ಅನುಚರರ ಹೆಸರುಗಳ ಜೊತೆಗೆ ಹೇಳಲಾಗುತ್ತದೆ. ಅಲ್ಲಾಹನು ಅವರ ಮೇಲೆ ಸಂಪ್ರೀತನಾದನು ಎಂದಾಗಿದೆ ಅದರ ಅರ್ಥ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ)**: ವಾಗ್ದತ್ತ ಮಹ್‌ದೀ ಮತ್ತು ಮಸೀಹ್

**ವಾಗ್ದತ್ತ ಮಹ್‌ದೀ ಮತ್ತು ಮಸೀಹ್**: ಇಸ್ಲಾಮಿನ ಅವನತಿಯ ಕಾಲದಲ್ಲಿ ಅದರ ಸುಧಾರಣೆಗಾಗಿ ಆಗಮಿಸುವರು ಎಂದು ಯಾವ ಮಹಾನ್ ವ್ಯಕ್ತಿಯ ಬಗ್ಗೆ ಹಝ್ರತ್ ಪೈಗಂಬರ್(ಸ) ಭವಿಷ್ಯ ನುಡಿದಿದ್ದರೋ ಆ ವ್ಯಕ್ತಿ. ಭವಿಷ್ಯವಾಣಿ ಪ್ರಕಾರ ಭಾರತದ ಖಾದಿಯಾನಿನಲ್ಲಿ ಅವರ ಆಗಮನವಾಯಿತು.

**ಖಾದಿಯಾನ್**: ಪಂಜಾಬ್ ರಾಜ್ಯದ ಗುರುದಾಸಪುರ ಜಿಲ್ಲೆಯಲ್ಲಿರುವ ಒಂದು ಊರು. ವಾಗ್ದತ್ತ ಮಹ್‌ದೀ ಮತ್ತು ಮಸೀಹ್ ಆದ ಹಝ್ರತ್ ಮಿರ್ಝಾ ಗ಼ುಲಾಂ ಅಹ್ಮದ್ ಜನಿಸಿದ ಗ್ರಾಮ.

**ನಊಧುಬಿಲ್ಲಾಹ್:** ನಾನು ಅಲ್ಲಾಹನಿಂದ ಅಭಯವನ್ನು ಯಾಚಿಸುತ್ತೇನೆ ಎಂಬುದಾಗಿದೆ ಇದರ ಅರ್ಥ.

**ರೂಹುಲ್‌ಖುದ್‌ಸ್:** ಪ್ರವಾದಿಗಳ ಬಳಿಗೆ ಅಲ್ಲಾಹನ ಸಂದೇಶದೊಂದಿಗೆ ಅಥವಾ ಪ್ರವಾದಿಗಳಿಗೆ ನೆರವು ನೀಡಲು ಅಲ್ಲಾಹನು ಕಳುಹಿಸುವ ಜಿಬ್ರೀಲ್ ಎಂಬ ಹೆಸರಿನ ದೇವದೂತ.

**ಕಶ್‌ಫ್:** ದಿವ್ಯದರ್ಶನ; ಆಧ್ಯಾತ್ಮಿಕವಾಗಿ ಉನ್ನತ ಸ್ಥಾನದಲ್ಲಿ ಇರುವ ವ್ಯಕ್ತಿಗಳಿಗೆ ಅಲ್ಲಾಹನು ಕೆಲವೊಮ್ಮೆ ಕೆಲವು ದೃಶ್ಯಗಳನ್ನು ತೋರಿಸಿ ಕೊಡುತ್ತಾನೆ. ಅದನ್ನು ಕಶ್‌ಫ್ ಎಂದು ಹೇಳಲಾಗುತ್ತದೆ.

**ಹದೀಸ್:** ಹಝ್ರತ್ ಪೈಗಂಬರ್(ಸ)ರ ನಡೆನುಡಿಗಳು. ಅವುಗಳನ್ನು ಸುಮಾರು ನೂರೈವತ್ತು ವರ್ಷಗಳ ನಂತರ  ಕ್ರೋಢೀಕರಿಸಲಾಗಿತ್ತು. ಆದ್ದರಿಂದ ಅವುಗಳು ಪವಿತ್ರ ಖುರ್‌ಆನಿನಷ್ಟು ವಿಶ್ವಾಸಾರ್ಹವಲ್ಲ.